

ಜನವರಿ ೧೯೭೯
ಬಸವ ಶಕೆ ೮೭೨

ಸಂಪುಟ ೪
ಸಂಚಿಕೆ ೯

ಕಲ್ಯಾಣ ಕಿರಣ





ಪೂಜ್ಯ ಶ್ರೀ ಮಾತಾಜಿಯವರ ಮೇಲೆ ಪುಷ್ಪವೃಷ್ಟಿ
(ಸಾಮೂಹಿಕ ಪೂಜಾ ಕಾರ್ಯಕ್ರಮದಲ್ಲಿ)

ಕಲ್ಯಾಣ ಕಿರಣ

ಸಂಪುಟ ೪ ಜನವರಿ ೧೯೭೪ ಸಂಚಿಕೆ ೯

ಪ್ರಾರ್ಥನೆ

ನುಡಿನೈವೇದ್ಯ

ದೇವದೇವನೆ ದಿವ್ಯಭಾನುವೆ ಪರಮಜ್ಞಾನದ ತೇಜವೇ
ಕಾವುದೆಮ್ಮನು ಕರುಣೆ ನೀಡುತ ಲೋಕಪಾಲಕ ಧೇನುವೆ ॥ಪ॥

ಹೃದಯಮಂದಿರದಲ್ಲಿ ನಿನ್ನಯ ಜ್ಞಾನ ಕಿರಣವು ಬೆಳಗಲಿ
ಮುದದಿ ಅರಳಲಿ ಮನದ ಅಂಬುಜೆ ಭಕ್ತಿ ಸೌರಭ ಸೂಸುತ।
ನಿನ್ನ ಒಲುಮೆಯ ಹೊನಲು ಹರಿಯುತ ಬಾಳ ಬನ್ನವ ಕಳೆಯಲಿ
ಜನನ ಜಂಜಡ ಮರಣ ಭೀತಿಯ ಕಶ್ಮಲವ ತಾ ತೊಳೆಯಲಿ ॥೧॥

ಮಿಥ್ಯಭ್ರಾಂತಿಯ ಸುಖಕೆ ಎಳಸುವ ಮನದ ಮರ್ದನ ಮಾಡು ನೀ
ಸತ್ಯಮಾರ್ಗದಿ ಬಿಡದೆ ನಡೆಯುವ ಆತ್ಮಬಲವ ನೀಡು ನೀ
ಸ್ತುತ್ಯರೀತಿಯ ತತ್ತ್ವನಿಷ್ಠೆಯ ನೀಡು ಎನಗೆ ಸಿಂಧುವೆ
ನಿತ್ಯಗೈಯುವ ತಪ್ಪು ತಡೆಗಳ ಕ್ಷಮಿಸಿ ಪಾಲಿಸು ಬಂಧುವೆ ॥೨॥

ನಿನ್ನ ಚರಣ ಕಮಲದಲ್ಲಿ ದುಂಬಿಯಾಗಿ ಹಾಡುವೆ
ಭಿನ್ನವಾಗಿ ಹರಿಯದಂತಹ ಮನವನೀಯಲು ಬೇಡುವೆ
ಮತಿಯ ಹಂದರದಲ್ಲಿ ಮಂತ್ರದ ಲತೆಯ ನಾನು ಬೆಳೆಸುವೆ
ಸ್ತುತಿಪೆ ನಿನ್ನನು ಒಲಿಮೆ ನೀಡಾ ಸಚ್ಚಿದಾನಂದ ತಂದೆಯೆ ॥೩॥

—ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ

ಮಾಸ ಪತ್ರಿಕೆ

ಜನವರಿ ೧೯೭೯ — ವಾರ್ಷಿಕ ಚಂದಾ ೧೨ ರೂ — ಸಂಪುಟ ೪
ಬಸವಶಕೆ ೮೭೨ — ಆಜೀವ ಸದಸ್ಯತ್ವ ೧೫೧ ರೂ — ಸಂಚಿಕೆ ೯

ಒಳಗೆ ಏನಿದೆ?

ಮುಖಪುಟ: ಚಾಮುಂಡಿ ಬೆಟ್ಟದ ಮೇಲೆ ವಿರಾಜಿಸುತ್ತಿರುವ ಬಯಲ ನಂದಿ

ಕಲ್ಯಾಣ ಕಿರಣ
ಮಾಸಪತ್ರಿಕೆ
ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :
ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ.

* * *

ಪ್ರಕಾಶಕರು :
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನಪಡಿಸುವುದು.

ಕೇಂದ್ರ ಕಾರ್ಯಾಲಯ :
ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ.
ಬೆಂಗಳೂರು-೫೬೦೦೧೦

ಕಲೆ :
ಬಿ. ಪಿ. ಕೃಷ್ಣಯ್ಯ
ಮುದ್ರಣ: ಸೂಪರ್ ಪ್ರಿಂಟರ್ಸ್
ಬೆಂಗಳೂರು-೫೬೦೦೫೩

ಚಂದಾ ವಿವರ

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.
* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.
* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.
* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.
* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.
* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.
* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.
* ಹೊಸ ಚಂದಾದಾರರು ೧೨-೦೦ (ಹನ್ನೆರಡು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ).
* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.
* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.



ಅಂತರರಾಷ್ಟ್ರೀಯ ಮಕ್ಕಳ ವರ್ಷ

"ಪ್ರತಿಯೊಂದು ಮಗುವು ಈ ಭೂಮಿಗೆ ಬರುವಾಗಲೂ ದೇವರು ಇನ್ನೂ ಈ ಕೆಟ್ಟ ಜಗತ್ತಿನ ಬಗ್ಗೆ ಪೂರ್ಣ ನಿರಾಶನಾಗಿಲ್ಲ ಎಂಬ ಭರವಸೆ ನೀಡುತ್ತದೆ" ಎನ್ನುತ್ತಾರೆ, ನೋಬೆಲ್ ಪ್ರಶಸ್ತಿ ವಿಜೇತ ರವೀಂದ್ರನಾಥ ಟಾಗೋರರು. ಬಹುಶಃ ಮಗುವಿನ ಆ ಜನನ-ಜೀವನಗಳಲ್ಲಿ ಅದೆನಿತು ಆಸೆ-ಆಕಾಂಕ್ಷೆ-ಭರವಸೆಗಳನ್ನು ಹೆತ್ತವರು; ಸುತ್ತಲಿನವರೂ ಇರಿಸಿಕೊಂಡಿರುತ್ತಾರೋ! ಅದನ್ನು ಇನ್ನೊಂದೆಡೆ ('ಮಿಣುಕು ಹುಳ' ಎಂಬ ಕೃತಿಯಲ್ಲಿ) ಹೇಳುತ್ತಾರೆ: "ಜೀವನದ ಆಸೆ-ಅಭೀಪ್ಸೆಗಳು ಮಕ್ಕಳ ರೂಪದಲ್ಲಿ ಬರುತ್ತವೆ." ಸೋಫೋಕ್ಲಸ್ ಎಂಬ ತತ್ತ್ವಜ್ಞಾನಿ ತನ್ನ 'ಫಿಯಡ್ರಾ' ಕೃತಿಯಲ್ಲಿ ಹೇಳುತ್ತಾನೆ: "ಸ್ತ್ರೀಯನ್ನು ಜೀವನಕ್ಕೆ ಬಂಧಿಸುವ ಸೂತ್ರ ಮಗುವೊಂದೇ."

ಲೌಕಿಕ ಮತ್ತು ಮಾನವ ಜೀವನದ ಒಂದು ಮಹತ್ವಪೂರ್ಣ ಪ್ರಸಂಗ—ಮಗುವು. ಅದೇ ಮಗುವು ಮುಂದೆ ಬೆಳೆದು, ಬಾಳ್ದ ಬೆಳಕೂ ಆಗಬಹುದಾದ ಚೇತನ. ಇಂಥ ಸುಪ್ತಶಕ್ತಿಗಳ ಕುಂಡವಾದ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಬೇಕಾದ ತತ್ತ್ವಗಳು, ಅವಕಾಶಗಳು, ಆದರ್ಶಗಳು ಎಲ್ಲ ಮಕ್ಕಳಿಗೆ ಸಿಗುವವೇ? ಎಂದು ಪ್ರಶ್ನಿಸಿದರೆ ನಕಾರಾತ್ಮಕ ಉತ್ತರವನ್ನೇ ಕೊಡಬೇಕಾಗಬಹುದು. ಏಕೆಂದರೆ ಅಭಿವೃದ್ಧಿ ಹೊಂದುತ್ತಿರುವ, ಮತ್ತು ಹೊಂದಿದ ಎರಡೂ ದೇಶಗಳಲ್ಲಿ ಮಕ್ಕಳ ಸಂಪೂರ್ಣ ವಿಕಾಸಕ್ಕೆ ಅವಕಾಶವಿಲ್ಲ ಎಂಬುದು ಅಚ್ಚರಿಯ ಸಂಗತಿ. ಇದನ್ನು ಮನಗಂಡೇ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ ೩೧ನೆಯ ಅಧಿವೇಶನದಲ್ಲಿ, ೧೯೭೯ನೇ ವರ್ಷವನ್ನು "ಅಂತರರಾಷ್ಟ್ರೀಯ ಮಕ್ಕಳ ವರ್ಷ"ವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ. ಮತ್ತು ಮಕ್ಕಳ ಡಿಕ್ಲರೇಷನ್ ಆಫ್ ರೈಟ್ಸ್‌ನ ಇಪ್ಪತ್ತನೇ ವಾರ್ಷಿಕೋತ್ಸವವೂ ಇದೇ ವರ್ಷ ಒದಗಿ ಬರುತ್ತಿರುವದೂ ವಿಲಕ್ಷಣವೇ!

ಬರೀ ಉತ್ಸವಗಳನ್ನು, ಹಬ್ಬಗಳನ್ನು ಆಚರಿಸಿದ ಮಾತ್ರಕ್ಕೆ ಧ್ಯೇಯೋದ್ದೇಶ ಸಾಧನೆಯಾಗವು. ಪರಿಸ್ಥಿತಿಯ ಗಂಭೀರ ಸ್ವರೂಪದ ಅರಿವಾಗಬೇಕು; ತಾವು ಕೈಗೊಳ್ಳಬೇಕಾದ ಕರ್ತವ್ಯವನ್ನು ಜನತೆ ಮನಗಾಣಬೇಕು. ಪೂರ್ವದ ರಾಷ್ಟ್ರಗಳ ಸಮಸ್ಯೆ ಒಂದು ತೆರನಾದರೆ ಪಶ್ಚಿಮದ ಸಮಸ್ಯೆ ಬೇರೊಂದು ತೆರ. ವಿಶ್ವ ಆರೋಗ್ಯ ಸಂಸ್ಥೆಯವರು ವಿಶ್ವಮಟ್ಟದ ಒಂದು ಸಮೀಕ್ಷೆ ನಡೆಸಿ ಅದರ ವಿವರಗಳನ್ನು ಪ್ರಕಟಿಸಿದ್ದಾರೆ.

ವಿಶ್ವದಾದ್ಯಂತ ಇರುವ ಮಕ್ಕಳ ಜನಸಂಖ್ಯೆ ಸುಮಾರು ನೂರು ಕೋಟಿ. ಆದರೆ ಮೂರನೆಯ ಎರಡಂಶದಷ್ಟು ಮಕ್ಕಳು ಹಿಂದುಳಿದ ರಾಷ್ಟ್ರಗಳಲ್ಲಿವೆ. ಇಂಥ ಹಿಂದುಳಿದ ದೇಶಗಳ ಮಕ್ಕಳಿಗೆ ಹೊಟ್ಟೆ ತುಂಬ ಮತ್ತು ಸಂಪೂರ್ಣವಾದ ಆಹಾರವೇ ಲಭಿಸುತ್ತಿಲ್ಲ. ಬಹುಪಾಲು ಮಕ್ಕಳು, ಅಂದರೆ ಐದಕ್ಕೆ ಒಂದರಂತೆ ನಾಲ್ಕೈದು ವರ್ಷಕ್ಕೆ ಮರಣವನ್ನಪ್ಪಿ ಫಲಿಸುವ ಮಿಡಿಯು ಕಮರಿದಂತಾಗುತ್ತದೆ. ಆರ್ಥಿಕವಾಗಿ ಹಿಂದುಳಿದ-ಭಾರತದಂಥ ರಾಷ್ಟ್ರಗಳಲ್ಲಿ ಬಹುಪಾಲು ಮಕ್ಕಳಿಗೆ ಹೊಟ್ಟೆ ತುಂಬ ಆಹಾರವಿಲ್ಲ, ನಿಲ್ಲಲು ನೆರಳಿಲ್ಲ, ವೈದ್ಯಕೀಯ ಚಿಕಿತ್ಸೆಯಿಲ್ಲ, ಶಿಕ್ಷಣವಂತೂ ಮುನ್ನವೇ ಇಲ್ಲ. ರಸ್ತೆಯೇ ಆಟದ ಬಯಲು, ಪಾದಚಾರಿಗಳ ಪಥವೇ ಅರಮನೆ. ಕೈಕಾಲು ಸಣ್ಣವಾಗಿ, ಹೊಟ್ಟೆ ಗುಡಾಣದಂತೆ ಉಬ್ಬಿ, ಕಣ್ಣುಗಳು ಆಳಕ್ಕಿಳಿದು ಓಡಾಡುವ ಹಸುಗೂಸುಗಳನ್ನು ನೋಡಿದರಂತೂ ಹೊಟ್ಟೆಯಲ್ಲಿ ಹಾವು ಹರಿದಂತಾಗಿ, ಕಣ್ಣು ತುಂಬಿ, ಇಂಥ ಕತ್ತಲೆಯ ಕಣ್ಣುಗಳು ಹೊಳಪಿನಿಂದ ಬೆಳಗುವುದೆಂತು ಎಂಬ ಸಮಸ್ಯೆ ಎದುರಾಗದಿರದು. ಅಜ್ಞಾನ, ಅವಿದ್ಯೆಯ ತವರಾದ ರಸ್ತೆಬದಿಯ ಸಂಸಾರಿಗಳು ಹೇರಳವಾಗಿ ಮಕ್ಕಳನ್ನು ಪಶುಪಕ್ಷಿಗಳಂತೆ ಹೆರುತ್ತಿದ್ದಾರೆ. ವಿದ್ಯಾವಂತರು ಬದುಕಿನ ಜವಾಬ್ದಾರಿ ಅರಿತ ಕಾರಣ, ಹೊರೆಯಾಗದಷ್ಟು ಹಿತಮಿತವಾಗಿ ಮಕ್ಕಳನ್ನು ಪಡೆಯುತ್ತಾರೆ. ಹೀಗೇ ಆದರೆ ಕೆಲವಾರು ವರ್ಷಗಳಲ್ಲೇ ಅಧಿಕಗೊಳ್ಳುವ, ಬುದ್ಧಿಮಟ್ಟ ಅಲ್ಪವಾಗಿರುವ ಜನರನ್ನು, ಅವರ ಪೀಳಿಗೆಯನ್ನು ಅಭಿವೃದ್ಧಿಸುವದೆಂತು? ಗ್ರಾಮಾಂತರ ಪ್ರದೇಶಗಳಲ್ಲಂತೂ ಹೆತ್ತವರಿಗೆ ಶಿಕ್ಷಣವಿರದು; ಮಕ್ಕಳನ್ನು ಬೆಳೆಸುವ ವೈಜ್ಞಾನಿಕ ಹಿನ್ನೆಲೆ ತಿಳಿಯದು, ಆರ್ಥಿಕ ಪರಿಸ್ಥಿತಿಯೂ ದುರ್ಬಲವಾಗಿರುವುದು.

ಇನ್ನು ನಗರಗಳಿಗೆ ಬಂದರೆ ಇಲ್ಲೊಂದು ಬಗೆಯ ಪರಿಸ್ಥಿತಿ. ಮೂರು-ನಾಲ್ಕನೆ ವರ್ಗಗಳ ಜನರಂತೂ ಮಕ್ಕಳನ್ನು ಹಾದಿಬೀದಿ ಪಾಲು ಮಾಡುವರು. ಅತ್ಯಂತ ಮೇಲ್ವರ್ಗದ ಸಿರಿವಂತರು, ಅಧಿಕಾರಿಗಳು ಪಾಶ್ಚಿಮಾತ್ಯ ಜೀವನ ಪ್ರಭಾವದಿಂದ ತಮ್ಮ ವೈಯಕ್ತಿಕ ಸುಖಭೋಗಗಳಲ್ಲಿ ತನ್ಮಯರಾಗಿ ಮಕ್ಕಳ ಕಡೆ ಗಮನ ಕೊಡರು. ಕೇವಲ ಮಧ್ಯಮ ವರ್ಗದ ಸುಶಿಕ್ಷಿತರು ಮಕ್ಕಳೊಡನೆ ಅತ್ಯಂತ ಆತ್ಮೀಯ ಮತ್ತು ಸರಳ ಸಂಬಂಧವನ್ನು ಉಳಿಸಿಕೊಳ್ಳುವ ಕಾರಣ ಇಂಥವರ ಮಕ್ಕಳೇ ಮಾನಸಿಕವಾಗಿ ತೃಪ್ತರಾಗಿ ಬಾಳುವುದನ್ನು, ಬೆಳೆಯುವುದನ್ನು ಕಾಣುತ್ತೇವೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬಹುಪಾಲು ಮಕ್ಕಳಲ್ಲಿ ಇರುವದು ಅನಾಥ ಪ್ರಜ್ಞೆ; (ಭಾರತದಂಥ ರಾಷ್ಟ್ರದ ನಿರ್ಗತಿಕ ಮಕ್ಕಳಲ್ಲಿ "ಅಭಾವ ಪ್ರಜ್ಞೆ" ಇದ್ದರೆ) ಅಲ್ಲಿಯ

ಸಮಾಜ ರಚನೆ ವಿಕೃತವಾಗಿರುವುದರಿಂದ, ತಾಯಿ-ತಂದೆಯರಲ್ಲಿ ಹಲವು ಬಾರಿ ವಿವಾಹ ವಿಚ್ಛೇದನ ಸಂಭವಿಸುವುದರಿಂದ, ದಾಂಪತ್ಯದ ಪ್ರತಿಫಲವಾದ ಕೂಸುಗಳಲ್ಲಿ ಸಾಮಾನ್ಯ ವಾಗಿ ಆಸಕ್ತಿಯನ್ನು ಉಭಯತರೂ ಕಳೆದುಕೊಳ್ಳುವುದರಿಂದ, ಮಕ್ಕಳು ಕುಟುಂಬದ ಮಮತೆಯ ಆಸ್ತಿಯಾಗದೆ, ಸರ್ಕಾರದ ಅನಿವಾರ್ಯ ಸೊತ್ತಾಗುವರು. ಹೇಗೆ ಆ ದೇಶ ಗಳಲ್ಲಿ Instant Food ತಯಾರಿಸಿಟ್ಟ ದಿಢೀರ್ ಅಡಿಗೆಗಳು ಸಪ್ಪೆ ಮತ್ತು ನೀರಸವೋ ಹಾಗೆ ಮಕ್ಕಳ ಬಾಳೂ ನೀರಸವಾಗುತ್ತಿದೆ. ಭಾರತೀಯ ಕುಟುಂಬಗಳಲ್ಲಿ ಮಕ್ಕಳ ಬಗ್ಗೆ ಒಂದು ಬಗೆಯ Warmth ಬಿಸುಪು ಮನೋಭಾವವುಂಟೋ ಅಲ್ಲಿ ಅದು ಬಹು ಪಾಲು ಕಡಿಮೆ. ಇನ್ನು ಭೋಗಾಸಕ್ತರಾದ, ದೇಹ ಸೌಂದರ್ಯಕ್ಕಾಗಿ ಬಾಯಿಬಿಡುವ ಅನೇಕ ಗಂಡಂದಿರು, ಮಾತೃತ್ವದ ಹೊಣೆಯರಿಯದ ಹೆಂಡಂದಿರು ಒಂದಾಗಿ ಹೆತ್ತ ಕೂಸುಗಳಿಗೆ ಎದೆಹಾಲನ್ನೇ ನೀಡದಿರುವುದರಿಂದ ಮಕ್ಕಳಲ್ಲಿ ಅತೃಪ್ತಿ, ಅನಾಥ ಪ್ರಜ್ಞೆ ಅಧಿಕಗೊಳ್ಳುತ್ತವೆ. ಹೀಗಾಗಿಯೇ ಅಲ್ಲಿ ಅತೃಪ್ತ ಮಕ್ಕಳು ಬಾಲಾಪರಾಧಿಗಳಾಗುವ ದುರ್ಧರತೆಯನ್ನು ಕಾಣುತ್ತೇವೆ. ಕೆಲವು ಹೆಂಗಸರಂತೂ ವಿಪರೀತ ಕುಡಿತ ಮತ್ತು ಧೂಮಪಾನಕ್ಕೆ ಒಳಗಾಗಿ, ಮಕ್ಕಳಿಗೆ ಅನೇಕ ರೋಗಗಳನ್ನು ಬಳುವಳಿಯಾಗಿ ನೀಡು ತ್ತಾರೆ. ಸ್ವಚ್ಛತೆ ಮತ್ತು ಸುವರ್ತನೆಗಳ ಬಗ್ಗೆ ತಮ್ಮದೇ ಆದ ಕಲ್ಪನೆ ಇರಿಸಿಕೊಂಡ ಅವರು ಮಕ್ಕಳನ್ನು ಬಹಳಷ್ಟು ಶಿಕ್ಷಿಸುವುದೂ ಉಂಟು. ಎರಡು ವರ್ಷದ ಒಂದು ಮಗು ಹಾಸಿಗೆಯಲ್ಲಿ ಮೂತ್ರವಿಸರ್ಜನೆ ಮಾಡಿಕೊಂಡಿತೆಂದು ಓರ್ವ ತಾಯಿ ಉರಿಯುವ ಸಿಗರೇಟಿನಿಂದ ಮಗುವಿನ ದೇಹದ ವಿವಿಧ ಭಾಗಗಳನ್ನು ಸುಟ್ಟ ಕಥೆ ಇದೆ. ನಿಸರ್ಗದತ್ತ ಹುಟ್ಟುಗುಣಗಳಲ್ಲಿ ಒಂದಾದ ಮಾತೃವಾತ್ಸಲ್ಯದ ಆಳವನ್ನು ಅರಿಯದೆ ಹೆತ್ತವರು ಭೋಗಾಸಕ್ತರಾಗಿ, 'ಸುಖ ಬೇಕು, ಕಷ್ಟ-ಜವಾಬ್ದಾರಿ ಬೇಡ' ಎಂದಾಗಲೇ ಸಮಸ್ಯೆಗಳು ವರ್ಧಿಸುವವು.

ವಿಶ್ವದಾದ್ಯಂತ ಆಚರಿಸಲಿರುವ "ಅಂತರರಾಷ್ಟ್ರೀಯ ಮಕ್ಕಳ ವರ್ಷ"ದ ಅವಧಿ ಯಲ್ಲಿ ಕೇವಲ ಭಾಷಣ ಬಿಗಿದು ಸೌಂಡ್ ಸಿಸ್ಟಂನವರಿಗೆ, ಸರ್ಕಾರದ ಖರ್ಚುಗಳಲ್ಲಿ ಸಮಾರಂಭ ಮಾಡಿ, ಮೀಟಿಂಗ್ ಮಾಡುವವರಿಗಷ್ಟೇ ಲಾಭಮಾಡದೆ, ಯಾವ ದೇಶದ ಮಕ್ಕಳಲ್ಲಿ ಯಾವಾವ ಸಮಸ್ಯೆಗಳುಂಟು? ಎಂಬುದನ್ನರಿಯಬೇಕು. ಆ ಸಸಿಗಳು ಕಮರಿ ದರೆ ರಾಷ್ಟ್ರಕ್ಕೆ ಆಗುವ ಹಾನಿಯೆಷ್ಟು ಎಂಬ ಬಗ್ಗೆ ತೀವ್ರವಾಗಿ ಗಮನ ಹರಿಸಬೇಕು. ಪೌರ್ವಾತ್ಯ ತಾಯಂದಿರಿಗೆ ವೈಜ್ಞಾನಿಕ ಶಿಕ್ಷಣ, ಪಾಶ್ಚಿಮಾತ್ಯ ತಾಯಂದಿರಿಗೆ ಮಾನವೀಯ ನೈತಿಕ ಶಿಕ್ಷಣ ನೀಡಬೇಕು. ಮನು ಕುಲ ಮತ್ತು ನರನಿರ್ಮಿತ ಆಧುನಿಕ ಜಗತ್ತನ್ನು ಸರ್ವನಾಶ ಮಾಡಬಲ್ಲ ಒಂದು ನ್ಯೂಟ್ರಾನ್ ಬಾಂಬ್ ತಯಾರಿಕೆಗಿಂತಲೂ, ಅದೇ ಹಣದಿಂದ ಲಕ್ಷಾಂತರ ಕಂದಮ್ಮಗಳ ಹಸಿವು ಹಿಂಗಿಸುವುದು ಪವಿತ್ರ ಕಾರ್ಯ ಎಂದರಿಯಬೇಕು. ಭಯಾನಕ ಮಾರಕಾಸ್ತ್ರಗಳನ್ನು ತಯಾರಿಸಲು ವ್ಯಯಿಸುವ ಹಣದ ಬಹುಪಾಲನ್ನು ಜನಾಂಗದ ವಿಕಾಸದ ಕಡೆಗೆ ಹರಿಸಿದರೆ ಮಹೋನ್ನತ ಉಪಕಾರವಾಗು ವುದು. ಪಾಶ್ಚಿಮಾತ್ಯ ಶ್ರೀಮಂತ ರಾಷ್ಟ್ರಗಳು ದಾನ ಮಾಡಿ ಕಳಿಸಿದ ಹಾಲಿನ ಪುಡಿ,

ಸೋಯಾಬೀನ್ ಎಣ್ಣೆ, ಗೋಧಿ ರವೆ-ಹಿಟ್ಟು ಮಾರ್ಕೆಟ್ಟಿಗೆ ಮಾರಾಟಕ್ಕೆ ಹೋಗದೆ ಹಸಿದ ಮಕ್ಕಳ ತುತ್ತಿನ ಚೀಲದೊಳಕ್ಕೆ ಹೋಗುವಂತಾಗಬೇಕು.

ದೈಹಿಕ, ಮಾನಸಿಕ, ಬೌದ್ಧಿಕ, ಅಧ್ಯಾತ್ಮಿಕ ಪಟುತ್ವಗಳೊಡನೆ ಮಕ್ಕಳು ಬಲಿಷ್ಠ ರಾಗಬೇಕು. ನಮ್ಮ ಜಾನಪದ ವಾಗ್ದೇವಿಯೋರ್ವಳು ಹಾಡುವಂತೆ ಮಕ್ಕಳ ಅಳು-ನಗು ಎರಡೂ ಮಧುರವಾಗಬೇಕು.

ಅಳುವ ಕಂದನ ತುಟಿಯು ಹವಳದ ಕುಡಿಯಂಗ
ಕುಡಿಹುಬ್ಬು ಬೇವಿನೆಸಳಂಗ। ಕಣ್ಣೋಟ
ಶಿವನ ಕೈಯಲಗು ಹೊಳೆದಂಗ॥

ಆರೋಗ್ಯಯುಕ್ತ ಕೂಸುಗಳಲ್ಲಿ ಮಾತ್ರ ಇದು ಸಾಧ್ಯ. ಮುಂಜಾವಿನಲ್ಲಿ ಅರಳಿ, ಸೂರ್ಯ ರಶ್ಮಿಗಳಿಂದ ಪುಳಕಿತಗೊಂಡು ನಗುವ ಚೆಂಗುಲಾಬಿಯಂತಹ ಮಕ್ಕಳು ರಾಷ್ಟ್ರದ ಹೆಮ್ಮೆಯ ಆಸ್ತಿಯಲ್ಲವೇ? ದೈಹಿಕ ಆರೋಗ್ಯಕ್ಕಷ್ಟೇ ಗಮನಕೊಡದೆ ಮಕ್ಕಳ ಅಂತ ರಂಗಿಕ ಅಭಿವೃದ್ಧಿಗೂ ಜನನಿ ಆದ್ಯತೆ ನೀಡಬೇಕು. ಅದನ್ನು ಎಂಥಾ ಹರಕೆ ರೂಪದಲ್ಲಿ ಜಾನಪದ ವಾಗ್ದೇವಿ ಹಾಡುತ್ತಾಳೆ ನೋಡಿ:

ಆಚಾರಕ್ಕರಸಾಗು ನೀತಿಗೆ ವಿಭುವಾಗು
ಮಾತಿನಲ್ಲಿ ಚೂಡಾಮಣಿಯಾಗು, ನನ ಕಂದ
ಜ್ಯೋತಿಯಾಗು ನೀ ಜಗಕ್ಕೆಲ್ಲ॥

ಇಂಥ ಆಚಾರ ಸಾಮ್ರಾಜ್ಯಕ್ಕೆ ಅಧಿಪತಿಯಾಗುವ, ನೀತಿರಂಗದಲ್ಲಿ ಒಡೆಯನಾಗುವ, ವಾಕ್ಚಾತುರ್ಯದಿಂದ ಮನ-ಮನೆ-ರಾಷ್ಟ್ರಗಳನ್ನು ನಗಿಸುವ, ನಲಿಸುವ, ಎಚ್ಚರಿಸುವ ಚೇತನಿಸುವ ಶಿವಕವಿಯನ್ನು, ಎಲ್ಲರನ್ನು ಎಲ್ಲವನ್ನು ಬೆಳಗುವ ಜ್ಯೋತಿಗಳಂತಹ ಮಕ್ಕಳನ್ನು ಕೊಡುವ ಹೊಣೆ ಹೆತ್ತವರ ಮೇಲಿದೆ, ಸುತ್ತಣ ಸಮಾಜದ ಮೇಲಿದೆ.

ಆದ್ದರಿಂದ "ಅಂತರರಾಷ್ಟ್ರೀಯ ಮಕ್ಕಳ ವರ್ಷ" ಹಿರಿಯರಲ್ಲಿ ಅರಿವನ್ನು ತರುವಂತಾ ಗಲಿ, ಅಳುವ ಹಸುಳೆಗಳನ್ನು ನಗಿಸುವಂತಾಗಲಿ, ಬಾಡುವ ಮೊಗ್ಗೆಗಳನ್ನು ಅರಳಿಸು ವಂತಾಗಲಿ; ಈ ದಿಶೆಯಲ್ಲಿ ಕೈಗೊಳ್ಳುವ ಕಾರ್ಯಕ್ರಮದಲ್ಲಿ ನಾವೆಲ್ಲ ಸಹಕರಿಸೋಣ ವೆಂದು ಭರವಸೆ ನೀಡಿ, ನೂತನ ವರ್ಷದ ಶುಭವನ್ನು ಹಾರೈಸುವೆ.

—ಮಾತೆ ಮಹಾದೇವಿ

★ ★ ★



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಕಲ್ಯಾಣವೆಂಬುದಿನ್ನಾರಿಗೂ ಹೊಗಬಾರದು, ಅಸಾಧ್ಯವಯ್ಯಾ !
ಆಸೆ-ಆಮಿಷಗಳನಳಿದವರಿಗಲ್ಲದೆ ಕಲ್ಯಾಣದತ್ತ ಲಡಿ ಇಡಬಾರದು
ಒಳಹೊರಗು ಶುದ್ಧವಾದವರಿಗಲ್ಲದೆ ಕಲ್ಯಾಣವ ಹೊಗಬಾರದು
ನಾನೆಂಬುದ ಹರಿದವರಿಗಲ್ಲದೆ ಕಲ್ಯಾಣವ ಹೊಗಬಾರದು
ಒಳಗೆ ತಿಳಿದು ಚನ್ನಮಲ್ಲಿಕಾರ್ಜುನಂಗೊಲಿದು
ಉಭಯ ಲಜ್ಜೆಯಳಿದೆನಾಗಿ
ಕಲ್ಯಾಣವ ಕಂಡು ನಮೋನಮೋ ಎನುತಿರ್ದೆನು.

ಅಕ್ಕಮಹಾದೇವಿಯ ಈ ವಚನ ಅತ್ಯಂತ ಅಂತರ್ಗರ್ಭಿತ, ಸುಂದರ ಮತ್ತು ತಾತ್ತ್ವಿಕ ವಚನ. ಕಲ್ಯಾಣವನ್ನು ಪ್ರವೇಶಿಸಬೇಕಾದರೆ ಯಾವ ಯಾವ ಗುಣಗಳು ಇರಬೇಕೆಂಬುದನ್ನು ಅಕ್ಕಮಹಾದೇವಿ ವಿವರಿಸುತ್ತಾಳೆ. 'ಕಲ್ಯಾಣ ರಾಜ್ಯ' ಎಂಬುದಕ್ಕೆ ಅನೇಕ ಅರ್ಥಗಳು ಇರುವವು. ೧. ಕಲ್ಯಾಣವೆಂದರೆ 'ಶಿವ', 'ಮಂಗಲ', 'ಪರಮಾತ್ಮ', ೨. ದೈವೀರಾಜ್ಯ (Kingdom of God). ೩. ಮರ್ತ್ಯಲೋಕದ ಕೈಲಾಸವೆನಿಸಿದ 'ಕಲ್ಯಾಣ' ನಗರ. ೪. ಬಸವಣ್ಣನವರು ನಿರ್ಮಿಸಿದ ಅನುಭವ ಮಂಟಪ. ೫. ಬಸವಣ್ಣನವರು ನಿರ್ಮಾಣ ಮಾಡಿದ ಜಾತಿವರ್ಣವರ್ಗರಹಿತವಾದ ದೈವೀ ಒಕ್ಕೂಟ.

ಈ ಎಲ್ಲವನ್ನು ಪ್ರವೇಶಿಸಬೇಕಾದರೆ ಕೆಲವಾದರೂ ಸದ್ಗುಣಗಳಿರಬೇಕು. ಇಲ್ಲವಾದರೆ ಕಲ್ಯಾಣವನ್ನು ಪ್ರವೇಶಿಸಲು ಅಸಾಧ್ಯ. ಆಸೆ-ಆಮಿಷಗಳನ್ನು ಅಳಿದವರಿಗೆ ಸಾಧ್ಯ; ಅಳಿಯದವರಿಗೆ ಅಸಾಧ್ಯ. ಸಮಷ್ಟಿಯ ಉದ್ಧಾರದ ಆಸೆಯಾದರೆ ಅದಿನ್ನೂ ಬಂಧನವಲ್ಲ. ವ್ಯಕ್ತಿಗತ ಆಸೆಗಳು ಮಹಾಬಂಧನ. ಆಸೆಗಳು ದೈವೀಮುಖವಾಗಬೇಕು; ವಿಶಾಲಗೊಳ್ಳಬೇಕು. ಗಂಗಾಜಲವು ಗಟಾರದಲ್ಲಿ ಹರಿದಾಗ ಯಾರೂ ಅದನ್ನು ಉಪಯೋಗಿಸ

ದಂತೆ; ಅದುವೇ ದೈವೀ ವಿಗ್ರಹದ ಮೇಲೆ ಹರಿದಾಗ ದಿವ್ಯತೀರ್ಥವಾಗುವಂತೆ, ಪೂಜ್ಯವಾಗುವಂತೆ, ಆಸೆಗಳು ಸ್ವಾರ್ಥದ ಚರಂಡಿಯಲ್ಲಿ ಹರಿಯದೆ ತ್ಯಾಗದ ಕಾಲುವೆ ಮುಖಾಂತರ ಹರಿದಾಗ ಶಿವಪ್ರೇಮ ಪ್ರಾಪ್ತಿ. ಒಳಹೊರಗು ಶುದ್ಧವಾಗಬೇಕು. ಹೊರಗು ಎಂದರೆ ಬಹಿರಂಗದ ಸದಾಚಾರ, ಚಾರಿತ್ರ್ಯ, ನಡೆ, ಅರ್ಥದ ಗಳಿಕೆ—ಈ ಎಲ್ಲವೂ. ಒಳಗು—ಎಂದರೆ ಅಂತರಂಗದ ಸುವಿಚಾರ, ಸದ್ಭಾವ, ನುಡಿ, ಮನಸ್ಸ್ಥಿತಿ. ಎರಡೂ ಶುದ್ಧವಾಗಬೇಕು. "ಕಾಯಕವೆಂದು ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡಿ ಕೀರ್ತಿ ಹೊಂದುವೆನೆಂಬುದು ಹಾಸ್ಯಾಸ್ಪದ." ಆದ್ದರಿಂದ ಗಳಿಕೆಯ ವಿಧಾನ, ಬಳಕೆಯ ವಿಧಾನ ಎರಡೂ ಮಹತ್ವಪೂರ್ಣ.

"ನಾನೆಂಬ ಅಹಂ ಅಳಿಯಬೇಕು." ಮಾಡುವ ಯಾವ ಮಾಟದಲ್ಲಿಯೂ ಅಹಂ ಪ್ರಜ್ಞೆ ಉಳಿಯಬಾರದು. ಒಂದು ಗಾಜು ಪಾರದರ್ಶಕವಾಗಿರುವದು. ಅದರ ಹಿಂಬದಿಯಲ್ಲಿ ಕೆಂಪು ಪಾದರಸವನ್ನು ಸವರುತ್ತಿದ್ದಂತೆಯೇ ಅಪಾರದರ್ಶಕ ಕನ್ನಡಿಯಾಗುತ್ತದೆ. ಮೊದಲು ಹೊರಗಿನ ಪ್ರಪಂಚವೆಲ್ಲ ಕಾಣುತ್ತಿದ್ದುದು, ಈಗ ಅದೇನೂ ಕಾಣದೆ ಕೇವಲ ತನ್ನ ಮುಖವಷ್ಟೇ ಕಾಣುತ್ತದೆ. ಹಾಗೆಯೇ 'ಅಹಂ' ಪ್ರಜ್ಞೆಯ ಲೇಪನವಾಗುತ್ತಿದ್ದಂತೆಯೇ ಲೋಕದ ಹಿತವೇ ಕಾಣದೆ ತನ್ನ ಹಿತ ಮಾತ್ರವೇ ಕಾಣಬರುತ್ತದೆ.

"ಒಳಗೆ ತಿಳಿದು ಚನ್ನಮಲ್ಲಿಕಾರ್ಜುನನಿಗೆ ಒಲಿಯಬೇಕು." 'ತಿಳಿ' ಎಂದರೆ ತಿಳಿಯಾಗು ಎಂದೂ ಅರ್ಥ, ತಿಳಿ ಎಂದರೆ 'ಅರಿ' ಎಂದೂ ಅರ್ಥ. ಒಳಗೆ ಅರಿತಾಗ, ತಿಳಿದಾಗ ಮಾತ್ರ ಅಂತರಂಗವೆಲ್ಲ ನಿರ್ಮಲ ಮತ್ತು ಪ್ರಕಾಶಮಯ. ಅಲ್ಲಿ ತಿಳಿಯದ ಹೊರತು ದೇವನ ಪ್ರತಿಬಿಂಬ ಮೂಡದು; ಅಲ್ಲಿ ಅರಿಯದ ಹೊರತು ಅಂತರಂಗ-ಬಹಿರಂಗಗಳೆಲ್ಲ ಅಂಧಕಾರಮಯ. ಬಗ್ಗಡ ಕಳೆದುಕೊಂಡು 'ತಿಳಿ'ಯಾಗಿ, ಕತ್ತಲೆ ಹಳಚಿಕೊಂಡು ಬೆಳಗಾಗಿ ಚನ್ನಮಲ್ಲಿಕಾರ್ಜುನನಿಗೊಲಿದು ಉಭಯ ಲಜ್ಜೆ ಅಳಿಯಬೇಕು.

ಪುರುಷನಿಗೆ ಸ್ವಾಭಾವಿಕವಾಗಿರುವ ಮೇಲರಿಮೆ ಅಥವಾ ಅಹಂ ಆಗಲಿ, ಸ್ತ್ರೀಯಲ್ಲಿ ಸ್ವಾಭಾವಿಕವಾಗಿರುವ ಕೀಳರಿಮೆ ಮತ್ತು ಲಜ್ಜೆಯಾಗಲಿ ಅಳಿಯದ ಹೊರತು ದೇವನು ಒಲಿಯ. ಪುರುಷ ಸಾಧಕ ತನ್ನ ಗಡಸುತನ ತೊರೆದು ಶರಣಸತಿಯಾಗಿ, ಶಿವವಧುವಾಗಬೇಕು. ಸ್ತ್ರೀ ಸಾಧಕಿ ತನ್ನ ದೌರ್ಬಲ್ಯ ಮೆಟ್ಟಿ 'ಶರಣವೀರ'ಳಾಗಿ, ಶಿವವಧುವಾಗಬೇಕು. ದೇಹಪ್ರಜ್ಞೆ ತೊಲಗಿದಾಗ ಶಿವಪ್ರಜ್ಞೆಯ ಆವಿರ್ಭಾವ.

ಇಂಥ ಎಲ್ಲ ಶಿವಗುಣಗಳು ಅಂಗವಿಸಿದಾಗ, ಅಳವಟ್ಟಾಗ ಪರಮಾತ್ಮನ ಸಂಪೂರ್ಣ ಒಲಿಮೆ. ಸರ್ವಾಂಗಲಿಂಗತ್ವವೇ ಕಲ್ಯಾಣ ರಾಜ್ಯಕ್ಕೆ ಅರ್ಹತಾ ಪತ್ರ.

★ ★ ★

ಇಪ್ಪತ್ತು ದೇವಮಂದಿರಗಳಲಿರುವ ಒಡವೆಗಳ ಸೌಂದರ್ಯ ಒಂದು ರೂಪಿನಲ್ಲಿದೆ.
—ಜಾನ್ ರಸ್ಕಿನ್

ರೂಪಿನಲ್ಲಿ ಜಗತ್ತೆ ನಗುತ್ತದೆ. —ಆರ್. ಡಬ್ಲೂ. ಎಮರ್ಸನ್

ಸಮಸ್ಯೆ? ಸಮಾಧಾನ!

—ಧೂಳಪ್ಪ, ಮಸಳಿ, ಉಕ್ಕಲಿ.

❋ ಗ್ರಾಮಸೇವಕನ ಕೆಲಸ ರೈತರಿಗೆ ಸಹಾಯವಾಗುವದು ; ಇದನೆಲ್ಲ ಬಿಟ್ಟು ಪುರಾಣ ಹೇಳತೊಡಗಿದರೆ ಇದು ಸರಿಯಾದುದೆ?

* ಮನುಷ್ಯನಿಗೆ ಕಾಯಕ ಮೊದಲು; ಸೇವೆ ಅನಂತರ. ಕಾಯಕ ಮುಖಾಂತರವೇ ಸೇವೆಯಾಗುತ್ತಿದ್ದರೆ ಅದು ಕ್ಷಮ್ಯ. ಕಾಯಕ ಮರೆತು ಊರ ಉಪಕಾರವನ್ನು ಮಾಡಿದರೂ ಅಕ್ಷಮ್ಯ. ಕಾಯಕದೊಡನೆ ಮಾಡಿದರೆ ಚಿನ್ನಕ್ಕೆ ಸುವಾಸನೆ ಬಂದಂತೆ.

—ವಿದ್ಯಾಸಾಗರ ಎಸ್. ಸೀಳಿನ, ಚಿಂಚೋಳಿ.

❋ ಸ್ವಾಮಿಗಳು, ಆಚಾರ್ಯರು, ಸಾಧುಗಳು ಮತ್ತು ಇಂಥವರು ಭಿಕ್ಷುಕರಲ್ಲವೆ ?

* ದುಡಿಯಲಾರದೆ ಸೋಂಬೇರಿತನದಿಂದ ಬೇಡಿದರೆ ಅದು ಭಿಕ್ಷುಕತನ; ಅಥವಾ ಕಾಯಕ ಬಿಟ್ಟು ಹೆಂಡತಿ-ಮಕ್ಕಳ ಉದರಪೋಷಣೆಗಾಗಿ ಬೇಡಿದರೆ ಅದು ಯಾಚನೆ. ಉದರಪೋಷಣೆಗಾಗಿ ಅಲ್ಲದೆ, ಹೆಂಡತಿ ಮಕ್ಕಳ ಸಂರಕ್ಷಣೆಗೂ ಅಲ್ಲದೆ ಸಮಾಜ ಶ್ರೇಯಸ್ಸಿಗಾಗಿ ಜೋಳಿಗೆ ಹಾಕಿದರೆ ಅದು ಭಿಕ್ಷುಕತನವಲ್ಲ; ತ್ಯಾಗ—ನಿರ್ಮೋಹ.

—ಇಷ್ಟಲಿಂಗವೆಂದರೇನು? ಎಂದು ಓರ್ವರು ಪ್ರಶ್ನಿಸಿದಾಗ 'ನಾನು ಲಿಂಗವೇ ದೇವರು, ದೇವರೇ ಲಿಂಗ' ಎಂದೆ ; ಈ ಉತ್ತರ ಸರಿಯೆ ?

ಯಾವ ಪರಾತ್ಪರ ವಸ್ತುವಿನ ಗರ್ಭದಲ್ಲಿ ಸಚರಾಚರ ಸೃಷ್ಟಿಯೆಲ್ಲ ಹೊರಹೊಮ್ಮಿ, ಲೀಲೆಯಾಡಿ, ಯಾವುದರ ಗರ್ಭದಲ್ಲಿ ಅಡಗುವುದೋ ಆ ಮಹಾಗರ್ಭವೇ ಲಿಂಗ, ಅದುವೇ ದೇವರು. ಆದರೆ ಇಷ್ಟಲಿಂಗ ದೇವನ ಪ್ರತೀಕ, ಕುರುಹು, ಅವನನ್ನೊಲಿಸುವ ಸಾಧನ. ನಿರಾಕಾರ ದೇವನು ಸಾಕಾರ ಬ್ರಹ್ಮಾಂಡದಲ್ಲಿ ವ್ಯಕ್ತನಾಗುವ ಕಾರಣ ವಿಶ್ವದಾಕಾರದಲ್ಲಿ ಅವನನ್ನು ಸಾಕಾರಿಸಿ ಪೂಜಿಸಲು ಬಸವಣ್ಣನವರು ಬೋಧಿಸಿದರು.

—ಜಗದೀಶ ಜಿ. ಆರ್. ಎರೇಕೊಪ್ಪ

ಕ್ಷುದ್ರದೇವತೆಗಳನ್ನು, ಭೂತ—ಅಮ್ಮಗಳನ್ನು ಮುಂತಾದುವನ್ನು ಪೂಜಿಸದಿರಿ

ಎಂದರೇ 'ನೀವು ಧರ್ಮಲಂಡರು. ನಿಮ್ಮಂತಹ ನಾಸ್ತಿಕರಿಂದಲೇ ದೇಶವು ಹಾಳಾಗಿರುವುದು' ಎಂದೆನ್ನುತ್ತಾರೆ. ಸರಿಯೆ? ಹಾಗಾದರೆ ಧರ್ಮವೆಂದರೇನು ?

* ಅರ್ಥರಹಿತ ಕ್ಷುದ್ರದೇವತೆಗಳನ್ನು, ಉಗ್ರ ಶಕ್ತಿಗಳನ್ನು ಪೂಜಿಸಿಯೇ ಭಾರತೀಯ ಜನರ ತಲೆ ಜಡ್ಡುಗಟ್ಟಿರುವುದು. ನೀವು ನಿರ್ಭಯರಾಗಿ ಹೇಳಿರಿ. ನಾವು ಸೃಷ್ಟಿಸಿದ ದೇವರುಗಳನ್ನು ಪೂಜಿಸದೆ ನಮ್ಮನ್ನು ಸೃಷ್ಟಿಸಿದ ಏಕೈಕ ದೇವರನ್ನು ಪೂಜಿಸಬೇಕು. ಅದುವೇ ಧರ್ಮ.

❋ ಪ್ರವಚನ ಮಾಡಿ, ಜ್ಞಾನಬೋಧೆ ನೀಡುವ ಸ್ವಾಮಿಗಳಿಗಿಂತಲೂ ಮಂತ್ರ-ತಂತ್ರ, ತಾಯಿತ-ಕರಿದಾರ ಕಟ್ಟುವವರಿಗೇ ಬೆಲೆ ಜಾಸ್ತಿ. ಆದ್ದರಿಂದ ಪ್ರವಚನಕಾರರೂ ಆ ವಿದ್ಯೆ ಕಲಿತರೆ ಒಳಿತಲ್ಲವೇ ?

* ಮರುಳು ಜನರ ಮನ್ನಣೆಗಿಂತ ವಿವೇಕಿಗಳ ಮೆಚ್ಚುಗೆ ಬಹಳ ಮುಖ್ಯ. ಅಜ್ಞಾನಿಗಳಾದ ಜನರ ಒಲವನ್ನನುಸರಿಸಿ ಅವರಿಗೆ ಬೇಕಾದ ವಿದ್ಯೆಯನ್ನು ಪ್ರವಚನಕಾರ ಕಲಿಯಬಾರದು ; ಅವರಿಗೆ ಕಲ್ಯಾಣವಾಗುವ ಸುಜ್ಞಾನವನ್ನು ಬೋಧಿಸಿ ಅರಿವಿನೆಡೆಗೆ ಕರೆದೊಯ್ಯುವ ವಿದ್ಯೆ ಕಲಿಯಬೇಕು.

—ಧೂಳಪ್ಪ ಮಸಳಿ ಉಕ್ಕಲಿ.

❋ ಮಗು ಚಿಕ್ಕದಿದ್ದಾಗ ಅವನ್ನು ದೇವರ ಸಮಾನ ಎನ್ನುವರು. ದೊಡ್ಡವನಾದಾಗ ಅನ್ನರು. ಯಾಕೆ?

* ಕಾಮ ಕ್ರೋಧ ಮೋಹಾದಿ ದುಂಬಿಗಳು ಮಗುವಿನ ಮನೋಸುಮವನ್ನು ಎಂಜಲು ಮಾಡಿರುವುದಿಲ್ಲ. ಇನ್ನೂ ಪರಿಶುದ್ಧತೆಯ ಪುತ್ಥಳಿಯಾಗಿ ಇದಿರುತ್ತದೆ. ದೊಡ್ಡವನಾದಾಗ ವಿಕಾರಗಳ ಆಗರವಾಗಿರುತ್ತದೆ.

—ಭಾರತೀದೇವಿ, ಶಿವಮೊಗ್ಗ.

❋ ಮನುಷ್ಯನಿಗೆ ಹೊಟ್ಟೆ ಇಲ್ಲದಿದ್ದರೆ ಏನಾಗುತ್ತಿತ್ತು ?

* ಇಷ್ಟೆಲ್ಲ ಹೋರಾಟ, ದ್ವೇಷ-ಅಸೂಯೆ ಮುಂತಾದ ಕಹಿಭಾವನೆಗಳಿಲ್ಲದೆ ಜಗತ್ತು ಪ್ರಶಾಂತವಾಗಿರುತ್ತಿತ್ತು. ಹೋರಾಟವಿಲ್ಲದ್ದರಿಂದ ನೀರಸವೂ ಆಗುತ್ತಿತ್ತೇನೋ.

—ಎನ್. ಮಂಜುನಾಥ ಪ್ರಸಾದ, ಹೆಚ್. ಎಂ. ಟಿ. ಬೆಂಗಳೂರು.

❋ ನಮ್ಮ ಉಪಾಧ್ಯಾಯರು ಒಮ್ಮೆ ಪಾಠವನ್ನು ಮಾಡುತ್ತಿದ್ದಾಗ ಕಾಕಿ, ಖಾದಿ, ಮತ್ತು ಕಾವಿಗಳನ್ನು ನಂಬದಿರಿ ಎಂದರು. ನಾನು ನಂಬಲೋ ಬಿಡಲೋ ?

* ಇಂಥ ಸಾಮಾನ್ಯೀಕರಣ ಮಾಡಿದ ಹೇಳಿಕೆಗಳು ಬಹಳ ಅಪಾಯಕಾರಿ. ಯಾರೋ ಒಬ್ಬ ವೈದ್ಯ ವಂಚಕ ಎಂದರೆ ವೈದ್ಯವೃತ್ತಿಯನ್ನೇ ಅಲ್ಲಗಳೆಯುವುದು ; ಓರ್ವ ಪತ್ರಿಕೋದ್ಯಮಿ ನಿಂದಕನೆಂದರೆ ಪತ್ರಿಕೋದ್ಯಮವನ್ನೇ ದೂರುವುದು ಸರಿಯಲ್ಲ. ಒಬ್ಬ ಇಂಜಿನಿಯರ್ ಮೋಸಗಾರನೆಂದರೆ ಆ ವೃತ್ತಿಯನ್ನೇ ಹಳಿಯುವುದು ಸಲ್ಲದು. ನಿಸ್ವಾರ್ಥ-ತ್ಯಾಗಗಳ ಪ್ರತಿರೂಪವಾಗಿರುವ ಕಾಕಿ, ಖಾದಿ, ಕಾವಿಧಾರಿಗಳು ಎಷ್ಟು ಜನರಿಲ್ಲ. ಆದ್ದರಿಂದ ಒಟ್ಟಾರೆ ಯಾವೊಂದು ವರ್ಗವನ್ನೇ ನಂಬುವುದಕ್ಕಿಂತಲೂ, ಅಥವಾ ತಿರಸ್ಕರಿಸುವುದಕ್ಕಿಂತಲೂ ಯೋಗ್ಯರನ್ನು ಅನುಸರಿಸಬೇಕು, ಅಯೋಗ್ಯರನ್ನು ತಿರಸ್ಕರಿಸಬೇಕು.

—ಎ. ಹನುಮಂತರಾಯ, ಕುಂಟೆ ಸಿರಸಿ.

※ ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಜೀವನ ಸುಖವಾಗಿ ಸಾಗಬೇಕಾದರೆ ಎಷ್ಟು ಬಗೆಯ ಗುರುಗಳ ಆವಶ್ಯಕತೆ ಇರುತ್ತದೆ.

* ಶಿಕ್ಷಾಗುರು, ದೀಕ್ಷಾಗುರು ಮತ್ತು ಮೋಕ್ಷಗುರು ಎಂದು ಮೂರು ಬಗೆ. ಶಿಕ್ಷಣವನ್ನು (ಅಧ್ಯಾತ್ಮಿಕವಾಗಿಯೇ ಇರಲಿ, ಲೌಕಿಕವಾಗಿಯೇ) ಕೊಡುವವ ಶಿಕ್ಷಾಗುರು. ಅಧ್ಯಾತ್ಮ ದೀಕ್ಷೆ ಕೊಡುವವನು ದೀಕ್ಷಾಗುರು. ಮೋಕ್ಷವಿದ್ಯೆಯನ್ನು ತಿಳಿಸುವವನು ಮೋಕ್ಷಗುರು.

※ ಒಂದು ಸರಕಾರಿ ಟ್ರೇನಿಂಗ್ ಶಾಲೆಯಲ್ಲಿ ಯಾವುದೇ ಧರ್ಮಲಾಂಛನಗಳನ್ನು ಧರಿಸಬಾರದು ಎಂದು ಶಿಕ್ಷಕರು ಹೇಳಿದರೆ ಅದರಂತೆ ನಡೆಯಬೇಕೆ? ನಡೆಯದಿದ್ದರೆ ಗುರುಗಳ ಮಾತನ್ನು ಉಲ್ಲಂಘಿಸಿದಂತೆ ಆಗದೆ?

* ಧರ್ಮವು ತನ್ನ ವೈಯಕ್ತಿಕ ಬದುಕಿಗೆ ಸಂಬಂಧಿಸಿದ್ದು, ಬೇಡವೆಂದು ಹೇಳಲು ಶಾಲೆಯ ಶಿಕ್ಷಕರಿಗೆ ಅಧಿಕಾರವಿಲ್ಲ. 'ಜಾತ್ಯತೀತ ರಾಷ್ಟ್ರ'ವಾದ ಭಾರತದಲ್ಲಿ ಯಾವಧರ್ಮಕ್ಕೂ ಅಡ್ಡಿ ಉಂಟುಮಾಡಬಾರದು' ಎನ್ನುತ್ತದೆ ನಮ್ಮ ಸಂವಿಧಾನ.

—ಶಿವಲಿಂಗದೇವರು, ಭಾಲ್ಕಿ ಕ್ಯಾಂಪ್, ಎಕಲಾರ.

ಅನೇಕ ಮಠಾಧೀಶರು ಗದ್ದುಗೆ ಪೂಜೆ-ಇತ್ಯಾದಿ ಪ್ರೋತ್ಸಾಹಿಸುತ್ತಾರೆ. ಬಸವಣ್ಣನವರ ಪೂಜೆ ಮಾಡಲು ತಿಳಿಸಿದರೆ ವಿರೋಧಿಸುತ್ತಾರೆ. ಕಾರಣ ಅವರೇನು?

* ಸ್ವಪ್ರತಿಷ್ಠೆ ಬೆಳೆಸಲು, ಉಪಪಂಥಗಳನ್ನು ಸೃಷ್ಟಿಸಲು ಇಚ್ಛಿಸುವ ಬಹುಪಾಲು ಮಠಾಧೀಶರು, ಸಮಾಜದ ಭಕ್ತಿ-ಶ್ರದ್ಧೆ ಏಕಮುಖವಾಗಿ (ಧರ್ಮಗುರು ಬಸವಣ್ಣನವರ ಕಡೆಗೆ) ಹರಿಯಲು ಅವಕಾಶ ನೀಡರು.

ಬಸವ ಗಂಗೋತ್ರಿಗೆ ಆಧ್ಯಾತ್ಮ ಪ್ರವಾಸ

—ಶುಭಾಮಣಿ, ಮೈಸೂರು

[ಮೈಸೂರಿನ ಸದ್ಭಕ್ತರನ್ನು ಕರೆದುಕೊಂಡು ೨೪-೧೧-೧೯೭೮ರಂದು ನಾಲ್ಕು ಬಸ್ಸುಗಳಲ್ಲಿ ಬಸವಗಂಗೋತ್ರಿಗೆ ಹೊರಡಲಾಯಿತು. ಅದರಿಂದ ಸ್ಫೂರ್ತಿಗೊಂಡು ಇನ್ನೂ ಅನೇಕರು ಪ್ರವಾಸ ಹೊರಡುವ ಅಪೇಕ್ಷೆ ವ್ಯಕ್ತಪಡಿಸಿದಾಗ ದಿ. ೨೫-೧೧-೭೮ರ ಭಾನುವಾರ ಎರಡನೇ ಬಾರಿ ಹೊರಡಲಾಯಿತು. ಬಸ್ಸುಗಳ ವ್ಯವಸ್ಥೆಗೆ ಪೂರ್ಣ ಅನುಕೂಲವಾಗದ್ದರಿಂದ ಎರಡೇ ಬಸ್ ಹೊರಟವು. ಈ ಎರಡನೆ ತಂಡದ ಪ್ರವಾಸಿಗರಾದ ಶುಭಾಮಣಿ ತಮ್ಮ ಅನುಭವವನ್ನು ಸಂಕ್ಷಿಪ್ತವಾಗಿ ಬರೆದಿದ್ದಾರೆ.]

ಆಧ್ಯಾತ್ಮ ಪ್ರವಾಸ

ಪರಮ ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರು, ಬೆಂಗಳೂರು-ಮೈಸೂರು ರಸ್ತೆಯಲ್ಲಿ 'ಬಸವ ಗಂಗೋತ್ರಿ'ಯನ್ನು ಉದ್ಘಾಟನೆ ಮಾಡಿ ಹದಿನೈದು ದಿನಗಳಾದ ನಂತರ ಮೈಸೂರಿನಲ್ಲಿ ಪ್ರವಚನ ಮಾಡಲು ಆಗಮಿಸಿದರು. ಅವರು ತಮ್ಮ ಪ್ರವಚನಗಳ ನಡುವೆ ತಾವು ಮುಂದೆ ನಿರ್ಮಾಣ ಮಾಡಲಿರುವ ಬೃಹದ್ ಬಸವ ಗಂಗೋತ್ರಿಯ ರೂಪುರೇಷೆಗಳನ್ನು ವಿವರಿಸುತ್ತಾ ಇರುವಾಗ ನಮ್ಮೆಲ್ಲರಿಗೂ ಅದನ್ನು ನೋಡಬೇಕೆಂಬ ಉತ್ಕಟ ಹಂಬಲ ಉಂಟಾಯಿತು. ನಮ್ಮೆಲ್ಲರ ಆಶಯದ ಮೇರೆಗೆ ಪೂಜ್ಯ ಮಾತಾಜಿಯವರು ಅಲ್ಲಿಗೆ ಪ್ರವಾಸವನ್ನು ಏರ್ಪಡಿಸಿದರು. ಬಾಲ್ಯಾವಸ್ಥೆಯಲ್ಲಿರುವ ಬಸವ ಗಂಗೋತ್ರಿಯನ್ನು ನೋಡಿ ಮತ್ತೆ ಹಲವಾರು ವರ್ಷಗಳ ನಂತರ ಆಗುವ ಬೆಳವಣಿಗೆ ಹಾಗೂ ಸಾಧನೆಯನ್ನು ಹೋಲಿಸಲಿ ಎಂದೂ ಅವರ ಉದ್ದೇಶವಾಗಿತ್ತು.

ನಾವೆಲ್ಲರೂ ಬಹಳ ಉತ್ಸಾಹದಿಂದ ೩ನೇ ತಾರೀಖು, ಡಿಸೆಂಬರ್ ೧೯೭೮ರಂದು ಪ್ರಾತಃಕಾಲ ಹೊರಡಲು ಸಜ್ಜಾಗಿ ನಿಂತೆವು. ಪೂಜ್ಯ ಮಾತಾಜಿಯವರ ಕಾರು ಹಾಗೂ ಎರಡು ಬಸ್ಸುಗಳು ವಿಭೂತಿಲೇಪಿತವಾಗಿ, 'ಜಯಗುರು ಬಸವೇಶ ಹರಹರ ಮಹಾದೇವ' ಎಂಬ ಜಯಘೋಷ ಗೈಯುತ್ತ ನಮ್ಮನ್ನೆಲ್ಲಾ ಅದರಲ್ಲಿ ಅಡಗಿಸಿಕೊಂಡು ಹೊರಟವು. ನಮ್ಮೆಲ್ಲರಿಗೂ ದಾರಿದೀಪದಂತೆ ಮಾರ್ಗದರ್ಶನ ಮಾಡುತ್ತಾ ಪೂಜ್ಯ ಮಾತಾಜಿಯವರ ಕಾರು ಹೊರಟಿತು. ನಮ್ಮ ಎರಡೂ ಬಸ್ಸುಗಳು ಪೂಜ್ಯ ಮಾತಾಜಿಯವರ ಕಾರನ್ನು ಹಿಂಬಾಲಿಸಿದವು.

ಮಾರ್ಗದಲ್ಲಿ ಹೋಗುವಾಗ ಎರಡೂ ಬದಿಗಳ ಹೊಲಗದ್ದೆಗಳಲ್ಲಿ ಬೆಳೆಗಳು ಕೊಯ್ಲಿಗೆ ಸಿದ್ಧವಾಗಿ ನಿಂತಿದ್ದವು. ರೈತರೆಲ್ಲಾ ಬೆಳೆಗಳನ್ನು ಕಿತ್ತು ಕಂತೆಗಳನ್ನು ಕಟ್ಟುವ ಕಾಯಕದಲ್ಲಿ ನಿರತರಾಗಿದ್ದರು. ಹೊಂಬಣ್ಣದುಡುಗೆ ಉಟ್ಟ ಪ್ರಕೃತಿಮಾತೆಯ ಸೊಬಗನ್ನು ಸವಿಯುತ್ತಾ ನಾವು ಸಾಗುತ್ತಿರುವಾಗ ಪೂಜ್ಯ ಮಾತಾಜಿಯವರು ನಮ್ಮ ಎರಡೂ ಬಸ್ಸುಗಳು ಸರಿಯಾಗಿ [ಎಲ್ಲೂ ಕೆಟ್ಟು ನಿಲ್ಲದೆ] ಬರುತ್ತಿದೆಯೋ ಇಲ್ಲವೊ ಎಂದು ನೋಡಲು ತಮ್ಮ ಕಾರನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿಕೊಂಡಿದ್ದರು. ಅವರ ಸಮಾನ ಭಾವ, ಎಲ್ಲರ ಬಗ್ಗೆ ಕಾಳಜಿ, ಆತಂಕ, ಪ್ರೇಮ ಮಮತೆ ನಮ್ಮೆಲ್ಲರನ್ನೂ ಮೂಕರಾಗಿ ಮಾಡಿತು. ಅವರ ಪ್ರತಿಯೊಂದು ನಡೆನುಡಿ ಹಾಗೂ ಅವರೊಡನೆ ಕಳೆದ ಪ್ರತಿ ಗಳಿಗೆಗಳೂ ನಮಗೆ ಅನುಕರಣೀಯವಾಗಿರುತ್ತಿದ್ದವು. "ಬಲ್ಲವರೊಡನಾಟ ಬೆಲ್ಲವನು ಮೆದ್ದಂತೆ...." ಎಂಬ ನಾಣ್ನುಡಿಯ ಸತ್ಯವು ನನ್ನ ಅನುಭವಕ್ಕೆ ಬಂದಿತು.

ನಮ್ಮ ಬಸ್ಸುಗಳು ಬಹಳ ವೇಗದಿಂದ ಸಾಗುತ್ತಿದ್ದವು. ಇದ್ದಕ್ಕಿದ್ದ ಹಾಗೆ "ಎಚ್ಚರಿಕೆ, ಮುಂದೆ ಕಿರಿದಾದ ಸೇತುವೆ ಇದೆ" ಎಂಬ ಫಲಕ ಕಂಡಿತು. ಕೂಡಲೇ ಚಾಲಕನು ವೇಗವನ್ನು ಕಡಿಮೆ ಮಾಡಿದ. ಆಗ ನನ್ನ ಮನಸ್ಸಿಗೆ ಮಾನವನೂ ಸಹ ಪಾಪ-ಪುಣ್ಯಗಳ ಅರಿವು ಇಲ್ಲದೆ, ಹಿಂದು ಮುಂದು ನೋಡದೆ ಸಂಸಾರ ಪಥದಲ್ಲಿ ನುಗ್ಗುತ್ತಿರುತ್ತಾನೆ. ಆಗ ಎಚ್ಚರಿಕೆ ಫಲಕದ ಹಾಗೆ ಗುರುಗಳು ಬಂದು "ಮಗೂ, ನೀನು ಧರ್ಮ-ಕರ್ಮಗಳ ವಿವೇಚನೆಯಿಂದ ಎಚ್ಚರಿಕೆಯಿಂದ ಸಾಗಬೇಕಪ್ಪಾ, ಇಲ್ಲದಿದ್ದರೆ ಅಪಘಾತಗಳು ಸಂಭವಿಸಬಹುದು" ಎಂದು ಎಚ್ಚರಿಕೆ ಕೊಡುತ್ತಾರೆ.

ಮಹಾದ್ವಾರದ ಬಳಿಗೆ ೧೧-೩೦ರ ಸುಮಾರಿಗೆ ಬಂದು ನಿಂತು, 'ಬಸವ ಗಂಗೋತ್ರಿ'ಯ ಫಲಕವನ್ನು ನೋಡಿದ ಕೂಡಲೇ ನನ್ನ ಮೈ ಪುಳಕಗೊಂಡಿತು. 'ಮುಂದೆ ಅತ್ಯಂತ ಹಿರಿದಾದ ಅಧ್ಯಾತ್ಮ ವಿಶ್ವವಿದ್ಯಾಲಯ, ಆಧುನಿಕ ಅನುಭವ ಮಂಟಪ ಆಗುವ ಸ್ಥಳಕ್ಕೆ ಹೋಗುತ್ತಿರುವೆನಲ್ಲಾ ಎಂದು ಅತ್ಯಂತ ಹರ್ಷದಿಂದ ಹಿಗ್ಗಿದೆ. ಇಂತಹ ದಿವ್ಯವಾದ ಜಾಗವನ್ನು ನೋಡಲು ಅವಕಾಶಮಾಡಿಕೊಟ್ಟ ಬಸವ ತಂದೆಗೆ ನನ್ನ ಅನಂತ ನಮನಗಳನ್ನು ಅರ್ಪಿಸುತ್ತಾ ಬಸವ ಗಂಗೋತ್ರಿಯ ಒಳಗೆ ಬಂದೆ. ಸುತ್ತಮುತ್ತ ಇರುವ ಪರಿಸರ, ವಾತಾವರಣವನ್ನು ನೋಡಿ ನನ್ನ ಮನಸ್ಸಿನಲ್ಲಿ ಆದ ಆನಂದವನ್ನು ಹೇಗೆ ವರ್ಣಿಸಲಿ? ಪ್ರಕೃತಿಮಾತೆಯ ಮಮತೆಯ ಮಡಿಲಲ್ಲಿ ಮಲಗಿದಂತೆ, ಬೀಸುವ ತಂಗಾಳಿ ತೊಟ್ಟಿಲು ತೂಗಿ, ರೊಯ್ಯೆಂದು ಜೋಗುಳ ಹಾಡಿದಂತೆ ಆಯಿತು. ನಾವೆಲ್ಲರೂ ಕೈಕಾಲು ತೊಳೆದುಕೊಂಡು ಪ್ರಾರ್ಥನಾ ಮಂದಿರವನ್ನು ಪ್ರವೇಶಿಸಿದೆವು. ಅದು ಮೊದಲು, ಅಶೋಕ್ ಕುಮಾರರ ತೋಟವಾಗಿದ್ದಾಗ Go down ಆಗಿತ್ತಂತೆ. ಅದನ್ನು ಮಾತಾಜಿಯವರು Go up ಆಗಲಿ ಎಂದು ಪ್ರಾರ್ಥನಾ ಮಂದಿರ ಮಾಡಿದರಂತೆ. ನಾವೆಲ್ಲರೂ ಅಲ್ಲಿ ಪ್ರಾರ್ಥನೆ ಮಾಡಿ ಪೂಜ್ಯ ಮಾತಾಜಿಯವರ ಆಶೀರ್ವಾದಗಳನ್ನು ಹೊತ್ತು ಬಸವ ಗಂಗೋತ್ರಿಯ ಆವರಣವನ್ನು ನೋಡಲು ಹೊರಟೆವು.

೩೩. ಎಕರೆಯ ವಿಸ್ತಾರವಾದ ಆ ಆವರಣದಲ್ಲಿ ಇರುವ ಎತ್ತರವಾದ ದಿಬ್ಬದ ಮೇಲೆ

ನಿಂತು ನೋಡಿದಾಗ ನಿಸರ್ಗವು ರಮಣೀಯವಾಗಿ ಕಾಣುತ್ತಿತ್ತು. ಅದರ ನಡುವೆ ಹರಿಯುವ ಜೀವನದಿಯಾದ 'ಬಸವಗಂಗಾ' ಪರಿಸರದ ರಮ್ಯತೆಯನ್ನು ಇಮ್ಮಡಿಸಿದೆ. ಆ ಸುಂದರ ಪ್ರಕೃತಿಯ ನೆಲೆಯಲ್ಲಿ ಪೂಜ್ಯ ಮಾತಾಜಿಯವರ ಯೋಜನೆಗಳಾದ ಉದ್ಯಾನವನ, ವೃದ್ಧಾಶ್ರಮ, ಶಾಲೆ ಮುಂತಾದವುಗಳೆಲ್ಲಾ ರೂಪಿತಗೊಂಡಾಗ ಕಾಣುವ ದೃಶ್ಯ ಅದೆಷ್ಟು ಭವ್ಯ ಮತ್ತು ರಮ್ಯ! ಬಸವ ತಂದೆಯ ಅನುಗ್ರಹದಿಂದ ಆದಷ್ಟು ಬೇಗ ಆ ಕ್ಷಣ ಬರಲಿ ಎಂದು ಹಾರೈಸುತ್ತಾ ನಾವೆಲ್ಲರೂ ಆ ಪ್ರಕೃತಿಯ ಮಡಿಲಲ್ಲಿ ದಟ್ಟವಾಗಿ ಬೆಳೆದ ಹುಣಿಸೆಮರಗಳ ಅಡಿಯಲ್ಲಿ ಕುಳಿತು ವನಭೋಜನ ಮಾಡಿದೆವು. ಅಲ್ಲಿ ಅನೇಕ ಜಾತಿ ಮತ ಧರ್ಮದವರು ಇದ್ದರೂ ಸಹ ನಾವೆಲ್ಲರೂ ವಿಶ್ವಕುಟುಂಬಿಗಳ ಹಾಗೆ, ಪ್ರಕೃತಿಮಾತೆಯ ಮಕ್ಕಳಾಗಿ ಆಶ್ರಮದ ಪ್ರಸಾದವನ್ನು ಸವಿದೆವು. ಆ ವನಭೋಜನವು ವಿಶ್ವಗುರು ಬಸವಣ್ಣನವರು ಸಮತಾವಾದಕ್ಕೆ ಸಹಾಯಕವಾಗಲೆಂದು ಅನುಷ್ಠಾನಕ್ಕೆ ತಂದ ಸಹಪಂಕ್ತಿ ಭೋಜನದ ನೆನಪು ತಂದಿತು.

ನಂತರ ನಾವೆಲ್ಲರೂ ಸುಮಾರು ೩-೦೦ ಘಂಟೆಗೆ ಬಸವ ಗಂಗೋತ್ರಿಯ ಪ್ರಶಾಂತ ಆವರಣವನ್ನು ಬಿಡಲಾರದ ಮನಸ್ಸಿನಿಂದ ಬಿಟ್ಟು ಬಸ್ಸಿನಲ್ಲಿ ಕುಳಿತು ರಾಜಾಜಿನಗರದಲ್ಲಿ ಇರುವ ಬಸವ ಮಂಟಪಕ್ಕೆ ಬಂದೆವು. ಹೊರನೋಟಕ್ಕೆ ಕಟ್ಟಡ ಬಹಳ ಭವ್ಯವಾಗಿ ಕಾಣುತ್ತಿತ್ತು. ಮಾತ್ರವಲ್ಲ ಒಳಗೆ ಕಾಲಿಟ್ಟ ಕೂಡಲೇ ನಮಗೆಲ್ಲಾ ಯಾವುದೋ ದೈವೀರಾಜ್ಯವನ್ನು ಪ್ರವೇಶಿಸಿದ ಹಾಗೆ ಭಾಸವಾಯಿತು. ಅದರೊಳಗೆ ಬಾಗಿಲೆದುರಿಗೇ ವಿಶ್ವಗುರು ಬಸವಣ್ಣನವರ ವರ್ಣಚಿತ್ರವನ್ನು ನೋಡಿದೆವು. ಆ ಭಾವಚಿತ್ರವನ್ನು ನೋಡಿದಾಗ ನನಗೆ "ನಾನು ಮಾಡಿದ ಉತ್ಕ್ರಾಂತಿಯ ಜ್ಯೋತಿ ಮತ್ತೆ ಎಂದು ಪ್ರಜ್ವಲಿಸುವುದೊ?" ಎಂಬ ಕಳಕಳಿಯಿಂದ ತುಂಬಿದೆ ಎಂದು ನನ್ನ ಮನಸ್ಸಿಗೆ ಭಾಸವಾಯಿತು. ಇದು ಕೇವಲ ನನ್ನ ಮನಸ್ಸಿನ ಭಾವನೆಯೊ ಏನೊ ಗೊತ್ತಿಲ್ಲ. ಮಂಟಪದ ಒಳಗೆ ಎತ್ತೆತ್ತ ನೋಡಿದಡತ್ತತ್ತ ಬಸವಣ್ಣನವರ ದಿವ್ಯವಾಣಿ ಮತ್ತು ದಿವ್ಯ ಸಂದೇಶಗಳನ್ನು ಹೊತ್ತ ಸುಂದರವಾದ ಫಲಕಗಳು, ಅವರ ಜೀವನಕ್ಕೆ ಸಂಬಂಧಿಸಿದ ವರ್ಣ ಚಿತ್ರಗಳು ಆ ಮಂಟಪಕ್ಕೆ ಸೊಬಗನ್ನು ಹೆಚ್ಚಿಸಿದ್ದವು. ಇವೆಲ್ಲಕ್ಕೆ ಕಿರೀಟವಿಟ್ಟಂತೆ ಇರುವುದೇ ಪೂಜಾಕೋಣೆ. ಅಲ್ಲಿಗೆ ಹೋದರೆ ಸಾಕು ಎಂತಹ ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡುವ ವಾತಾವರಣ ಇದೆ. ಬಸವ ಮಂಟಪದಲ್ಲಿ ಪ್ರಾರ್ಥನೆ ಮಾಡಿ ಬಸವ ಮಂಟಪಕ್ಕೆ ವಿದಾಯ ಹೇಳಿ ೪ ಗಂಟೆಗೆ ಮೈಸೂರಿಗೆ ವಾಪಸ್ಸು ಹೊರಟೆವು. ಬರುವಾಗ ಪ್ರಾರ್ಥನೆ ಮತ್ತು ವಿಶ್ವಕಲ್ಯಾಣ ಗೀತೆಗಳನ್ನು ಹಾಡುತ್ತಾ ಮೈಸೂರನ್ನು ತಲುಪಿದೆವು.

ಈ ಪ್ರವಾಸವು ನನ್ನ ಜೀವನದಲ್ಲಿ ಸದಾ ಹಸಿರಾಗಿರುವ ಒಂದು ಘಟನೆ. ಅನೇಕ ವರ್ಷಗಳು ಕಳೆದ ನಂತರ ಚೆನ್ನಾಗಿ ಬೆಳೆದು ತಾರುಣ್ಯಾವಸ್ಥೆಗೆ ಬಂದ ಬಸವ ಗಂಗೋತ್ರಿಯನ್ನು ನೋಡಲು ಬಸವ ತಂದೆಯು ಆಯುಷ್ಯವನ್ನು ಅನುಗ್ರಹಿಸಲಿ ಎಂದು ಬೇಡುತ್ತಾ ನನ್ನ ಈ ಪ್ರವಾಸ ಕಥನವನ್ನು ಮುಗಿಸುತ್ತೇನೆ.

★ ★ ★

ಬಸವಣ್ಣನವರ ವಚನಗಳಲ್ಲಿ ಪ್ರಾಣಿರೂಪಕ*

ಸುಜನಾ

ಅಂತರಂಗಜಗತ್ತು ಬಾಹ್ಯಜಗತ್ತಿಗಿಂತಲೂ ಜಟಿಲ, ವಿಚಿತ್ರ ಹಾಗೂ ಅಗ್ರಾಹ್ಯ, ಅಪ್ರಮೇಯ. ವ್ಯಕ್ತಿವ್ಯಕ್ತಿಗೂ ಅಂತಹ ಒಂದೊಂದು ಜಗತ್ತಿರುವುದರಿಂದ ಅದರ ಜಟಿಲತೆ, ಅಪ್ರಮೇಯತೆ ಅಗ್ರಾಹ್ಯತೆಗಳು ನೂರ್ಮಡಿಯಾಗಿವೆ. ಇಂತಹ ಲೋಕವನ್ನು ಬಾಹ್ಯಲೋಕಕ್ಕೆ ಪರಿಚಯ ಮಾಡಿಕೊಡುವುದಾಗಲಿ ಅಥವಾ ಅವೆರಡರ ಸಾಮರಸ್ಯವನ್ನು ಕಂಡುಕೊಳ್ಳುವುದಾಗಲಿ ಕಷ್ಟಸಾಧ್ಯವಾದ ಕೆಲಸ. ಹೀಗಿರುವಾಗ ಆ ಅದೃಶ್ಯ ಲೋಕದ ಸ್ವರೂಪದ ಆಲೋಕನಕ್ಕೆ ಈ ದೃಶ್ಯಲೋಕದ ನೂರಾರು ರೂಪಗಳು 'ರೂಪಕ ಗವಾಕ್ಷ'ವಾಗುತ್ತವೆ. ಅನುಭವವು ತೀವ್ರವಾದಂತೆಲ್ಲ ಅಂತರಂಗ ಜಗತ್ತು ಹೆಚ್ಚು ಶ್ರೀಮಂತವೂ ನಿಗೂಢತರವೂ ಆಗುವುದರಿಂದ ಅಭಿವ್ಯಕ್ತಿಯ ಸಾಧನಗಳಾದ ಬಾಹ್ಯ ಜಗತ್ತಿನ ರೂಪಸಾಮಗ್ರಿಗಳು ವಿಪುಲವಾಗುತ್ತ ಹೋಗುತ್ತವೆ. ಆಗ ಯಾವುದು ಅಭಿವ್ಯಕ್ತಿಯ ಪ್ರಕಾರವಾಗಬಲ್ಲದು ಯಾವುದು ಆಗದು ಎಂದು ಹೇಳುವುದೇ ಕಷ್ಟವಾಗುತ್ತದೆ. ದೇವತೆಗಳಿಂದ ಹಿಡಿದು ದಾನವ, ಮಾನವ, ಪಶು, ಪ್ರಾಣಿಗಳ ತನಕ, ಭೂಮದಿಂದ ಹಿಡಿದು ಕ್ಷುದ್ರದ ತನಕ ಎಲ್ಲವೂ ಅಂತರಂಗದ ಅನುಭವಾಭಿವ್ಯಕ್ತಿಯ ಸಾಧನವಾಗುತ್ತವೆ.

ತೀವ್ರಾನುಭವಶೀಲರೂ, ಮಹಾಸಾಧಕರೂ ಆದ ಬಸವಣ್ಣನವರ ವಚನಗಳಲ್ಲಿ ಅವರ ಅಂತರಂಗದ ಬೆಳವಣಿಗೆಯ ನೂರು ಸ್ಥಿತಿಗಳನ್ನು, ನಡಗೆಯ ನೂರು ಗತಿಗಳನ್ನು ಪ್ರತಿಮಿಸುವ ಸಹಸ್ರವಿಧ ರೂಪಕಗಳನ್ನು ಕಾಣುತ್ತೇವೆ. ಹೀಗೆ ಅತ್ಯಂತ ಶಕ್ತಿಯುತವಾಗಿರುವ ಜ್ವಲಂತವಾಗಿರುವ ಅವರ ವಚನಗಳಲ್ಲಿ ಪ್ರಾಣಿರೂಪಕಗಳು ಹೇಗೆ, ಎಂತು ಬಂದಿವೆ ಎಂಬುದನ್ನು ನೋಡಬಹುದು.

ಇಂದ್ರಿಯಪರಿಮಿತವಾದ ಹಾಗೂ ಪರಿವೃತವಾದ ಚೇತನಕ್ಕೆ ಬದುಕಿನಲ್ಲಿ ಅಂತಹ ಯಾವ ಘನವಾದ ಒಳತೋಟಿಯಾಗಲಿ ಇರುವುದಿಲ್ಲ. ಇಂದ್ರಿಯವಿಮುಖವಾದ ಸೂಕ್ಷ್ಮ ಚೇತನಕ್ಕೆ ಈ ಒಳತೋಟಿ ತೀವ್ರತರವೂ ತೀಕ್ಷ್ಣತರವೂ ಆಗುತ್ತದೆ. ಅಂದಿನತನಕ

* ಇಂಗ್ಲಿಷಿನ 'Image' ಎನ್ನುವ ಮಾತಿಗೆ ಸಮಾನಾರ್ಥವುಳ್ಳ ಮಾತಾಗಿ ಇದನ್ನು ಇಲ್ಲಿ ಬಳಸಿಕೊಂಡಿದೆ. ಇದನ್ನೇ ಕುರಿತು ಬೇರೆಡೆ ದೀರ್ಘವಾಗಿ ಚರ್ಚಿಸಲಿರುವುದರಿಂದ ಇಲ್ಲಿ ಇದರ ಅರ್ಥ ವಿವರಣೆಯನ್ನು ಒಂದು ಮಾತಿನಲ್ಲಿ ಮಾತ್ರ ಹೇಳಲು ಪ್ರಯತ್ನಿಸಬಹುದು. ರೂಪಕ ಎಂದರೆ 'ಶಬ್ದ ಚಿತ್ರ' (Word picture) ಮಾತಿನ ಮೂಲಕವಾಗಿಯೆ ಒಂದು ಚಿತ್ರವನ್ನು ಬರೆಯುವುದು.

ಮಧುರವಾಗಿರುವ ಮೃದುರಾಗಭಾವಗಳೆಲ್ಲ ಆಗ ಕೆರಳಿದ ತೃಷಿತ ಮೃಗಾಲಯದಂತಾಗುತ್ತವೆ. ಅಂತರಂಗದ ತುಮುಲದ ಆ ಘಟ್ಟದಲ್ಲಿ ತಿರ್ಯಙ್‌ಮಾನವಸತ್ವಗಳ ಸಂಘರ್ಷಣೆಯೆ ಪ್ರಧಾನವಾಗಿರುವುದರಿಂದ ಅಂದಿನ ಚಿತ್ತಸ್ಥಿತಿಯನ್ನು ಪ್ರಾಣಿರೂಪಕಗಳಲ್ಲಲ್ಲದೆ ಮತ್ತಾವ ವಿಧಾನದಿಂದಲೂ ಅಭಿವ್ಯಕ್ತಗೊಳಿಸುವುದು ದುಸ್ಸಾಧ್ಯವಾಗುತ್ತದೆ. ಈ ದೃಷ್ಟಿಯಲ್ಲಿ ಬಸವಣ್ಣನವರ ವಚನಗಳಲ್ಲಿ ಕಾಣಬರುವ ಪ್ರಾಣಿರೂಪಕಗಳನ್ನು ವಿಶ್ಲೇಷಿಸಿದರೆ ಎರಡು ಮೂರು ಬಗೆಯ ರಸಪ್ರಯೋಜನವಾಗುತ್ತದೆ. ಒಂದು, ಅವರ ಚಿತ್ತಸ್ಥಿತಿಯ ಅನುಭವ. ಮತ್ತೊಂದು, ಆ ಚಿತ್ರಗಳು ಕೊಡುವ ರಸಾನಂದ.

ಬಸವಣ್ಣನವರ ವಚನಗಳಲ್ಲಿ ಹತ್ತಾರು ಪ್ರಾಣಿಗಳ ರೂಪಕಗಳನ್ನು ಕಾಣುತ್ತೇವೆ. ಒಂದೇ ಪ್ರಾಣಿಯ ಚಿತ್ರವು ಮತ್ತೆ ಮತ್ತೆ, ಆದರೆ ಭಿನ್ನಭಿನ್ನವಾದ ಭಾವಕ್ಕೆ ಪ್ರತೀಕವಾಗಿ ಬರುವುದನ್ನೂ ಕಾಣುತ್ತೇವೆ. ಒಮ್ಮೊಮ್ಮೆ ಸಾಧಾರಣ ಸಾದೃಶ್ಯವಾಗಿ ಬಂದರೆ ಮತ್ತೊಮ್ಮೆ ಯಾವುದೊ ಭಾವಸಂಕೇತವಾಗಿ ಬರುತ್ತದೆ. ಇಲ್ಲಿ ಅವುಗಳ ಶ್ರೇಣಿಯನ್ನು, ಆ ಶ್ರೇಣಿಯ ಸೌಂದರ್ಯವನ್ನೂ ಕಾಣುತ್ತೇವೆ. ಈಗ ಮೊದಲು ನಾಯಿಯ ಚಿತ್ರ ಹೇಗೆ ಹತ್ತಾರು ಬಗೆಯ ರೂಪಕವಾಗಿ ಬಂದಿದೆ ಎಂಬುದನ್ನು ನೋಡಬಹುದು.

ಈಶ್ವರಸೃಷ್ಟವಾದ ಈ ಲೋಕದಲ್ಲಿ ಇದ್ದೂ ನಾವು ಅವನನ್ನಲ್ಲದೆ ಶಿವನಲ್ಲದ ಅನ್ಯವನ್ನು ನೆನೆಯುತ್ತೇವೆ; ಅಷ್ಟೇ ಅಲ್ಲ ಅವನನ್ನೇ ಬಯ್ಯುತ್ತೇವೆ. ಈ ವಿಚಿತ್ರ ಸ್ವಭಾವವನ್ನು ಕಂಡಾಗ ಅಣ್ಣನವರು,

> "ತುಡುಗುಣಿ ನಾಯ ಹಿಡಿತಂದು ಸಾಕಿದರೆ
> ತನ್ನೊಡೆಯಂಗೆ ಬೊಗಳುವಂತೆ ಕಾಣಾ"

ಎಂದು ನುಡಿಯುತ್ತಾರೆ. ಇಲ್ಲಿ ಅಭಿವ್ಯಕ್ತಿ ನಿಜಕ್ಕೂ ಶಕ್ತಿಯುತವಾಗಿಯೇ ಇದೆ. ಪ್ರೀತಿಯಿಂದ ಸಾಕಿದರೂ ಹಿಡಿದುತಂದ ತುಡುಗುಣಿ ನಾಯಿ ತನ್ನ ಬೊಗಳುವ ಸ್ವಭಾವವನ್ನು ಕಳೆದುಕೊಳ್ಳಲಾರದು. ಬೊಗಳುವುದೆ ಅದಮೇಲೆ ಯಾರಾದರೇನಂತೆ? ಬೀದಿ ಹೋಕನಾದರೇನು, ಮನೆಯಾತ ಯಜಮಾನನಾದರೇನು? "ನೆಕ್ಕುವ ನಾಯಿಗೆ ಲಿಂಗವೇನು ಪಾಣಿಬಟ್ಟಲೇನು?" ಎನ್ನುವಂತೆ! ಹಾಗೆಯೆ ನಾಯಿಯ ಮತ್ತೊಂದು ಗುಣವನ್ನು ಈ ವಚನದಲ್ಲಿ ಬಳಸಿಕೊಂಡಿದ್ದಾರೆ:

> "ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ."

ವಾಸನೆಯನ್ನರಸುತ್ತ ರುಚಿಯನ್ನು ತನ್ನ ತೆಳುನಾಲಗೆಯಲ್ಲಿ ನೆಕ್ಕುತ್ತಾ ಹೋಗುವ ನಾಯಿ ಸದಸದ್ ವಿವೇಚನೆಯನ್ನು ಪಡೆದಿರುತ್ತದೆಂದು ಹೇಳಲಾಗುವುದಿಲ್ಲ. ರುಚಿಯಾದರೆ ಸರಿ, ಎಂತಹದಾದರು ವಾಸಿಯೆ; ತುಪ್ಪವಾದರೆ ಬಿಡುತ್ತದೆಯೆ? ಆ ತುಪ್ಪದ ಸವಿಗಾಗಿ ಅಲಗಿನ ತುದಿಯನ್ನಾದರೂ ನೆಕ್ಕಿ ನೋಡಿಯೇ ಬಿಡುತ್ತದೆ. ಪರಿಣಾಮ ಅದಕ್ಕೇನು ಗೊತ್ತು? ಇಂತಹ ಗುಣ ರೋಚಿಕಜೀವಿಗಳದು. ದಿನದ ಸುಖಕ್ಕೆ ಯುಗದ ಸುಖವನ್ನು

ಬಲಿ ಕೊಡುವ, ಸುಖಸಿಕ್ತವಾದ ದ್ದಾರುಣತೆಯನ್ನು ಅಪ್ಪುವ ಭವವಶಿಯಾದ ಮಾನವನನ್ನು ವರ್ಣಿಸಬೇಕಾದರೆ ಇಂತಹ ಈ ನಾಯಿಯ ಚಿತ್ರ ಪರಿಣಾಮಕಾರಿ.

ಅಮೇಧ್ಯವನ್ನು ಅರಸಿಕೊಂಡು ಹೋಗುವ ನಾಯಿಗೆ ನಾರಿವಾಣ ರುಚಿಸುವುದು ಕಷ್ಟ. ಅದು ಅದರ ಹಲ್ಲಿಗೆ ಖಾದ್ಯವೂ ಅಲ್ಲ. ದುರ್ಲಭವಾದ ಭಗವದನುರಾಗವನ್ನು ತಿರಸ್ಕರಿಸಿ ಸುಲಭ ಸಮ್ಮೋಹಕವಾದ ಭವದ ಅನುರಾಗವನ್ನು ಅರಸಿಹೋಗುವ ಮನುಷ್ಯನ ನಾಯಿ ಮನಸ್ಸನ್ನು ಮತ್ತೊಂದೆಡೆ ವರ್ಣಿಸುತ್ತಾರೆ.

> "ಎನ್ನ ಮನವು ನಿಧಾನವನೊಲ್ಲದೆ ಜಲಗ ಮಚ್ಚಿತ್ತು ನೋಡಾ!
> ನಾಯಿಗೆ ನಾರಿವಾಣವಕ್ಕುವುದೆ? ಕೂಡಲಸಂಗಮದೇವಾ!"

ನೆಲದಮರೆಯ ನಿಧಾನದಂತೆ ನಮ್ಮೊಳಗೆ ಅಡಗಿರುವ 'ಆಗಲೆ ನಿಕ್ಷಿಪ್ತವಾಗಿರುವ' ಶಿವನನ್ನು ತಡಕಿ ಕಾಣುವುದು ಕಷ್ಟಸಾಧ್ಯವಾದ ಸಾಧನೆ. ಆ ನಿಧಾನ ಸಂಪಾದನೆಗೆ ಶಕ್ತಿ ಸಾಮರ್ಥ್ಯ ಪುಣ್ಯ ಬೇಕಲ್ಲ. ನೆಲವನ್ನು ಅಗೆದರೆ ಸಾಲದು, ಕಣ್ಣಿಗೆ ಅಂಜನ ಅಚ್ಚಿಕೊಂಡಿರಬೇಕು, ಕೈಯಲ್ಲಿ ದೀಪವಿರಬೇಕು. ಆದರೆ ಲೋಕಸುಖಕ್ಕೆ ಈ ಯಾವ ಕರ ಕಷ್ಟವೂ ಇಲ್ಲ. ಅದ್ದರಿಂದಲೆ ಸಾಧಾರಣ ಜೀವ ನಾಯಂತೆ ತೆಂಗಿನಕಾಯನ್ನು ಬಿಟ್ಟು ತನ್ನ ಉಣಿಸನ್ನೆ ಅರಸುತ್ತ ಹೋಗುತ್ತೆ!

ಲಿಂಗವನ್ನು ಮೆಚ್ಚಿಯೂ, ಜಂಗಮಪ್ರಸಾದವನ್ನು ತಿನ್ನುವವರನ್ನು ನೋಡಿ ನಗುವವರನ್ನು ಖಂಡಿಸುವಾಗ ಆಡುವ ಒಂದು ಮಾತು ಬಹು ಶಕ್ತಿಯುತವಾಗಿದೆ.

> "ಸೂಳೆಗೆ ಮೆಚ್ಚಿ ಸೂಳೆಯ ಬಂಟರೆಂಜಲ ತಿಂಬುದೀ ಲೋಕ
> ಅಡಗ ಮೆಚ್ಚಿ ಸೊಣಗನ ಎಂಜಲ ತಿಂಬುದೀ ಲೋಕ!
> ಲಿಂಗವ ಮೆಚ್ಚಿ ಜಂಗಮಪ್ರಸಾದವ ಕೊಂಬರ ನೋಡಿ ನಗುವವರ
> ಕುಂಭೀಪಾತಕ ನಾಯಕ ನರಕದಲ್ಲಿಕ್ಕುವ—"

ರುಚಿಲೋಲ ಮನಸ್ಸು ವಿಷಯಲೋಲುಪ ಜಿಹ್ವೆ ನಾಯ ಎಂಜಲನ್ನು, ಸೂಳೆಯ ಬಂಟರ ಎಂಜಲನ್ನು ತಿನ್ನುವುದಕ್ಕೂ ಪ್ರೀತಿಸುತ್ತದೆ. ಆದರೆ ಲಿಂಗಮಾರ್ಗದರ್ಶಿಯಾದವನ ಪ್ರಸಾದವನ್ನು ಭಕ್ತ ಸ್ವೀಕರಿಸಿದರೆ ಮಾತ್ರ ಬೈಯುತ್ತದೆ. ಅದು ತಾನು ನಂಬದು; ನಂಬುವವರನ್ನೂ ನಂಬಲೀಯದು.

> "ಕೋಣನ ಹೇಱಂಗೆ ಕುನ್ನಿ ಬಸಱಗುತ್ತ ಬಡುವಂತೆ
> ತಾವು ನಂಬರು, ನಂಬುವವರ ನಂಬಲೀಯರು"

ಅಂತಹವರ ರೀತಿ ಕೋಣನ ಹೇರನ್ನು ಕಂಡು ಹೊಟ್ಟೆನೋವು ಪಡುವ ಬೊಗಳುವ ನಾಯಿಯಂತಲ್ಲದೆ ಮತ್ತೇನು?

ಈ ಚಿತ್ರ ಸಹಜವಾಗಿದೆ. ಬಸವಣ್ಣನವರ ಕಾಲದಲ್ಲಿ ಈಗಿನಂತಲ್ಲದೆ ಸಕಲ ಪಡಿ ಪದಾರ್ಥಗಳನ್ನೂ ಕತ್ತೆ ಕುದುರೆ ಕೋಣ ಎತ್ತುಗಳ ಮೇಲೆ ಹೇರಿಕೊಂಡು ಹೋಗು

ತ್ತಿದ್ದರು. ಊರಿಂದ ಊರಿಗೆ ಬರುತ್ತಿದ್ದ ಈ ವರ್ತಕರ ಹೇರುಗಳನ್ನು ಕಂಡರೆ ಊರಿನ ಹುಲಿಗಳು, ನಾಯಿಗಳು, ತಮ್ಮನ್ನು ಹೊಸದಾಗಿ ಬಂದವರು ಗಮನಿಸಲೆ ಇಲ್ಲವಲ್ಲ ಎಂದು ಕೋಪಿಸಿಕೊಂಡೊ ಏನೊ ಘರ್ ಘುರ್ ಎನ್ನುತ್ತವೆ. ಹೀಗೆ ಹೇರನ್ನು ಕಂಡು ಬೊಗಳುವುದರಿಂದ ಏನಾಗುತ್ತದೆ; ಅವಕ್ಕೆ ನಾಲ್ಕು ಲಾತ ಬೀಳುತ್ತದೆ. ಬಸವಣ್ಣನವರು ಈ ಸಾಮಾಜಿಕ ಚಿತ್ರವನ್ನೂ ಸೊಗಸಾಗಿ ಇಲ್ಲಿ ರೂಪಕವಾಗಿ ಬಳಸಿಕೊಂಡಿದ್ದಾರೆ.

ಹೆಣ್ಣಿನ ಹಿಂದೆಯೆ ಸುಳಿದಾಡುವ ವಿಷಯಾಸಕ್ತಿ "ಟಗರ ಬೆನ್ನಲಿ ಸುಳಿವ ಸೊಣಗ"ನಂತೆ. ಟಗರನ್ನು ಕಾಯುವ ಕುರುಬ ಹೊಡೆದಾನು ಎಂದೂ ಅದಕ್ಕೆ ಚಿಂತೆಯಿಲ್ಲ. ಆದರೆ ಭಕ್ತನ ಮನಸ್ಸು ಶಿವವಿಲ್ಲದ ಯಾವುದರೆಡೆಯೂ ಹರಿಯಬಾರದು. ಅದಕ್ಕೆ ಬಸವಣ್ಣನವರು ಹೇಳುತ್ತಾರೆ:

"ಒಡೆಯರಿಲ್ಲದ ಮನೆಯ ತುಡುಗುಣಿಯ ನಾಯಿ ಹೊಗುವಂತೆ !
ನೀವಿಲ್ಲದವರ ಮನೆಯ ಹೊಗೆನಯ್ಯಾ."

ನಾಯಿಯ ಕರ್ತವ್ಯ ಮನೆ ಕಾಯುವುದು ಮನಸ್ಸಿನ ಕರ್ತವ್ಯವೂ ಆತ್ಮಾಲಯವನ್ನು ಕಾಯುವುದು—ಅಲ್ಲಿ ಶಿವ ಇಲ್ಲದ ಘಳಿಗೆಯಲ್ಲಿಯೂ, ಆದರೆ ತುಡುಗುಣಿ ನಾಯಿಗೆ ಅದು ಕಷ್ಟ. ಬಸವಣ್ಣನವರು ತುಡುಗುಣಿನಾಯಾಗಲು ಬಯಸರು.

ಭಕ್ತ ಭಾಷೆ ತಪ್ಪಿದಮೇಲೆ ಪ್ರಾಣದಾಸೆಯನ್ನು ಬಿಟ್ಟುಕೊಂಡು ಫಲವಿಲ್ಲ. "ಮಿಾಸಲ ಸೊಣಗ ಮುಟ್ಟಿದಂತೆ" ಅವನ ಪಾಡು. ಭಗವಂತನಿಗೆಂದು ಮಿಾಸಲಾಗಿಟ್ಟ ಬದುಕು-ಪ್ರಸಾದಗಳು ಎಂಜಲಾಗದಂತೆ ಎಚ್ಚರವಿರಬೇಕು. ತಾನು ತಿನ್ನದೆ, ತನ್ನ ಆಸೆಗಳನ್ನೆಲ್ಲ ಬಿಗಿಹಿಡಿದು, ಮುಟ್ಟಿದರೆ ಮೈಲಿಗೆಯಾದೀತಲ್ಲ ಎಂದು ಕಾದಿಟ್ಟಿರುವ ಮಿಾಸಲನ್ನು ನಾಯಿ ಮುಟ್ಟಿದರೆ ಏನಾಗಬೇಕು? ಶಿವಾರ್ಪಿತವಾದ ಭಕ್ತನ ಜೀವ ಸುಳ್ಳು ನುಡಿದಾಗ ಅದು ನಾಯಿ ಮುಟ್ಟಿದ ಮಿಾಸಲಿನಂತೆ ವ್ಯರ್ಥ. ಬಹಳ ಚೆನ್ನಾಗಿದೆ ಈ ಮಾತು.

ಸಂಪೂರ್ಣ ಶಿವಾರ್ಪಿತವಾದ ಬಾಳಿನ ಮಿಾಸಲನ್ನು ಹೀಗೆ ಏನೆಲ್ಲಾ ನಾಯಿಗಳು ನೆಕ್ಕಲು ಬರುತ್ತಿರುತ್ತವೆಯೊ. ಸಂಸಾರ ಅಂತಹ ಭಯಂಕರವಾದ ನಾಯಿ; ಅಟ್ಟಿಕೊಂಡು ಬಂದು ಎಂಜಲುಮಾಡುತ್ತದೆ. ಶಿವನೆ ಪತಿ, ತಾನೆ ಸತಿ, ಎಂದು ಒಪ್ಪಿಕೊಂಡ ಬದುಕು ವಾಸ್ತವವಾಗಿ ಕನ್ಯೆಯೊಬ್ಬಳನ್ನು ಕೈವಿಡಿದಿರುತ್ತದೆ. ಹೀಗೇಕೆ ವೇಶ್ಯಾಜೀವನ? ಭಕ್ತಿ ಕನ್ಯಾ ಪಾವಿತ್ರ್ಯ, ಮನದ ಮಿಾಸಲು ಎಲ್ಲಿ ತಾನೆ ಉಳಿಯಿತು? ನಾಯಿಯನ್ನು ಅಟ್ಟಿ ಎಡೆಯನ್ನು ಕಾಯಬೇಕಾದುದು ಮನದೊಡೆಯನ ಕರ್ತವ್ಯ:

"ಸಂಸಾರವೆಂಬ ಶ್ವಾನನಟ್ಟಿ ಮಿಾಸಲ ಬೀಸರ ಮಾಡದಿರಯ್ಯಾ
ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯ
ನೀವಲ್ಲದೆ ಮತ್ತೇನೂ ಅಱಿಯೆನು.
ಕನ್ನೆಯಲ್ಲಿ ಕೈವಿಡಿದೆನು, ನಿಮ್ಮಲ್ಲಿ ನೆರೆದೆನು,
ಮನ್ನಿಸು, ಕಂಡಾ, ಮಹಾಲಿಂಗವೇ !

ಸತಿಯಾನು, ಪತಿ ನೀನು, ಅಯ್ಯಾ
ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ
ನೀನೆನ್ನ ಮನವ ಕಾಯ್ದಿಪ್ಪ ಗಂಡನು !
ನಿಮಗೋತ ಮನವನನ್ಯಕ್ಕೆ ಹರಿಸಿದರೆ
ನಿನ್ನಭಿಮಾನ ಹಾನಿ, ಕೂಡಲ ಸಂಗಮದೇವ !"

ಹೊರಗಿನ ಸಂಸಾರ ಹೀಗೆ ಅಟ್ಟಿಕೊಂಡು ಬಂದರೆ ಯಾರಾದರೂ ರಕ್ಷಿಸಬಹುದು. ಆ ಸಂಸಾರದಿಂದ ಈ ಭಗವದ್‌ಭಕ್ತಿ ಸಂಸಾರಕ್ಕೆ ವ್ಯಭಿಚಾರವಾಗದಂತೆಯೂ ಆ ಶಿವಪತಿಯೆ ನೋಡಿಕೊಳ್ಳಬಹುದು. ಆದರೆ ಭಕ್ತನ ಇಂದ್ರಿಯಗಳೆ ಅವನ ಆತ್ಮವನ್ನು ಕಿತ್ತು ತಿನ್ನಲು ಹಾತೊರೆಯುವುದಾದರೆ? ಭಗವದರ್ಪಿತವಾದ ಆತ್ಮದ ಮೇಲೂ ಇಂದ್ರಿಯ ಮನೋ-ವಿಕಾರಶುನಕಗಳು ಹಾರಿಹಾರಿ ಬೀಳುತ್ತವೆ; ಬಿದ್ದು ಕಚ್ಚಿಕಚ್ಚಿ ತಿನ್ನುತ್ತವೆ.

"ಒಂದು ಮೊಲಕ್ಕೆ ನಾಯನೊಂಬತ್ತ ಬಿಟ್ಟಂತೆ
'ಎನ್ನ ಬಿಡು ತನ್ನ ಬಿಡೆಂ'ಬುದು ಕಾಯವಿಕಾರ,
'ಎನ್ನ ಬಿಡು ತನ್ನ ಬಿಡೆಂ'ಬುದು ಮನೋವಿಕಾರ,
ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನೆಯ್ದುವುದೆ, ಕೂಡಲಸಂಗಮದೇವಾ"

ದೇವಕಿರಾತಾರ್ಪಿತವಾಗಬೇಕಾದ ಮನದ ಮೊಲವನ್ನು ಅಗಿದುಅಗಿದು ತಿಂದು ಎಂಜಲಾಗಿಸಲು, 'ಮಿಾಸಲುಗೆಡಿಸಲು' ಈ ಸೊಣಗ ವಿಕಾರಗಳು ಮುಂದೆ ನುಗ್ಗುತ್ತಲೇ ಇರುತ್ತವೆ. ಜಗ್ಗುವ ಸೊಣಗಗಳನ್ನು ಬಿಗಿಹಿಡಿಯುವುದು ಯಾರಿಗೂ ಕಷ್ಟವೆ. ಅವು ಒಂದಲ್ಲ ಒಂಬತ್ತು ನೋಡಿ. ಹಾಗೆಯೆ ಅವು ಒಮ್ಮೊಮ್ಮೆ ಕಚ್ಚುವುದರಿಂದ ಆಗುವ ನೋವನ್ನು ಅನುಭವಿಸುವುದು ಎಷ್ಟು ಕಷ್ಟವೆಂಬುದನ್ನು ದೇವರೇ ಬಲ್ಲ. ಅದಿರಲಿ, ಇಲ್ಲಿಯ ದೃಗ್‌ರೂಪಕವು ಹೇಗೆ ಪ್ರತ್ಯಕ್ಷವಾಗಿ ನಿಲ್ಲುತ್ತದೆ ನೋಡಿ. 'ಎನ್ನ ಬಿಡು! ತನ್ನ ಬಿಡು' ಎನ್ನುವ ಉಕ್ತಿ ರೀತಿ, ಹಾಗೂ ಅದರ ಪುನರುಕ್ತಿ ಈ ಚಿತ್ರವನ್ನು ಸಜೀವಗೊಳಿಸಿದೆ.

ಶಿವಕಿರಾತನಿಗೆ ಸೇರಬೇಕಾದ ಈ ಮೃಗವನ್ನು ಹಿಡಿಯಲು ಕಿರಾತರು ಬಂದು ಪಾಪದ ಬಲೆ ಬೀಸುತ್ತಾರೆ. ಆದರೆ ಅದು ಶಿವನಿಗೆ ಸಲ್ಲಬೇಕಾದದ್ದು; ಅನ್ಯದೀಹಕ್ಕೊಳಗಾಗದೆ ಶಿವಜಾಲದಲ್ಲಿ ಬಿದ್ದ ಅದು ಅವನಿಗೆ ಮಾತ್ರ ಅರ್ಪಿತವಾಗುತ್ತದೆ.

"ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯ
ಪಾಪದ ಬಲೆಯ ತಂದು ಮುಂದೊಡ್ಡಿದರಯ್ಯ
ಬೇಟೆಕಾಱನು ಮೃಗವನಟ್ಟಿ, ಮೃಗ ಗೋರಿಗೊಳಗಾಗದಯ್ಯ !
ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು
ಕೂಡಲ ಸಂಗಮಂಗೆ ಓಗರವಾಯಿತ್ತಯ್ಯಾ !"

ಅಧಿಕಾರದಲ್ಲಿದ್ದವರಿಗೆ ಧನಬಂಧನದಿಂದ ತಪ್ಪಿಸಿಕೊಳ್ಳುವುದು ಕಷ್ಟಕರ. ಒಮ್ಮೆ ಸಂತೋಷಗೊಳಿಸುವ, ಒಮ್ಮೆ ದುಃಖಗೊಳಿಸುವ ಒಮ್ಮೆ ನಂಬಿಸುವ ಮತ್ತೊಮ್ಮೆ

ವಂಚಿಸುವ ಧನವನ್ನು ಕಂಡು ಬಸವಣ್ಣನವರಿಗೆ ಹೇಸಿಕೆಯಾಗಿದ್ದಿರಬೇಕು. ಅದರಿಂದ ಎಲ್ಲರೂ ನಷ್ಟಾತ್ಮರಾಗುವರೆಂಬ ಯಾತನೆಯಿಂದ ಹೇಳುತ್ತಾರೆ: "ಕಾಂಚನವೆಂಬ ನಾಯ ನೆಚ್ಚಿ ನಿಮ್ಮ ನಾನು ಮಱೆದೆನಯ್ಯ" ಎಂದು. ಮೆಚ್ಚುವ ಬಾಲವಲ್ಲಾಡಿಸುವ ಬೊಗಳುವ, ಹೇಸಿಕೆಯನ್ನು ಕಂಡಾಗಲಿ ನೆನೆದಾಗಲಿ ಅದನ್ನರಸಿ ಓಡಿಹೋಗುವ ನಾಯಿಯಂತೆ ಧನ ಅವರಿಗೆ ಆಗ ಕಂಡಿರಬೇಕು. ನಾಯಿಯ ರೂಪಕಗಳಲ್ಲಿ ಮತ್ತೊಂದು ಬಹು ಶಕ್ತಿಯುತವಾಗಿದೆ.

"ಅಂದಣವನೇಱಿದ ಸೊಣಗನಂತೆ
ಕಂಡೊಡೆ ಬಿಡದು : ಮುನ್ನಿನ ಸ್ವಭಾವವನು !
ಸುಡು ಸುಡು ಮನವಿದು ವಿಷಯಕ್ಕೆ ಹರಿಯುವುದು
ಮೃಡ ನಿಮ್ಮನನುದಿನ ನೆನೆಯಲೀಯದು."

'ನಾಯಿಗೆ ಪಟ್ಟ ಕಟ್ಟಿದಂತೆ' ಎನ್ನುವ ಗಾದೆಮಾತು ಕೇಳಿದ್ದೇವೆ. ಇಲ್ಲಿ 'ಅಂದಣವನೇಱಿದ ಸೊಣಗನಂತೆ' ಎನ್ನುವ ಮಾತನ್ನು ನೋಡುತ್ತೇವೆ. ಒಟ್ಟಿನಲ್ಲಿ ಎರಡೂ ಅಯೋಗ್ಯನಿಗೆ ಪದವಿ ಬಂದುದನ್ನು ಧ್ವನಿಸುತ್ತವೆ. ಆದರೆ ಇಲ್ಲಿ "ಕಂಡೊಡೆ ಬಿಡುದು —ಮುನ್ನಿನ ಸ್ವಭಾವವನು" ಎನ್ನುವ ಮುಂದಣ ಪಂಕ್ತಿ ಭಾವಪರಿವೇಷವನ್ನೇ ವಿಸ್ತರಿಸುತ್ತದೆ. ನಾಯಿಗೆ ಅಂದಣಯೋಗವುಂಟಾದಮಾತ್ರದಿಂದಲೇ ಅದರ ಪೂರ್ವಭವ ಮರೆತಿರುವುದಿಲ್ಲ. ಅದಕ್ಕೆ ಅಮೃತಾನ್ನ ಸಮೃದ್ಧವಾಗಿ ದೊರೆತರೂ ಆ ಹಳೆಯ ಸವಿಗೆ ಸಮಾನ ಯಾವುದೂ ತೋರದು. ಹಾಗಿರುವಾಗ ಅದನ್ನು ಅದು ಕಂಡರೆ, ಇಲ್ಲ ಅದರ ನೆನಪು ಅದಕ್ಕಾದರೆ ಏನಾಗಬೇಕು? ಪಣ್ಣನೆ ಹಾರುತ್ತದೆ ಅಂದಣದಿಂದ. ಬಸವಣ್ಣನವರ ಈ ವಚನದಲ್ಲಿ ಈ ಎರಡೂ ಭಾವಗಳ ಧ್ವನಿಯಿದೆ. ಈ ರೂಪಕ ಸನ್ನಿವೇಶಗಳನ್ನು ಊಹಿಸಿಕೊಂಡಾಗ ಅವುಗಳ ಭಾವಗಾಂಭೀರ್ಯ ಮತ್ತೂ ಅತಿಶಯವಾಗುತ್ತದೆ.

ಭಕ್ತನಾದವನ ಮನಸ್ಸನ್ನು ಅವನ ಅನ್ಯಭವಸಂಸ್ಕಾರಗಳು ಪೀಡಿಸುತ್ತಲೇ ಇರುತ್ತವೆ. ಅದರಲ್ಲೂ ಭಕ್ತ ತನ್ನ ಸಂಸ್ಕಾರಬಲದಿಂದ ಭಕ್ತನಾಗಿರದೆ ಸನ್ನಿವೇಶಯೋಗದಿಂದ ಆ ಗೌರವಕ್ಕೆ ಏರಿದ್ದರೆ ಅವನ ಬದುಕಿನಲ್ಲಂತೂ ಆ ಹಳೆಯ ರಾಗಗಳು ಕ್ಷಣ ಕ್ಷಣಕ್ಕೂ ಬಾಧಿಸುತ್ತಲೆ ಇರುತ್ತವೆ. ಬಸವಣ್ಣನವರು ಮೊದಲು ಬ್ರಾಹ್ಮಣರಾಗಿದ್ದರಂತೆ. ಶಿವಶರಣದೀಕ್ಷೆಯನ್ನು ಪಡೆದುಕೊಂಡ ಮೇಲೂ ಆ ಹಳೆಯ ವಾಸನೆಯ ಎಳೆ ಎಳೆಯುತ್ತಿತ್ತೇನೊ, ಅವರಂತಹವರ ವಿಚಾರವಾಗಿ ಹಾಗಿರಲಿ, ಉಳಿದ ನೂರಾರು ಸಾಮಾನ್ಯ ಶರಣರ ವಿಷಯದಲ್ಲಂತೂ ಆ ಅಂಶ ಬಹುಮಟ್ಟಿಗೆ ಸತ್ಯ. ಶಿವಶರಣತ್ವ ಉಳಿದೆಲ್ಲ ಭವಗಳಿಗಿಂತ ಎಷ್ಟೊ ಪಾಲು ಶ್ರೇಷ್ಠವೆಂದು ಭಾವಿಸಿದ್ದ ಆ ಭಕ್ತ. ಆದರೆ ಹಾಗೆ ಆ ದೀಕ್ಷೆಯನ್ನು ಪಡೆದವರೆಲ್ಲ ಅದನ್ನು ಅರಗಿಸಿಕೊಳ್ಳಬೇಕಲ್ಲ. ಅಂತಹ ಸಾಮಾನ್ಯರಿಗೆ ಹಳೆಯ ವಾಸನೆ, ಅಷ್ಟೇ ಏಕೆ, ಹಳೆಯ ಉಣಿಸು ಆಚಾರ ಎಲ್ಲವೂ ಒಂದಲ್ಲ ಒಂದು ರೀತಿ ನೆನಪಿಗೆ ಬಂದು ಕಾಡುತ್ತಲೆ ಇದ್ದುವು. ಹಾಗಾಗಿ ಶಿವಶರಣತ್ವದ ಅಂದಣದಿಂದ ಹಾರಿಹೋಗುತ್ತಿತ್ತು ಅವರ ನಾಯಿಚೇತನ. ಆ ಹಳೆಯ ಕ್ಷುದ್ರದೈವಗಳನ್ನು ಅರಸಿ

ಕೊಂಡು ಹೋಗುತ್ತಿದ್ದ ಭಕ್ತರಿಗೆ ಬಂದ ಶರಣದೀಕ್ಷೆ ನಾಯಿಗೆ ಬಂದ ಅಂದಣಯೋಗವಾಗಿತ್ತು. ಹೀಗೆ ಈ ಉಪಮಾನ ಬಹಳ ಶಕ್ತಿಯುತವಾಗಿದೆ, ಧ್ವನಿಪರಿವೇಷದಿಂದ ಕೂಡಿದೆ.

ಭಕ್ತಿಯನ್ನು ಭಗವದನುರಕ್ತಿಯಿಂದ, ತನ್ನೊಳಗೆ ಇರುವ ಪ್ರೀತಿಯ ಅನಿವಾರ್ಯತೆಯಿಂದ ಅಲ್ಲದೆ ಬರಿಯ ಅಭ್ಯಾಸಬಲದಿಂದ ಮಾಡಿದರೇನು ಫಲ? ನಾಯಿ ತನ್ನೊಡೆಯನನ್ನು ಕಂಡು ಅಭ್ಯಾಸಬಲದಿಂದ ಬಾಲ ಬಡಿಯುವುದಿಲ್ಲವೆ? ಏನು ಸಿದ್ಧಿ ಬಂತು? ಅದಕ್ಕಾದರೂ ಏನು ಮುಟ್ಟಬೇಕು?

"ತನುವನಲ್ಲಾಡಿಸಿ ನೋಡಿದಲ್ಲಿ, ಮನವನಲ್ಲಾಡಿಸಿ ನೋಡಿದಲ್ಲಿ
ಧನವನಲ್ಲಾಡಿಸಿ ನೋಡಿದಲ್ಲಿ ದೃಢವಿಲ್ಲದಿದ್ದಡೆ,
ಒಡೆಯನ ಕಂಡು ನಾಯಿ ಬಾಲವ ಬಡಿದುಕೊಂಬಂತೆ
ಅದಕೇನು ವೆಚ್ಚಹತ್ತಿದುದುಂಟೆ? ಕೂಡಲಸಂಗಮದೇವಾ?"

ಈ ದೃಢವಿಲ್ಲದ ಶಾಸ್ತ್ರಭಕ್ತಿಯಲ್ಲಿ, ಅಭ್ಯಾಸಭಕ್ತಿಯಲ್ಲಿ, ಯಾವ ಶಕ್ತಿಯಿದೆ ಷಟ್ಸ್ಥಲ ಓದಿದ ಮಾತ್ರಕ್ಕೆ ಭಕ್ತನಾಗಲಿಲ್ಲ, ದಾಸೋಹ ಮಾಡಬೇಕಲ್ಲ. ಇಲ್ಲದಿದ್ದರೆ? * "ಶ್ವಾನ ಮಡಕೆಯನಿಳುಹಿ ಬೋನವ ತಿಂದು ಏಱಿಸಲಱಿಯದಂತೆ" ಆಗುತ್ತದೆ. ಗೂಡಿನಿಂದಲೊ, 'ನೆಲ'ದಿಂದಲೊ ಅನ್ನದ ಮಡಕೆಯನ್ನು ಇಳುಕಿ, ಅಲ್ಲವೆ ಕೆಡವಿ, ಸ್ವೇಚ್ಛೆಯಾಗಿ ತಿಂದ ನಾಯಿ ಆ ಮಡಕೆಯನ್ನು ಮೇಲೇರಿಸಬಲ್ಲುದೆ? ಒಡತಿ ಬಂದಾಳು ಎಂಬ ಭೀತಿಯಾದರೂ ಅದಕ್ಕುಂಟೆ? ಈ ರೂಪಕ ಪರಿಣಾಮಕಾರಿಯಾಗಿಯೆ ಇದೆ.

ತಮ್ಮನ್ನೆ ಕುರಿತು ಬಸವಣ್ಣನವರಷ್ಟು ತೀಕ್ಷ್ಣವಾಗಿ ನಗ್ನವಾಗಿ ನುಡಿಯುವುದು ಅತ್ಯಸಾಧಾರಣವಾದದ್ದೆ ಸರಿ. ಒಂದು ನಾಡಿನ ಮಹಾಪ್ರಧಾನಿಯಾಗಿದ್ದು ಲೋಕಭಯ ಗೌರವಕ್ಕೆ ಪಾತ್ರರಾಗಿದ್ದರು. ಮಹಾಭಕ್ತರೆಂಬ ಕಾರಣದಿಂದಾಗಿ ಶರಣ ಪ್ರಪಂಚದಲ್ಲಂತೂ ಅಣ್ಣನಾಗಿಯೆ ಪೂಜ್ಯರಾದರು. ಜೊತೆಗೆ ಬೇರೆ ಅವರು ಪೂರ್ವಾಶ್ರಮದಲ್ಲಿ ಉತ್ತಮ ಕುಲದವರಾಗಿದ್ದರೆಂಬ ಕಾರಣದಿಂದಾಗಿ ಸಾಧಾರಣ ಭಕ್ತಜನದ ವಿಸ್ಮಯಕ್ಕೂ ಕಾರಣವಾಗಿದ್ದರು. ಇಂಥವರು ತಮ್ಮನ್ನು ಈ ಯಾವ ದೊಡ್ಡಸ್ತಿಕೆಯ ಪೀತಾಂಬರದಿಂದಲೂ ಮುಚ್ಚಿಕೊಳ್ಳದೆ ಆದಷ್ಟೂ ದಿಗಂಬರವಾಗಿ ನಿರ್ಮಲಗೊಳ್ಳುವುದಕ್ಕೆ ಭಯಂಕರವಾಗಿ ಹೋರಾಡುತ್ತಿದ್ದರು. ಅವರ ಆ ಪ್ರಾಮಾಣಿಕತೆಯ ಸಾಕ್ಷಿಯಾಗಿ ಅವರ ಈ ವಚನಗಳು ನಿಂತಿವೆ....ಆ ಮಹಾಭಕ್ತ ತಮ್ಮ ಭಕ್ತಿಯನ್ನು ಕುರಿತು ಎಷ್ಟು ಉಗ್ರವಾಗಿ ನುಡಿಯುತ್ತಾರೆ:

"ಒಳ್ಳಿಹ ಮೈಲಾರನ ಒಳಗೆಲ್ಲ ಸಣಬು!
ಹೊಱಗಣ ಬಣ್ಣ ಕರಲೇಸಾಯಿತ್ತಯ್ಯ!
ಶ್ವಾನನ ನಿದ್ರೆ! ಅಜ್ಞಾನಿಯ ತಪದಂತೆ!
ಆಯಿತ್ತಯ್ಯಾ ಎನ್ನ ಮತಿ, ಕೂಡಲಸಂಗಮದೇವಾ"

---

* ಇಂಥದೆ ಒಂದು ಚಿತ್ರ ನಯಸೇನನಲ್ಲಿ ಕಂಡುಬರುತ್ತದೆ.

ಮೈಲಾರದೇವತೆ ಬಸವಣ್ಣನವರ ಕಾಲದಲ್ಲಿ ಬಹು ಪ್ರಸಿದ್ಧವಾಗಿದ್ದಿರಬೇಕು. ಆ ದೇವರನ್ನು, ಒಳಗೆಲ್ಲ ಸೆಣಬು ತುರುಕಿ ಮೇಲೆ ಮಣ್ಣು ಮೆತ್ತಿ ಬಣ್ಣ ಬಳಿದು ನಯ ಮಾಡಿ ಹೊಳಪಿಟ್ಟು ಪೂಜಿಸುತ್ತಿದ್ದಂತೆ ತೋರುತ್ತದೆ—ಇಂದು ಗಣೇಶ ಗೌರಿಯರ ಪ್ರತಿಮೆಗಳನ್ನು ಹಬ್ಬದ ದಿನಗಳಲ್ಲಿ ಮಾಡುವಂತೆ. ಆ ಮೂರ್ತಿ ಹೊರನೋಟಕ್ಕೇನೊ ಚೆಲುವ; ಆದರೆಷ್ಟು ದಿನ? ನೀರು ಬಿದ್ದರೆ? ಉಂತಾಗಿದರೆ? ಹೀಗಿದ್ದರೂ ಸಾಮಾನ್ಯ ರಂಜಕವಾಗಿದ್ದೆ ಇದ್ದ. ಈ ಚಿತ್ರ ಬಸವಣ್ಣನವರ ಆತ್ಮಪರೀಕ್ಷಣವನ್ನು ಪ್ರತಿಮಿಸುವ ಶಕ್ತರೂಪಕವಾಗುತ್ತದೆ. ಜತೆಗೆ ಮುಂದೆ ಬರುವ ನಾಯಿಯ ಚಿತ್ರ, ಬಹು ಗಾಢವಾದ ಪರಿಣಾಮವನ್ನುಂಟುಮಾಡುತ್ತದೆ. ನಾಯಿ ನಿದ್ರೆ ಮಾಡುವುದನ್ನು ಚೆನ್ನಾಗಿ ನೋಡಿದ್ದರಂತೂ ಇದರ ಶಕ್ತಿ ತಿಳಿಯುತ್ತದೆ. ಅದು ನಿದ್ರೆ ಮಾಡುವ ರೀತಿಯೆ ರೀತಿ. ಹಗಲೆಲ್ಲ ನಿದ್ರೆ ಮಾಡುವುದೂ ಉಂಟು, ರಾತ್ರಿಯೆಲ್ಲ ಬೊಗಳಾಟದಲ್ಲಿ ನಿದ್ದೆಗೆಡುವುದೂ ಉಂಟು, ನಿದ್ರೆ ಮಾಡುವುದಾದರು ಹೇಗೆ! ಕಣ್ಣು ಮುಚ್ಚಿಯೆ ಇರುತ್ತದೆ; ದಾರಿಯಲ್ಲಿ ಯಾವುದೊ ನಾಯಿಯ ಸದ್ದಾದರೊ ಮತ್ತಾರ ಸಪ್ಪಳವಾದರೊ ಸಾಕು, ಘುರ್ ಎನ್ನುತ್ತದೆ. ಏನಿಲ್ಲದಿದ್ದರೂ ತನ್ನ ಮೈಮೇಲೆ ಹಾರಾಡುತ್ತ ಕಚ್ಚಿಕೊಂಡಿರುವ ತೊಣಚಿಗಳನ್ನು ಕೆರೆಯುತ್ತಲೆ ಇರುತ್ತದೆ. ಒಮ್ಮೊಮ್ಮೆ ಆದರ ಮೇಲೆ ಸಿಡಿದೆರಗಿ ಮತ್ತೆ ನಿದ್ದೆ ಹೋಗುತ್ತದೆ. ಗಂಭೀರವಾಗಿ ನಿದ್ರೆ ಮಾಡುತ್ತಿದೆ ಎನ್ನುವಾಗಲೂ ಕೂಡ ಅದು ಕನಸಿನಲ್ಲಿ ಯಾವ ದಾಯಾದಿಯೊಡನೆ ಹೋರಾಡುತ್ತಿರುತ್ತದೊ, ಯಾವ ನೆನಪನ್ನರಸಿಕೊಂಡೋಡಿರುತ್ತದೆಯೊ! ನಾಯ ನಿದ್ರೆ ಇಂಥದು; ಅಜ್ಞಾನಿಯ ತಪವಿಂಥದು. ಬಸವಣ್ಣನವರು ತಮ್ಮ ಮನ ಇಂತಹದೆಂದು ಬಹು ಕಟುವಾಗಿ ಹೇಳಿಕೊಳ್ಳುತ್ತಾರೆ. ಇದು ಬಹು ಯಶಸ್ವಿಯಾದ ರೂಪಕವೆ ಸೈ.

ತಮ್ಮನ್ನೆಂತೊ ಲೋಕವನ್ನಂತೆಯೆ ನಿರ್ದಾಕ್ಷಿಣ್ಯವಾಗಿ, ಆದರೆ ಸದಯರಾಗಿ ವಿಮರ್ಶಿಸುವಾಗ ಬಸವಣ್ಣನವರಿಗೆ ಈ ನಾಯಿ ರೂಪಕವಾಗಿ ನೆರವಿಗೆ ಬರುತ್ತದೆ. ಅವರ ಪ್ರಸಿದ್ಧವಾದ 'ಲೋಕದ ಡೊಂಕ ನೀವೇಕೆ ತಿದ್ದುವಿರಿ!' ಎಂಬ ಮಾತಿನಲ್ಲೆ ಈ ನಾಯಬಾಲದ ಡೊಂಕಿನ ಚಿತ್ರ ಅಡಗಿರುವಂತೆ ತೋರುತ್ತದೆ. ನಾಯಿಬಾಲದ ಡೊಂಕು ತಿದ್ದುವುದಕ್ಕಂತೂ ಬರುವುದೇ ಇಲ್ಲ. ದಬ್ಬೆ ಕಟ್ಟಿದಾಗ ನೇರವಾಗಿರುವಂತೆ ತೋರುತ್ತದೆ. ಅದನ್ನು ಕಳಚಿದೊಡನೆಯೆ ಮೊದಲಿಗಿಂತ ಡೊಂಕಾಗಿಬಿಡುತ್ತದೆ ಆ ಬಾಲ. ಲೋಕವೂ ಇಷ್ಟೆ. ಸುಧಾರಕನು ಮಾಡುವ ಸುಧಾರಣೆಗಳಿಂದ ಲೋಕದ ಮೇಲಾಗುವ ಪರಿಣಾಮವಷ್ಟೆ. ಈ ಮಾತಿನಲ್ಲಿ ನಾಯಿಯ ಅಂತರ್ಗತ ರೂಪಕವಿರುವಂತೆ ತೋರುತ್ತದೆ.

ಮುಂದಿನ ವಚನದಲ್ಲಿ ಇದು ಮತ್ತೂ ಶಕ್ತಿವತ್ತಾಗಿ ವ್ಯಕ್ತವಾಗಿದೆ :

"ಆಗಳೂ ಲೋಗರಮನೆಯ ಬಾಗಿಲ ಕಾಯ್ದುಕೊಂಡಿಪ್ಪುವು, ಕೆಲವು ದೈವಂಗಳು!
ಹೋಗೆಂದರೆ ಹೋಗವು, ಕೆಲವು ದೈವಂಗಳು,
ನಾಯಿಂದಲೂ ಕರಕಷ್ಟ, ಕೆಲವು ದೈವಂಗಳು!

ಲೋಗರ ಬೇಡಿಕೊಂಡುಂಬ ದೈವಂಗಳು
ತಾವೇನ ಕೊಡುವುವು, ಕೂಡಲಸಂಗಮದೇವಾ!"

ಒಬ್ಬೊಬ್ಬರ ಮನಸ್ಸಿನಲ್ಲೂ ಎಷ್ಟು ದೇವರುಗಳಿದ್ದಿಲ್ಲ. ದುರ್ಬಲರ, ದುರಾಶಾವಂತರ ಮನಸ್ಸಲ್ಲಂತೂ ದೈವದ ಜಾತ್ರೆಯೊ ಜಾತ್ರೆ ನೆರೆದಿರುತ್ತದೆ. ಬಯಕೆಗಳೆಷ್ಟೊ ದೇವತೆಗಳೂ ಅಷ್ಟೆ ಇದ್ದಾರು. ನಮ್ಮನ್ನು ಕಾಪಾಡುವುದಿರಲಿ, ಎಷ್ಟೊ ವೇಳೆ ನಮ್ಮ ಬಯಕೆಗಳು ಸೃಷ್ಟಿಸಿಕೊಳ್ಳುವ ಅಂಥ ದೈವಗಳನ್ನು ನಾವೆ ಸಾಕಿ ಸಲಹುತ್ತಿರುತ್ತೇವೆ. ಅವರು ಆಮೇಲೆ ಆಚೆ ಹೋಗೆಂದರೂ ಹೋಗುವುದಿಲ್ಲ. ಎಲ್ಲೋ ಬೀದಿಯಲ್ಲಿ ಅಲೆಯುತ್ತಿದ್ದ ನಾಯನ್ನು ಅಯ್ಯೊ ಎಂದು ಮನೆಗೆ ತಂದು ಒಂದು ದಿನ ಅನ್ನವಿಟ್ಟರೆ ಸಾಕು, ಅದು ಇನ್ನಾಚೆ ಹೋಗುವುದೇ ಇಲ್ಲ. ಆದರೆ ಎಲ್ಲ ನಾಯಿಗಳೂ ರಕ್ಷಕರಾಗುವುದಿಲ್ಲ, ಹಲವಾರು ನಮಗೆ ಕಿರುಕುಳವೆ ಆಗುವುದುಂಟು. ಇಂಥ ನಾಯಿಗಳಂತೆ ಕ್ಷುದ್ರ ಬಯಕೆಯ ಸೃಷ್ಟಿಯಾದ ದೈವಗಳು. ಮೇಲಿನ ವಚನದ ಮೊದಲ ಮೂರು ಪಂಕ್ತಿಗಳಲ್ಲಿ ನಾಯ ಉಚ್ಚರಣೆಯಿಲ್ಲದಿದ್ದರೂ, ಆದರ ಸ್ಮರಣೆ ಇದೆ. ನಾಲ್ಕನೆ ಪಂಕ್ತಿಯಲ್ಲಂತೂ ಆದು ಸ್ಪಷ್ಟವೆ ಆಗುತ್ತದೆ. ಒಟ್ಟಿನಲ್ಲಿ ಈ ವಚನದಲ್ಲಿ ಬರುವ ಈ ನಾಯಿರೂಪಕ ಸತ್ತ್ವಯುತವಾಗಿದೆ.

ತಾವೆಷ್ಟೆ ತಮ್ಮನ್ನು ಲೋಕದ ಮುಂದೆ ನಿರ್ಭೀತರಾಗಿ ಖಂಡಿಸಿಕೊಂಡರೂ ಬಸವಣ್ಣನವರನ್ನು ಭಕ್ತರು ಅತಿಶಯ ಭಕ್ತಿ ಗೌರವದಿಂದಲೆ ಕಾಣುತ್ತಿದ್ದಂತೆ ಕಾಣುತ್ತದೆ. ಅದೇನೊ ಸರಿಯೆ; ಆದರೆ ಈ ಭಕ್ತನಿಗೆ ಮತ್ತೂ ಅಶಾಂತಿಯಾಗುತ್ತದೆ. ತಮ್ಮನ್ನು ಭಕ್ತರು ಹೊಗಳಬಹುದು, ಮೆರೆಸಬಹುದು. ಆದರೆ ತಾವೇನಾದಂತಾಯಿತು?

"ಹೊಱಿಸಿಕೊಂಡು ಹೋದ ನಾಯಿ: ಮೊಲನನೇನ ಹಿಡಿವುದಯ್ಯ?
ಇಱಿಯದ ವೀರ! ಇಲ್ಲದ ಸೊಬಗುವ ಹೇಳುವುದೇ ನಾಚಿಕೆ!
ಆನು ಭಕ್ತನೆಂತಪ್ಪೆನಯ್ಯ? ಕೂಡಸಂಗಮದೇವಾ?"

ಪೊದೆಪೊದೆಗಳಲ್ಲೆಲ್ಲ ಒಳನುಗ್ಗಿ ಅಂಡಲೆದಾಡಬೇಕಾದ ಬೇಟೆಯ ನಾಯನ್ನು ಹೊತ್ತುಕೊಂಡು ಹೋದರೆ, ಅಥವಾ ಹಾಗೆ ಅದು ಹೊರಿಸಿಕೊಂಡು ಹೋಗುವಂಥದಾದರೆ, ಆ ನಾಯಿಯಿಂದ ಏನು ಫಲ ಬಂದೀತು? ಅದನ್ನು ಜಾಯಾಲ ಎಂದು ಕರೆದೇನು ಫಲ? ಒಡೆಯನೇನೊ ಮುದ್ದಾಗಿ ಸಾಕಿದ ನಾಯೆಂದು ಅದನ್ನು ಹೊತ್ತುಕೊಂಡೂ ಹೋಗಬಹುದು. ಆದರೆ ಬೇಟೆಯಲ್ಲೇನು ಮಾಡುವುದು? ಬೇಟೆಯಾಡಹೋದ ನಾಯಿ ತಾನೆ ಬೇಟೆಯಾದೀತು! ಇರಿಯದ ವೀರನೂ ಹಾಗೆಯೆ. ಅಂತೆಯೆ ಬರಿಯ ಹೊಗಳಿಕೆಯಿಂದಲೆ ಭಕ್ತನಾದವನು ಹೊರಿಸಿಕೊಂಡು ಹೋದ ಬೇಟೆನಾಯಿಯಂತೆ. ಲೋಕದಲ್ಲಿ ಇಂಥವರೆ ಹೆಚ್ಚು. ಸರಿ, ಆದರೆ ಪರಮ ಪ್ರಾಮಾಣಿಕ ಭಕ್ತ ಬಸವಣ್ಣನವರು ತಮ್ಮನ್ನು ಹೀಗೆಂದುಕೊಳ್ಳಬೇಕೆ? ಅವರೆ ಅಂತಾದರೆ ನಾವು? ಈ ಹೊರಿಸಿಕೊಂಡು ಹೋದ ನಾಯಿ ಗಾದೆಯ ಮಾತಾಗಿರುವುದೂ ಉಂಟು. ಅಳುತ್ತಾ ಹೋದ ನಾಯಿ ಮೊಲ ಹಿಡಿದೀತೆ

ಎಂಬ ಗಾದೆಯನ್ನು ನಮ್ಮ ತಂದೆ ಎಷ್ಟೋ ವೇಳೆ ಹೇಳುತ್ತಿದ್ದುದುಂಟು, ನಾನು ಕೆಲಸ ಮಾಡುವ ರೀತಿ ನೋಡಿ!

ಇನ್ನು ಮರ್ಕಟರೂಪಕ. ನಾವೆಲ್ಲ ಕಪಿಯ ವಂಶದವರೆ ಎಂದು ಹೇಳುತ್ತಾರೆ. ನಮ್ಮ ಪೂರ್ವಿಕರನ್ನು ನಾವು ನೆನೆಯದ, ನೆನೆದು ಅವರಿಗೆ ಕಾಣಿಕೆ ಒಪ್ಪಿಸದ ದಿನವೇ ಇಲ್ಲ. ನಮ್ಮೊಳಗನ್ನೆ ನಾವು ನೋಡಿದರೆ ಇದೆಷ್ಟು ನಿಜವೆಂಬ್ಬುದು ತಿಳಿಯುತ್ತದೆ. ಕ್ಷಣವಾದರೂ ನಿಂತಲ್ಲಿ ನಿಲ್ಲದೆ ನಮ್ಮದೇ ಆದ ನಮ್ಮ ಮನಸ್ಸು ಎಷ್ಟು ಕಷ್ಟ ಕೊಡುತ್ತದೆ. ಸಾಧನೆಯ ಪ್ರಥಮಾವಸ್ಥೆಯಲ್ಲಿರುವ ಚೇತನಕ್ಕೆ ಈ ಕಷ್ಟ ಬಹಳ ಹೆಚ್ಚಾಗಿರುತ್ತದೆ. ತಾನೊಂದೆ ಇರುವಾಗಲೂ ಮರಗಳ ಮಧ್ಯದಲ್ಲಿ ಸಮ್ಮನಿರದ ಕೋತಿ ತನ್ನನ್ನು ಹಿಡಿಯಲೆಂದು ಸುತ್ತಲೂ ಜನ ಬಂದಾಗಲಂತೂ ಹಾರಿ ಹಾರಿ ಬೀಳುತ್ತದೆ. ಸ್ವಚ್ಛಂದವಾಗಿರುವ ಮನಸ್ಸನ್ನು ಏಕಾಗ್ರಗೊಳಿಸಲು ಯತ್ನಿಸಿದಾಗ ಅದೂ ಹಾಗೆ ವರ್ತಿಸುತ್ತದೆ. ಬೆಂದ ಮನಸ್ಸನ್ನು, ನೂರಾರು ಕೊಂಬೆಗಳ ನಡುವೆ ದಿಗ್ಭ್ರಾಂತವಾಗಿರುವ ಕೋತಿಯನ್ನು, ನಚ್ಚುವುದಾದರೂ ಎಂತು?

"ಮರನನೇರಿದ ಮರ್ಕಟನಂತೆ
ಹಲವು ಕೊಂಬಿಂಗೆ ಹಾಯುತಲಿದೆ
ಬೆಂದ ಮನವ ನಾನೆಂತು ನಂಬುವೆನಯ್ಯಾ?
ಎಂತು ನಚ್ಚುವೆನಯ್ಯಾ?
ಎನ್ನಯ್ಯ ಕೂಡಲಸಂಗಮದೇವನಲ್ಲಿಗೆ ಹೋಗಲೀದಯದಯ್ಯ
...ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ!"

ಆಗ ಬೇಡಿಕೊಳ್ಳುತ್ತದೆ ಭಕ್ತಭ್ರಮರ: "ಸುತ್ತಿ ಸುತ್ತಿ ಸತ್ತೆ; ಆ ನಿನ್ನ ಚರಣಕಮಲದಲ್ಲಿ ನನ್ನನ್ನು ತುಂಬಿಮಾಡಿಕೊ" ಎಂದು. ಭ್ರಮಿಸುವುದೆ ಭ್ರಮರದ ಸ್ವಭಾವ: ನೆಗೆಯುವುದೆ ಕೋತಿಯ ಗುಣ. ಕೊನೆಯಿಲ್ಲ ಇದಕ್ಕೆ. ಆದರೆ ಶಿವಚರಣಕಮಲ ಆ ಭ್ರಮಣೆಗೆ ಪೂರ್ಣವಿರಾಮವಾಗುತ್ತದೆ.

ನೆಗೆದಾಡುತ್ತಲೆ ಇರುವ ಈ ಕೋತಿಯನ್ನು ಸೆರೆಹಿಡಿಯುವುದಾದರೂ ಸಾಧ್ಯವೆ? ಅದಕ್ಕೆ ಸಂಯಮಮರ್ಯಾದೆಗಳನ್ನು ಕಲಿಸಲಾದರೂ ಬರುವುದೆ? ಎಷ್ಟು ಕೊಂಬೆಗಳುಂಟೊ ಅಷ್ಟು ಕೊಂಬೆಗೆ ನೆಗೆದು ಜಿಗಿದು ಕಾಯಿ ಹೂವುಗಳನ್ನೆಲ್ಲ ಉದುರಿಸಿ ತೋಟಗಾರನಿಗೆ ನಷ್ಟಮಾಡುವುದೆ ಅದರ ಕೆಲಸ. ತಿನ್ನುವುದಕ್ಕಿಂತ ಲೂಟಿ ಮಾಡುವುದೆ ಹೆಚ್ಚು. ಹೇಗಾದರು ಆಗಲಿ. ಅದಕ್ಕೆ ಬುದ್ಧಿ ಬರುವುದು ಹೇಗೆ? ಅದರ ಸ್ವಭಾವವನ್ನೆ ನಾಶಮಾಡುವುದಾಗಲಿ ಪರಿವರ್ತಿಸುವುದಾಗಲಿ ಸಾಧ್ಯವಿಲ್ಲದ ಕೆಲಸ. ಅದು ಹಾರಲಿ, ಬೇಡವೆನ್ನುವುದಿಲ್ಲ. ಈ ಮುಳ್ಳುಗೆಂಟೆಗಳಿಗೆಲ್ಲ ಹಾರಿ ಮೈ ಪರಚಿಕೊಳ್ಳುವುದಕ್ಕಿಂತ ಆ ಶಿವ ಮಹಾ ಶಾಶ್ವತ ಕಲ್ಪವೃಕ್ಷಕ್ಕೆ ಲಂಘಿಸಲಿ. ಅಲ್ಲಿ ಅದು ಬೇಕಾದ್ದುದೆಲ್ಲವನ್ನೂ ಲಂಘಿಸದೆಯೆ ಪಡೆಯಬಹುದಲ್ಲ; ಕುಳಿತಲ್ಲಿಯೆ ಬಯಸಿದುದನ್ನು ಪಡೆಯಬಹುದಲ್ಲ.

"ಎನ್ನ ಮನವೆಂಬ ಮರ್ಕಟನು ತನುವಿಕಾರವೆಂಬ ಅಲ್ಪಸುಖದಾಸೆಗಾಗಿ
ವೃಥಾಭ್ರಮಣಗೊಂಡು, ನಾನಾ ದೆಸೆಗೆ ಲಂಘಿಸಿ,
ಅಳಲಿಸಿ ಬಳಲುತ್ತಿದೆ ನೋಡಾ!
ಕೂಡಲ ಸಂಗಮ ದೇವರೆಂಬ ವೃಕ್ಷಕ್ಕೆ ಲಂಘಿಸಿ
ಅಪರಿಮಿತ ಸುಖವನ್ನೆದದು ನೋಡಾ!"

ಇಲ್ಲಿ ಹಾರಿ ಅಲ್ಲಿ ಹಾರಿ ದಾರಿತಪ್ಪಿದ ಕಪಿ ಆ ಮರಕ್ಕೆ ಹಾರಿದರೆ ಮತ್ತೆಲ್ಲೂ ದಾರಿ ತಪ್ಪಬೇಕಾಗಿಲ್ಲ. ಆ ಮಹಾಸಾಗರದಲ್ಲಿ ಧುಮುಕಿದ ನದಿ ಮತ್ತಾವ ಕಾಡುಮೇಡುಗಳಲ್ಲೂ, ಮರಳುಗಾಡುಗಳಲ್ಲೂ ದಾರಿ ತಪ್ಪಬೇಕಾಗಿಲ್ಲ. ಶಿವಪಾದಕಮಲಕ್ಕೆರಗಿದ ಭ್ರಮರ ಮತ್ತಾವ ಹೂತೋಟದಲ್ಲೂ ಅಲೆಯಬೇಕಿಲ್ಲ, ಯಾವ ಹೇಸಿಗೆಯ ಯಾವ ಡ್ರಾಸಿರದ ಭೀತಿಯೂ ಇಲ್ಲದಿರಬಹುದು. ಆದರೆ ಆ ಕಡಲೆಲ್ಲಿದೆ? ಆ ಶಿವಕಲ್ಪತರುವೆಲ್ಲಿದೆ? ಶಿವಪಾದಪದ್ಮವಾದರೂ ಎಲ್ಲಿಡೆ? ಅಲೆದಲೆದೆ ತಿಳಿದುಕೊಳ್ಳಬೇಕೇನು ಅದರ ನೆಲೆಯನ್ನು? ಅಲೆಯುತ್ತ ಅಲೆಯುತ್ತ ಆಯಾಸವಾಗುವುದೊಂದೆ ಫಲವೇನು? ಈ ಸಣ್ಣ ಸಣ್ಣ ಮರಗಳಲ್ಲೆ ಹಾರಿ ಚೀರಿ ಕಾಲ ಕಳೆದು ಶಕ್ತಿಗುಂದಿದ ಕೋತಿ ಆ ಅದೃಶ್ಯ ಸುದೂರ ಅಲೋಕ ವೃಕ್ಷವನ್ನು ಕಾಣುವುದಾದರೂ ಎಂದು? ಕಂಡರೂ ಆ ದೂರಕ್ಕೆ, ಆ ಎತ್ತರಕ್ಕೆ ಹಾರುವುದಾದರೂ ಎಂತು? ಮರಮರಗಳಲ್ಲಿ ಕಮಂಗಿ ಆಟ ಆಡಿದ ಕಪಿಗಳು ಸಾಗರ ತಟಿಯಲ್ಲೆ ಹಾರಿ ಮುಗ್ಗರಿಸಿದವು; ಎಂದೂ ಮೌನಿಯಾಗಿಯೆ ಇದ್ದ ಹನುಮಂತ ಆ ಸಾಗರದಾಚೆಯ ಸೀತಾಸನ್ನಿಧಿಗೆ ಲಂಘಿಸಿ ಹಿಂತಿರುಗಿ ಬಂದ. ತನ್ನ ಕಪಿತ್ವ ಕಳೆದುಕೊಂಡು ಕಪೀಶ್ವರನಾದ; ಅದರಿಂದ ತನ್ನ ಕುಲಕ್ಕೆಲ್ಲ ಗೌರವ ತಂದ. ಆದರೆ ಶಿವವೃಕ್ಷ ಹನುಮಂತನಿಗೆ ಮಾತ್ರ ವೇದ್ಯ ಸಾಧ್ಯ ಏನು?

ವಿಷಯಾಭಿಮುಖಿಯಾಗಿ ಅತ್ತಿತ್ತ ಅಲೆದಾಡುವ ಚಂಚಲ ಮನಸ್ಸನ್ನು ಬೇರೆ ಬೇರೆ ಪ್ರಾಣಿಚಿತ್ರಗಳಿಂದ ಚಿತ್ರಿಸುವುದನ್ನು ಕಾಣಬಹುದು.

"ಬೆಲ್ಲವ ತಿಂದ ಕೋಡಗನಂತೆ
ಸಿಹಿಯ ನೆನೆಯದಿರಾ, ಮನವೇ!
ಕಬ್ಬ ತಿಂದ ನರಿಯಂತೆ
ಹಿಂದಕ್ಕೆಳಸದಿರಾ, ಮನವೆ!
ಗಗನವಡರಿದ ಕಾಗೆಯಂತೆ
ದೆಸೆದೆಸೆಗೆ ಹಂಬಲಿಸದಿರಾ, ಮನವೆ!
ಕೂಡಲ ಸಂಗನ ಶರಣರ ಕಂಡು
ಲಿಂಗವೆಂದೇ ನಂಬು ಮನವೆ!"

ವಿಷಯ ರುಚಿಯನ್ನು ಸವಿದ ಮನಸ್ಸು ಅದರಿಂದ ವಿಮುಖವಾಗುವುದು ಸುಲಭವಲ್ಲ. ಮೊದಲೆ ಕೋತಿ, ಬೆಲ್ಲ ತಿಂದಮೇಲೆ ಕೇಳಬೇಕೆ? ಮೊದಲೆ ನರಿ, ಕಬ್ಬು ತಿಂದಮೇಲೆ ಕೇಳಬೇಕೆ? ಕಬ್ಬಿನ ಗದ್ದೆಯಲ್ಲಿ ಕೊಂತದ ಏಟು ಬಿದ್ದರೂ ಚಿಂತೆಯಿಲ್ಲ. ರುಚಿಯನ್ನು

ನೆನೆದೊಡನೆಯೆ ನೆಗೆದಾಡುತ್ತದೆ. ಸಾಧನೆಯ ದಾರಿಯಲ್ಲಿ ಮುಂದೆ ಹೋಗಿದ್ದರೂ ಭವರುಚಿಯ ನೆನಪು ಬಂದಾಗ ಭಕ್ತನ ಮನಸ್ಸು ತತ್ತರಿಸುತ್ತದೆ. ಈ ಅನುಭವವನ್ನು ಕೊನೆಯ ಚಿತ್ರ ಮತ್ತೂ ಸುಂದರವಾಗಿ ಚಿತ್ರಿಸುತ್ತದೆ....ಯಾವಾಗಲೂ ನೆಲದ ಮಟ್ಟದಲ್ಲೆ ಹಾರಿ ಸುಖಿಸುವ, ಹಾರಿದರೂ ನೆಲದ ಮೇಲೆ ಕಣ್ಣಿಟ್ಟಿರುವ ಕಾಗೆ ಮೇಲೆ ಮೇಲೆ ಏರಿದಾಗ ನೋಡಬೇಕು: ಹಾರಲಾರದು; ಆದರೆ ಸುತ್ತಲೂ ಅತ್ತ ಇತ್ತ ಹೋಗಬೇಕೆಂದು ಹಂಬಲಿಸಿ ಗರಿ ಬಡಿದು ಶಕ್ತಿ ಉಡುಗಿಸಿಕೊಳ್ಳುತ್ತದೆ. ಅದರ ರೆಕ್ಕೆಯ ಶಕ್ತಿಗಿಂತ ಮೈಯೆ ಭಾರವಾಗಿ ನೆಲವೆ ಆಧಾರವಾಗುತ್ತದೆ. ನೆಲೆಯಿಲ್ಲದೆ ಹಾರುವ ಕೋತಿಯಂತೆ ಮಾತ್ರವಲ್ಲದೆ ಮೇಲೇರಿ ಎತ್ತ ಹಾರಲೂ ಶಕ್ತಿಯಿಲ್ಲದ ನೆಲೆಯರಿಯದ ಕಾಗೆಯಂತೆ ಸಾಧಕನ ಮನಸ್ಸು ಒಮ್ಮೊಮ್ಮೆ ಆಗುವುದುಂಟು. ಸಾಧನೆಯ ಪ್ರಾರಂಭಾವಸ್ಥೆಯಲ್ಲಿ ಯಾವುದನ್ನು ಎಷ್ಟು ಸ್ವೀಕರಿಸಬೇಕು, ತನ್ನ ಸ್ವಧರ್ಮವೇನು ಎಂಬುದನ್ನು ಅರಿತಿಲ್ಲದೆ ಮೇಲೇರಿ ಹಾರಲಾಗದೆ ತತ್ತರಿಸುವ ಸಾಧಕನ ಅವಸ್ಥೆಯನ್ನು ಅಷ್ಟೆ ಅಲ್ಲ, ಶರಣಧರ್ಮಕ್ಕೆ ದೀಕ್ಷೆಗೊಂಡೂ ಅದರೆತ್ತರಕ್ಕೆ ಏರಲಾರದೆ ತೊಳಲುತ್ತಿದ್ದ ಶೂದ್ರವರ್ಗವನ್ನೂ ಈ ಕಾಗೆಯ ಚಿತ್ರ ಬಹಳ ಸೊಗಸಾಗಿ ಚಿತ್ರಿಸುತ್ತದೆ. ಕೋಡಗದ ಚಿತ್ರ ಮತ್ತೊಂದೆಡೆ ಅತ್ಯಂತ ಮಾರ್ಮಿಕವಾಗಿ ಬಂದಿದೆ.

ಭಗವಂತನನ್ನು ಕುರಿತು ಬಸವಣ್ಣನವರು ಸರಸವಾಗಿ ಗೇಲಿಮಾಡಿರುವುದು ಬಹಳ ವಿರಳ. ಈ ನಿಟ್ಟಿನಲ್ಲಿ ಹರಿದಾಸರು ಹೆಸರುವಾಸಿಯಾಗಿದ್ದಾರೆ. ಈ ಬಹು ಗಂಭೀರ ಸ್ವಭಾವದ ವ್ಯಕ್ತಿಯೂ ಒಂದೆರಡೆಡೆ ಶಿವನನ್ನು ಕೀಟಲೆಮಾಡಿರುವುದುಂಟು. ಅದೂ ಬಹು ಅರ್ಥಪೂರ್ಣವಾಗಿ ದರ್ಶನವತ್ತಾಗಿಯೆ ಇದೆ.

> "ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವ ಮಾಣೆ; ಗರುವತನವೆ?
> ದಾಸನ ವಸ್ತ್ರವನುಡುವುದೊಂದು ಗರುವತನವೆ?
> ಸಿರಿಯಾಳನ ಮಗನ ಬೇಡುವುದೊಂದು ಗರುವತನವೆ?
> ಕೋಡಗನ ಹುಲ್ಲಲಿ ಮುಸುಕಿದಂತೆ, ಕೂಡಲಸಂಗಮದೇವ, ನಿಮ್ಮ ಪರಿ!"

ಶಿವ ತನ್ನ ಭಕ್ತರನ್ನು ಪರೀಕ್ಷಿಸಲು ನಾನಾ ರೂಪದಿಂದ ಬಂದು ಎರೆಯುತ್ತಾನೆ, ಒರೆಯುತ್ತಾನೆ, ಅರೆಯುತ್ತಾನೆ; ಸತ್ತ್ವ ಕಂಡರೆ ಕೈಯಿಡಿದೆತ್ತಿಕೊಳ್ಳುತ್ತಾನೆ. ಇದನ್ನೆ ಬಸವಣ್ಣನವರು ಗೇಲಿ ಮಾಡುತ್ತಾರೆ. ಈ ದೇವರು ಹೇಗೆ ಹೇಗೊ ವೇಷ ಮರೆಸಿಕೊಂಡು ಬರುತ್ತಾನೆ; ಬೇಡಿ ಕಾಡುತ್ತಾನೆ; ಕಡೆಗೆ ತಾನೆ ತನ್ನ ಪರೀಕ್ಷೆಯಲ್ಲಿ ಸೋಲುತ್ತಾನೆ; ತನ್ನ ಭಕ್ತರ ಮುಂದೆ. ದಾಸನ ವಸ್ತ್ರ ಬೇಡಲು ಬಂದು ಹಾಗಾಯಿತು, ಸಿರಿಯಾಳನ ಮಗನನ್ನು ಬೇಡಿದಂದು ಹೀಗಾಯಿತು. ಆ ಭಕ್ತರ ಸತ್ತ್ವ ನೋಡಿ ಅವನ ಛದ್ಮವೇಷ ತಾನಾಗಿಯೆ ಕಳಚಿಹೋಗುತ್ತದೆ. ಶಿವನೂ ತನ್ನ ವಿರಾಟ್ ಸತ್ತ್ವವನ್ನು ಭಕ್ತರ ಮುಂದೆ ಬಹಳ ಹೊತ್ತು ಮುಚ್ಚಿಟ್ಟಿಕ್ಕಿರಲಾರ. ಇದಕ್ಕೆ ಬಸವಣ್ಣನವರು ಕೊಡುವ ಉಪಮೆ ಬಹು ಮನೋಜ್ಞ. ಹುಲ್ಲಿನಲ್ಲಿ ಮುಚ್ಚಿದ ಕೋಡಗ! ಒಳಗೆ ಕೋತಿಯನ್ನು ಇಟ್ಟು ಮೇಲೆ ಹೊರೆಗಟ್ಟಲೆ ಹುಲ್ಲು ಮುಚ್ಚಿ ಅದನ್ನು ಗುಟ್ಟಾಗಿಡಿ, ತಿಳಿಯುತ್ತದೆ. ಒಂದು

ಕ್ಷಣವಷ್ಟೆ ಆ ಕೋತಿ ಸುಮ್ಮನಿದ್ದೀತು. ತತ್‌ಕ್ಷಣವೆ ಆ ಹುಲ್ಲೆಲ್ಲವನ್ನೂ ಬಗಿದು ಹೊರಕ್ಕೆ ಬರುತ್ತದೆ, ಹಲ್ಲುಗಿರಿಯುತ್ತ. ಭಕ್ತರನ್ನು ವೇಷ ಮರೆಸಿಕೊಂಡು ಬಂದು ಪರೀಕ್ಷಿಸುವ ಶಿವ ಹೀಗೆ. ಇಲ್ಲಿ ಬಂದಿರುವ ಸಾದೃಶ್ಯ ತಟಕ್ಕನೆ ಹೋಲುವಂತೆ ತೋರದಿದ್ದರೂ ಇದರ ಉದ್ದೇಶವನ್ನು ತಿಳಿದರೆ ಈ ಚಿತ್ರ ಅತ್ಯಂತ ರಮ್ಯವಾಗಿ ತೋರೀತು.

ಶಿವಶರಣತ್ವವನ್ನು ಸ್ವೀಕರಿಸಿದ ಸಾಧಾರಣರು ಲಿಂಗಧಾರಣೆ ಮಾಡಿದರೇ ವಿನಾ ತಮ್ಮನ್ನು ಸ್ವರೂಪತಃ ಪರಿವರ್ತಿಸಿಕೊಳ್ಳಲಿಲ್ಲ. ಬಸವಣ್ಣನವರು ಲಿಂಗದ ಮಹಿಮೆಯನ್ನು ಹೇಳುವಾಗ ಮೊದಮೊದಲು, ಅದನ್ನು ಧರಿಸಿದವನು ಮಾಂಸ ಮದ್ಯಗಳನ್ನು ತಿನ್ನುತ್ತ, ಕುಡಿಯುತ್ತ, ಕೈಯಲ್ಲಿ ಕತ್ತಿ ಹಿಡಿದುಕೊಂಡು ಬಂದರೂ ಅಂತಹವನನ್ನು ಶಿವನೆನ್ನುತ್ತೇನೆ ಎನ್ನುವ ಅತಿಔದಾರ್ಯ ತೋರುತ್ತಾರೆ. ಕಾಲಕ್ರಮೇಣದಲ್ಲಿ ಅವರ ಸಾಧನೆ ಮುಂದುವರೆದಂತೆ, ಲೋಕಾನುಭವ ಅಧಿಕವಾದಂತೆ, ಅಲ್ಲಮಪ್ರಭುವಿನ ದರ್ಶನವಾದ ಮೇಲೆ ತಮ್ಮ ಮೊದಲ ಭಾವಾತಿರೇಕವನ್ನು ತಿದ್ದಿಕೊಳ್ಳಬೇಕಾಗುತ್ತದೆ. ಆಗ ಲಿಂಗಮಹಿಮೆಯ ಜತೆಗೆ ಆ ಮಹತ್ತನ್ನು ಧಾರಣಮಾಡಲು ಲಿಂಗಧಾರಿಗೆ ಅಂತಸ್ಸತ್ತ್ವವೂ ಅತ್ಯಗತ್ಯವೆಂದು ಅರಿತುಕೊಳ್ಳುತ್ತಾರೆ. ಆದರೆ ಲಿಂಗದ ಮಹಿಮೆಯ ವಿಚಾರವಾಗಿ ಅವರಿಗೆ ಸಂಶಯವಿಲ್ಲ; ತಪ್ಪೇನಿದ್ದರೂ ಧರಿಸಿದವನದೆ ಎಂಬ ಭಾವನೆಯನ್ನು ಮೇಲಿನ ವಚನದಲ್ಲಿ ಬಹು ಮಾರ್ಮಿಕವಾಗಿ ವ್ಯಕ್ತಗೊಳಿಸಿದ್ದಾರೆ. ಲಿಂಗಧಾರಿಯಾದ ಮಾತ್ರದಿಂದಲೆ ಹಿಂದೆ ಮಾಡುತ್ತಿದ್ದ ಎಲ್ಲವನ್ನೂ ಮಾಡಬಹುದು ಎಂದು ಹಲವರು ಭ್ರಮಿಸಿದ್ದರು. ಲಿಂಗದ ಮಹಿಮೆ ಅವರನ್ನು ಸ್ವಲ್ಪವೂ ಪರಿವರ್ತಿಸಲಿಲ್ಲವೆಂದಲ್ಲ. ಆದರೆ ಅವರು ಅವಕ್ಕೆ ತಕ್ಕನಾಗಿ ಪರಿಣಾಮಗೊಳ್ಳಲಿಲ್ಲ.

> "ಕಬ್ಬುನದ ಕೋಡಗವ ಪರುಷ ಮುಟ್ಟಲು
> ಹೊನ್ನಾದರೇನು, ಮತ್ತೇನಾದರೇನು?
> ತನ್ನ ಮುನ್ನಿನ ರೂಹ ಬಿಡದನ್ನಕ್ಕ?
> ಕೂಡಲ ಸಂಗಮದೇವಾ ನಿಮ್ಮ ನಂಬಿಯೂ ನಂಬದ ಡಂಬಕರಿಗಯ್ಯ."

ಕಬ್ಬುನದ ಕೋಡಗ ಪರುಷಸ್ಪರ್ಶದಿಂದ ಚಿನ್ನದ ಕೋಡಗವಾಯಿತಷ್ಟೆ. ಸ್ವರೂಪ ಪರಿವರ್ತನವಾಯಿತು. ಇದೇನೋ ಮುಖ್ಯವೇ ಸರಿ. ಆದರೆ ರೂಪ ಪರಿವರ್ತನವೂ ಆಗಲೇಬೇಕು. ಹಾಗೆ ಆಗದೆ ಬರಿದೆ ಚಿನ್ನವಾದ್ದರಿಂದ ಅದು ಬೆಲೆಯುಳ್ಳುದಾಯಿತೆ ವಿನಾ ಪೂಜ್ಯವಾಗಲಿಲ್ಲ. ವ್ಯಾಪಾರಿಗೆ ವಸ್ತುವಾಯಿತೆ ವಿನಾ ಭಕ್ತ ಪೂಜ್ಯಾರ್ಹವಾಗಲಿಲ್ಲ. ಈ ವಚನಚಿತ್ರ ಭಾವ ಗೌರವ ದೃಷ್ಟಿಯಿಂದ ತುಂಬಾ ಶ್ರೇಷ್ಠವಾದುದು.

ಶಿವದೀಕ್ಷೆ ಪಡೆದವನು ಅದಕ್ಕೆ ಯೋಗ್ಯನಾಗುವಂತಿರಬೇಕು. ತನ್ನ ಹಿಂದಿನ ದುರಾಚಾರ ವ್ಯವಹಾರಗಳನ್ನು ಬಿಡಬೇಕು. ಬಿಡದಿದ್ದರೆ? ಲಿಂಗವಂತನೇನೊ ಆದ; ಆದರೇನು. ಮೇಲಿನ ರೂಪಕದಿಂದಲೂ ಪರಿಣಾಮವಾಗದಿದ್ದಾಗ ರೂಕ್ಷವಾದ ವಾಚ್ಯಕಲೆ ನೆರವಾಗುತ್ತದೆ:

"ಕತ್ತೆ ಭಕ್ತನಾದರೆ ಕಿಸುಕುಳವ ತಿಂಬುದ ಮಾಣ್ಬುದೆ?
ಬೆಕ್ಕು ಭಕ್ತನಾದರೆ ಇಲಿಯ ತಿಂಬುದ ಮಾಣ್ಬುದೆ?
ಹಂದಿ ಭಕ್ತನಾದರೆ ಹಡಿಕೆಯ ತಿಂಬುದ ಮಾಣ್ಬುದೆ?
ಶುನಕ ಭಕ್ತನಾದರೆ ಮೂಳೆಮಾಂಸದ ತಿಂಬುದ ಮಾಣ್ಬುದೆ?
ಕೋಳಿಯ ತಂದು ಹಂಜರವ ಕೂಡಿ ಅಮೃತಾನ್ನವನಿಕ್ಕಿ ಸಲಹಿದಡೆ
ಅದು ತಾನೆ ಮತ್ತೆ ತಿಂಬ ಹಡಕಿಂಗೆ ಚಿತ್ತವನಿಕ್ಕುವುದ ಮಾಣ್ಬುದೆ?
ಆ ಕತ್ತೆ ಬೆಕ್ಕು ಸೂಕರ ಕೋಳಿಗಿಂದತ್ತತ್ತ ಕಡೆ..."

ಎಂದು ಶಸ್ತ್ರ ಚಿಕಿತ್ಸೆಯನ್ನು ಆರಂಭಿಸುತ್ತಾರೆ. ಮೇಲಿನ ವಚನದಲ್ಲಿ ಸ್ವಭಾವ ಪರಿವರ್ತನವಾಗಬೇಕೆಂಬುದನ್ನೂ ಇದರಲ್ಲಿ ಅದು ಎಷ್ಟು ದುರತಿಕ್ರಮವಾದದು ಎಂಬುದನ್ನೂ ಸೂಚಿಸಿದ್ದಾರೆ. ಇದರಿಂದ ಎಷ್ಟೋ ಭಕ್ತರು ಪ್ರತಿಭಟಿಸಿರಬೇಕು, ನೊಂದಿರಬೇಕು. ತಮ್ಮೊಳಗಾದ ಈ ಭಾವಕ್ರಾಂತಿಯನ್ನು ಅಂದಿನ ಹಲವು ಸಾಧಾರಣ ಭಕ್ತರು ತಪ್ಪು ತಿಳಿದಿರಬೇಕು, ಕಂಡು ಅಸಮಾಧಾನಗೊಂಡಿರಬೇಕು. ಬಸವಣ್ಣನವರಿಗೆ ಕಷ್ಟವಾಗಿದೆ ಆಗ. ತಪ್ಪನ್ನು ಕಂಡೂ ತಿದ್ದದೆ ಹೋದರೆ ತಮಗೂ ಪಾಪ, ತಪ್ಪು ಮಾಡುವವರಿಗೂ ಕೇಡು. ಎಲ್ಲಕ್ಕಿಂತ ಹೆಚ್ಚಾಗಿ ಅನ್ಯಸಮಯಾಚಾರಿಗಳ ಕ್ರೂರ ಅವಹೇಳನಕ್ಕೆ ನೀರೆರೆದಂತಾಗುವುದಲ್ಲ ಎಂಬ ದುಃಖ. ಆಗ ಅವರಿಗೆ ಉಭಯಸಂಕಟ.

"ತಂಡೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ
ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ.
ಲಿಂಗವಂತ ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ
ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ
ಲಿಂಗಭಕ್ತನು ಲಿಂಗಪಥವ ಹೇಳಿದರೆ
ಮಚ್ಚರಿಸುವರ ಮೆಚ್ಚ ಕೂಡಲ ಸಂಗಮದೇವ"

ಎಂಬ ಸಮಾಧಾನದ 'ಅನೆಸ್ತೆಸಿಯ'ವನ್ನು ಕೊಟ್ಟು ಮತ್ತೆ ತಮ್ಮ ನೂತನ ಶಸ್ತ್ರ ಚಿಕಿತ್ಸೆಯನ್ನು ಪ್ರಾರಂಭಿಸುತ್ತಾರೆ.

"ಮರ್ಕಟನ ಕೈಯಲ್ಲಿ ಮಾಣಿಕವಿರ್ದು ಫಲವೇನು?
ನಮ್ಮ ಕೂಡಲ ಸಂಗನ ಶರಣರನರಿಯದನ ಕೈಯಲ್ಲಿ
ಲಿಂಗವಿರ್ದು ಫಲವೇನು ಶಿವಪಥವನರಿಯದನ್ನಕ್ಕ?"

ಲಿಂಗವಿದ್ದರೂ ಭಕ್ತನಲ್ಲ. ಅದರ ಅರಿವು ಇಲ್ಲದಿದ್ದರೆ ಅವನ ಪರಿವರ್ತನೆ ಪೂರ್ಣವಾಗುವುದಿಲ್ಲ. ಅದು ದುರ್ಬಲನಿಗೆ ಮಾರಕವೂ ಆಗಬಹುದು.

"ಹುಲಿಯ ಹಾಲು ಹುಲಿಗಲ್ಲದೆ ಹೊಲದ ಹುಲ್ಲೆಗೆ ಉಣಿಸಬಾರದು
ಕಲಿಯ ಕಾಲ ತೊಡರು ಛಲದಾಳಿಗಲ್ಲದೆ ಇಕ್ಕಬಾರದು
ಅಳಿಮನದಾಸೆಯುವರ ಮೂಗ ಹಲುದೋಟಿ ಕೊಯ್ವ ಕೂಡಲಸಂಗಮದೇವ"

ಬರಿದೆ ಸಾನ್ನಿಧ್ಯ ಮಹಿಮೆಯಿಂದಲೆ ಎಲ್ಲ ಉದ್ಧಾರವಾಗುವುದಿದ್ದರೆ ಈ ವೇಳೆಗೆ ಎಲ್ಲರೂ ಮುಕ್ತರಾಗುತ್ತಿದ್ದರಲ್ಲ. ಬರಿಯ ಅನುಕರಣದಿಂದಲಾದರೂ ದೊಡ್ಡವರಾಗುವುದಿದ್ದರೆ ಎಲ್ಲರೂ ದೊಡ್ಡವರಾಗುತ್ತಿದ್ದರಲ್ಲ:

"ಹೊನ್ನಹುಳುವ ಕಂಡು ನರಿ ತನ್ನ ಬಾಲವ
ಹುಣ್ಣು ಮಾಡಿಕೊಂಡರೆ ಹೋಲಬಹುದೆ?"

ಅನುಕರಣೆಯಾಗಲಿ, ಬರಿಯ ಹಾಡಾಗಲಿ ಜ್ಞಾನವಾಗಲಿ ಯಾವುದೂ ಕೊನೆ ಮುಟ್ಟಿಸದು. ಕಾರಣ:

"ಆಡಿದರೇನೊ, ಹಾಡಿದರೇನೊ, ಓದಿದರೇನೊ—
ತ್ರಿವಿಧ ದಾಸೋಹವನರಿಯದನ್ನಕ್ಕ?
ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ"

ಕಾಗೆಯ ಚಿತ್ರ ಬಹು ಚೆನ್ನಾಗಿ ಹಿಂದೆ ಬಂದಿರುವುದನ್ನು ನೋಡಿದ್ದೇವೆ. ಮತ್ತೆ ಒಂದೆರಡು ನಿದರ್ಶನಗಳನ್ನು ನೋಡಬಹುದು. ಭಕ್ತನಿಗೆ ಬದುಕಿನಲ್ಲಿ ಇರುವ ಆಸೆಗೂ ಲೌಕಿಕನಿಗಿರುವ ಬಯಕೆಗೂ ವ್ಯತ್ಯಾಸವಿದೆ. ಲೌಕಿಕವಾಗಿ ದೊಡ್ಡವನಾಗಬೇಕು, ಮೆರೆಯಬೇಕು, ಹೊನ್ನಕಳಸವಾಗಬೇಕು ಎಂಬ ಆಸೆ ಲೌಕಿಕನದು. ಭಕ್ತನ ಬಯಕೆ ತಾನು ದೀನವಾಗಿ ಭಗವಂತನ ಭಕ್ತರ ಹಾವುಗೆಯಾಗಬೇಕು ಎಂದು. ಲೋಕ ಗೌರವಭಾಜನವಾಗುವ ಹೊನ್ನಕಳಸದಮೇಲೆ ಕಾಗೆ ವಿಷ್ಟಿಸುತ್ತದೆ. ಆದ್ದರಿಂದ ಅಂತಹ ಪದವಿಯಾದರೂ ಏಕೆ? ಅದಕ್ಕಿಂತ ಭಕ್ತನ ಚರ್ಮ ಪಾದುಕೆಯಾದರೆ ಯಾವ ಮೆರವಣಿಗೆಯಿಲ್ಲದೆಯೆ ಪವಿತ್ರನಾಗಬಹುದು.

"ಕಾಗೆ ವಿಷ್ಟಿಸುವ ಹೊನ್ನ ಕಳಸವಹುದರಿಂದ
ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯ
ಅಯ್ಯಾ ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯ"

ಭಕ್ತಿಹೀನರ ದಾಸೋಹವನ್ನು ಸದ್ಭಕ್ತರು ಸವಿಯುವುದಿಲ್ಲ. ಭವಿಗಳು ಅದನ್ನೆ ರುಚಿಸಬಹುದು. ಕಾರಣ: 'ಬೇವಿನ ಹಣ್ಣು ಕಾಗೆಗೆ ಇನಿದಲ್ಲದೆ ಕೋಗಿಲೆಗೆ ಮೆಲಬಾರದು!'

ಇದೇ ಕಾಗೆಯ ಚಿತ್ರ ಮತ್ತೊಂದೆಡೆ ಬೇರೊಂದು ಭಾವವನ್ನು ಚಿತ್ರಿಸಲು ಬರುತ್ತದೆ:

"ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು?
ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ ಕಾಗೆ ಕೋಳಿಗಿಂತ ಕರಕಷ್ಟ!"

ಕಾಗೆ ಕೋಳಿಗಳ ಈ ಗುಣವನ್ನು ಮಾನವತೆ ಕಲಿಯಬೇಕಾದುದೆ ಸರಿ. ಪ್ರಾಣಿ ರೂಪಕದಲ್ಲಿ ನಾವು ಕಾಣುವುದು ಕೇವಲ ಮಾನವನ ಕ್ಷುದ್ರ ಗುಣಕ್ಕೆ ಸಂಕೇತವಾಗಿ ಬರುವ ಪ್ರಾಣಿ ಚಿತ್ರವನ್ನೇ ಅಲ್ಲ ಎಂಬುದಕ್ಕೆ ಈ ವಚನ ಚಿತ್ರವೇ ಸಾಕ್ಷಿ.

ತನ್ನೊಳಗನ್ನು ಅರಿಯಲಾರದ, ಕಂಡಕಂಡವರ ದೋಷಗಳನ್ನು ಎತ್ತಿ ಆಡುವ ಜನರನ್ನು ಕಂಡು ನುಡಿಯುವಾಗ ಗಿಳಿಯ ರೂಪಕವನ್ನು ಬಳಸುತ್ತಾರೆ

"ಗಿಳಿಯೋದಿ ಫಲವೇನು ?
ಬೆಕ್ಕು ಬಹುದ ಹೇಳಲರಿಯದು
ಜಗವೆಲ್ಲ ಕಾಂಬ ಕಣ್ಣು :
ತನ್ನ ಕೊಂಬ ಕೊಯಿಲೆಯ ಕಾಣಲರಿಯದು !
ಇದಿರ ಗುಣವ ಬಲ್ಲವೆಂಬರು !
ತಮ್ಮ ಗುಣವನರಿಯರು !

ಎಲ್ಲವನ್ನು ಓದುತ್ತದೆ; ಆದರೇನು ? ತನ್ನನ್ನು ಕೊಲ್ಲುವ ಬೆಕ್ಕು ಯಾವಾಗ ಎಲ್ಲಿಂದ ಬಂದೀತೆಂಬುದನ್ನು ಅರಿಯದು. ತನ್ನ ಹಂಜರವನ್ನು ನಂಬಿ, ಆ ಹಂಜರ ದಿಟಕ್ಕೂ ಬಲ್ಲಿತ್ತೆಂದು ಅಂಜದೆ ಓದುತ್ತದೆ. ತಾನೆಂದೂ ಅಳಿಯೆನೆಂದರೂ ಮನದೊಳಗಣ ಮಾಯಾ ಮಂಜರ ಕೊಲ್ಲುವುದಾದರೆ ಹಂಜರ ಕಾಯುವುದಾದರೂ ಎಂತು ? ಬಂದೆ ತನ್ನೊಳಗೆ ಗುಡಿಗಟ್ಟಿಕೊಂಡರೆ ಹೇಗೆ? ವಸ್ತುವಿಜ್ಞಾನವಿದ್ದು ಆತ್ಮವಿಜ್ಞಾನವಿಲ್ಲದವರನ್ನು ವಾಗಧ್ಯಾತ್ಮಿಗಳನ್ನು ಈ ಮಾತಿಗಿಂತಲೂ ಬೇರೆ ಶಕ್ತಿಯುತವಾಗಿ ಚಿತ್ರಿಸುವುದು ಸುಲಭವಲ್ಲ.

"ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ !
ಎಂದೆಂದೂ ಅಳಿಯೆನೆಂದು ಗುಡಿಗಟ್ಟಿದೆಯಲ್ಲಾ !
ನಿನ್ನ ಮನದಲ್ಲಿ ಮಾಯಾಮಂಜರ ಕೊಲ್ಲುವರೆ
ನಿನ್ನ ಹಂಜರ ಕಾವುದೆ ?"

ಮೊದಲು ಬಂದ ಗಿಳಿಯ ರೂಪಕಕ್ಕಿಂತ ಇದು ಹೆಚ್ಚು ಆಂತರಿಕ, ಅವಿಭಾಜ್ಯ. ಆದರೆ ಇದೇ ಗಿಳಿಯನ್ನು, ಪಂಜರವನ್ನು ಬೇರೊಂದೆಡೆ ಭಿನ್ನವಾದ ಅನುಭವವೊಂದರ ವರ್ಣನೆಗೆ ಬಳಸಿದ್ದಾರೆ :

"ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ
ಸಲಹುತ್ತ "ಶಿವಾಶಿವಾ" ಎಂದೋದಿಸಯ್ಯಾ !
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು
ಕೂಡಲಸಂಗಮದೇವಾ !"

(ಮುಂದಿನ ಸಂಚಿಕೆಗೆ)

★ ★

ಮಾತು ಜ್ಯೋತಿರ್ಲಿಂಗ

(ಸಂಗ್ರಹ) ಎಸ್. ಷಡಕ್ಷರಿ

ಉದಾರನಾಗು, ಕೃಪಾಳುವಾಗು, ಎಲ್ಲರೊಡನೆಯೂ, ಸಮಾನತೆಯಿಂದ ವ್ಯವಹರಿಸು.... ಆದರೆ ಲಘುವೆನಿಸಬೇಡ. ಇತರರು ನಿನ್ನ ಮೇಲೆ ಸವಾರಿ ಮಾಡುವಂತೆ ಅವರಿಗೆ ನಿನ್ನ ಗುಟ್ಟು ಬಿಟ್ಟುಕೊಡಬೇಡ.

* * *

ನಿಮ್ಮ ಹೃದಯ ಪವಿತ್ರವಾಗಿದ್ದರೆ ಆಚರಣೆ ಸುಂದರವಾಗುವುದು ; ನಿಮ್ಮ ಆಚರಣೆ ಸುಂದರವಾಗಿದ್ದರೆ ಸಂಸಾರದಲ್ಲಿ ಶಾಂತಿ ಇರುವುದು ; ಸಂಸಾರದಲ್ಲಿ ಶಾಂತಿ ಇದ್ದರೆ ರಾಷ್ಟ್ರದಲ್ಲಿ ಸುವ್ಯವಸ್ಥೆ ಇರುವುದು ; ಮತ್ತು ನಿಮ್ಮ ರಾಷ್ಟ್ರದಲ್ಲಿ ಸುವ್ಯವಸ್ಥೆ ಇದ್ದರೆ ಇಡೀ ಜಗತ್ತಿನಲ್ಲಿ ಸುಖ ಉಂಟಾಗುವುದು.

—ಕನ್‌ಫ್ಯೂಷಿಯಸ್

ಮಿತ್ರನಿಲ್ಲದೆ ಹೋದರೆ ಅವನಿಗಾಗಿ ಹುಡುಕಾಡಿ; ಆತ ಸಿಕ್ಕಿದ ಮೇಲೆ ಅವನನ್ನು ಕಳೆದುಕೊಳ್ಳಬೇಡಿ. ಗೆಳೆಯನನ್ನು ಆಗಾಗ ಭೆಟ್ಟಿಯಾಗುತ್ತಿರಿ. ಇಲ್ಲವಾದರೆ ಅವನ ಮನೆಯ ಮಾರ್ಗದಲ್ಲಿ ಹುಲ್ಲು ಕಂಟಿ ಬೆಳೆದುಬಿಟ್ಟೀತು.

—ಒಂದು ರಷಿಯ ಗಾದೆ

ಜಟೆಗಳನ್ನು ಬಿಟ್ಟರೇನು ? ನೆಲದ ಮೇಲೆ ಮಲಗಿದರೇನು ? ಧೂಳು ಬಳಿದುಕೊಂಡರೇನು ? ಆಸೆಗಳನ್ನು ಬಿಡದಾತ ಶುದ್ಧನಾಗಲಾರ.

—ಬುದ್ಧ

ನಮ್ಮ ಹೃದಯವೆಂಬ ಗ್ರಂಥವನ್ನು ಓದಲು ಕಲಿಯುವತನಕ ಎಲ್ಲ ಗ್ರಂಥಗಳೂ ನಿರುಪಯೋಗಿ.

—ಸ್ವಾಮಿ ವಿವೇಕಾನಂದ

ನಿನ್ನ ಬಗ್ಗೆ ಇತರರೇನನ್ನುತ್ತಾರೆ ಪ್ರಪಂಚ ಏನೆನ್ನುತ್ತದೆ, ಎನ್ನುವುದಕ್ಕಿಂತ ನಿನ್ನ ಅಂತರ್ವಾಣಿ ಏನನ್ನುತ್ತದೆ ? ಎಂಬುದಕ್ಕೆ ಹೆಚ್ಚು ಬೆಲೆ ಕೊಡು.

—ಅರ್ರಿನ್ಸ್ ಮಾರ್ಡನ್

ಮಹಾತ್ಮರಾಗುವ ಭಾಗ್ಯ ಎಲ್ಲರಿಗೂ ಇಲ್ಲ.

—ಡ್ರೈಡೆನ್

ಭಕ್ತಿಗೀತೆ

ಓಂ ನಮಃಶಿವಾಯೆಂಬ ನಾಮದ ಬೀಜವ
ನಾಲಿಗೆ ತುದಿಯಲ್ಲಿ ಬಿತ್ತಿರೋ ॥ ಪಲ್ಲವಿ ॥
ಹೃದಯ ಹೊಲವ ಮಾಡಿ ಮನದ ನೇಗಿಲಗೂಡಿ
ಶ್ವಾಸಕೋಶವೆಂಬ ಎರಡೆತ್ತುಗಳ ಹೂಡಿ
ಜ್ಞಾನೋದಯವೆಂಬ ಹಗ್ಗ ಕಣ್ಣಿಯ ಮಾಡಿ
ನಿರ್ಮಲವೆಂಬ ಕುಂಟೆ ಹೊಡೆಯಿರಯ್ಯ. ॥ ೧ ॥
ಮದಮತ್ಸರವೆಂಬ ಮರಗಳ ಕಡಿಯುತ
ಕಾಮಕ್ರೋಧವೆಂಬ ಕಳೆಯನೆ ಕಿತ್ತು
ಪಂಚೇಂದ್ರಿಯಗಳ ಮಂಚಿಕೆಯನೆ ಹೂಡಿ
ಚಂಚಲವೆಂಬ ಪಕ್ಷಿ ಹೊಡೆಯಿರಯ್ಯ. ॥ ೨ ॥
ಉದಯಾಸ್ತಮಾನವೆಂಬ ಎರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆಯುತ್ತಿದೆ
ಸ್ವಾಮಿ ಶ್ರೀ ಕೂಡಲ ಸಂಗನ ನೆನೆದರೆ
ಹುಟ್ಟು ಸಾವು ಎಂಬುದಿಲ್ಲವಯ್ಯ. ॥ ೩ ॥

ಸಂಗ್ರಹ : ಮಾತಾಜಿ

ಶ್ರೀ ಬಸವಣ್ಣನವರು

★ ★ ★

ಸುಖ

ಸುಖಕ್ಕಾಗಿ ಹುಡುಕಿ ಹುಡುಕಿ ನಿಮಗೆ ಸುಖ ದೊರೆಯಲೂಬಹುದು. ಕನ್ನಡಕಕ್ಕಾಗಿ ಹುಡುಕಿ-ಹುಡುಕಿ, ಕಡೆಗೆ ತನ್ನ ಮೂಗಿನ ಮೇಲೆಯೇ ಮುದುಕಿಗೆ ಅದು ಸಿಕ್ಕಿದ ಹಾಗೆ.

—ಜಾನ್‌ಬಿಲ್ಲೋ

ಕೆಲವರಿಗೆ ನಾರು ಬಟ್ಟೆಯಿಂದ ಸುಖವಾಗುತ್ತದೆ. ಕೆಲವರಿಗೆ ರೇಷ್ಮೆ ಬಟ್ಟೆಯಿಂದ. ಸುಖ ಎರಡೂ ಒಂದೇ. ಯಾರ ಆಶೆ ದೊಡ್ಡದೋ ಅವನೇ ದರಿದ್ರ. ಮನಸ್ಸು ಸಂತುಷ್ಟವಾಗಿದ್ದರೆ ಬಡವನಾರು? ಶ್ರೀಮಂತನಾರು?

—ಭರ್ತೃಹರಿ

ಕೆಲವರು ಬಂದಾಗೆಲ್ಲ ಸುಖವನ್ನು ಹಬ್ಬಿಸುತ್ತಾರೆ;
ಕೆಲವರು ಹೋದಾಗೆಲ್ಲ ಸುಖವನ್ನು ಹಬ್ಬಿಸುತ್ತಾರೆ.

—ಆಸ್ಕರ ವೈಲ್ಡ್

ನಿಜವಾದ ಸುಖ ಬಲು ಅಗ್ಗವಾಗಿದೆ; ಆದರೆ ಅದರ ಖೊಟ್ಟಿ ಪ್ರತಿಗಾಗಿ ನಾವು ಬಹಳ ಬೆಲೆ ತೆರುತ್ತೇವೆ.

—ಜೋನ ಬಿಲಿಂಗ್ಸ್

ಜೀವಂತನಾದವನಿಗೆ ಸುಖ (ಆನಂದ)ವು ನೂರುವರ್ಷ ಕಳೆದಾದರೂ ಸಿಕ್ಕಿಯೇ ಸಿಗುತ್ತದೆ.

—ಶ್ರೀ ವಾಲ್ಮೀಕಿ

(ಸಂಗ್ರಹ) ಎಸ್. ಷಡಕ್ಷರಿ

ಗಾಂಧಿ, ನೀ ಏಕಾಂಗಿ

—ಎಸ್. ಷಡಕ್ಷರಿ

ನಡೆ ಏಕಾಂಗಿಯಾಗಿ,
ಅವರು ನಿನ್ನ ಕರೆಗೆ ಮಾರ್ದನಿಗೊಡದಿದ್ದರೇನು ನಡೆ ಏಕಾಂಗಿಯಾಗಿ;
ಭಯ ಭರಿತರಾಗಿ ಗೋಡೆಯ ಹಿಂದೆ ಅವರು ಮೂಕರಂತೆ ಅವಿತುಕೊಂಡರೇನು
ಓ ವಿಧಿ ವಂಚಿತನೇ,
ಮನದೆರೆದು ನೀನೆ ಮಾತನಾಡು.
ದಟ್ಟಡವಿಯಲಿ ಸಾಗುವಾಗ ನಿನ್ನನವರು ತ್ಯಜಿಸಿ ಹಿಂದೆ ನಿಂತರೇನು,
ಓ ವಿಧಿವಂಚಿತನೇ,
ಪಾದತಳದ ಮುಳ್ಳು ಹಾದಿಯನೇ ತುಳಿದು ಮುಂದೆ ನಡೆ,
ರಕ್ತಸಿಂಚಿತ ದಾರಿಗುಂಟ ಏಕಾಂಗಿಯಾಗಿ ನಡೆ,
ಬಿರುಗಾಳಿಯೆದ್ದ ನಿಶೆಯಲವರು ಬೆಳಕ ತೋರದಿರೆ
ಓ, ವಿಧಿ ವಂಚಿತನೇ,
ದುಃಖ ತಪ್ತ-ಸಿಡಿಲು-ಜ್ವಾಲೆಯಿಂದ ನಿನ್ನೆದೆಯ
ಬೆಳಕ ಹೊತ್ತಿಸು,
ಬೆಳಗಲದೇ ಏಕಾಂಗಿಯಾಗಿ.

ರವೀಂದ್ರನಾಥ ಠಾಕೂರರ ಈ ಕವನ ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾಗಿತ್ತು. ತಮ್ಮ ಅಂತಿಮದಿನಗಳಲ್ಲಂತೂ, ಈ ಕವನವನ್ನು ಬಹಳ ಸಾರಿ ನೆನಪು ಮಾಡಿಕೊಳ್ಳುತ್ತಿದ್ದರು. ಅವರಿಗೆ ಗೊತ್ತಿತ್ತು ತಾವು ಏಕಾಂಗಿ ಎಂದು.

೧೯೪೭ರ ಆರಂಭದಲ್ಲಿ ಭಾರತದ ರಾಜಕೀಯ ದಿಗಂತ ಅತ್ಯಂತ ಕಾರ್ಗತ್ತಲಿನಿಂದ ಕೂಡಿತ್ತು. ಒಂದು ರೀತಿಯ ಅಘೋಷಿತ ಅಂತರ್ಯುದ್ಧವೇ ನಡೆಯುತ್ತಿರುವಂತೆ ಕಂಡುಬರುತ್ತಿತ್ತು. ಪ್ರತಿಯೊಂದು ಹಳ್ಳಿ ಮತ್ತು ಪಟ್ಟಣಗಳೂ ರಣರಂಗವಾಗಿದ್ದುವು. ಜಾತಿವಾದಿ ರಾಜಕಾರಣಿಗಳ ದುರಾಸೆ-ಅಧಿಕಾರ ಲಾಲಸೆ ಕೋಮುವಾರು ಗಲಭೆಗಳ ಸರಣಿಯನ್ನೆ ಸೃಷ್ಟಿಸಿದ್ದವು. ಈ ಹಿಂಸಾಕೃತ್ಯಗಳು ಗಾಂಧೀಜಿಗೆ ತಲ್ಲಣಗೊಳಿಸುವ ವಿಷಯವಾಗಿದ್ದವು. ಭಾರತ ಜಗತ್ತಿಗೆ ಅಹಿಂಸೆಯ ಆದರ್ಶ ತೋರಿಸುವ ದಿನ ಬರಲೆಂದು ಅವರು ತಮ್ಮ ಜೀವನವನ್ನೆಲ್ಲಾ ಧಾರೆ ಎರೆದಿದ್ದರು. ಅವರ ಹೃದಯದ ಆಕಾಂಕ್ಷೆಗೂ

ವಾಸ್ತವಿಕ ಸ್ಥಿತಿಗೂ ಇದ್ದ ಅಗಾಧ ಕಮರಿಯನ್ನು ಕಂಡು ವಿಫಲತೆಯ ಭಾವ ಜನಿಸದೇ ಇರಲಿಲ್ಲ.

ಗಾಂಧೀಜಿ ಆಗಾಗ ಅರ್ಧ ಗಂಭೀರತೆಯಿಂದಲೂ ಅರ್ಧ ವಿನೋದಕ್ಕಾಗಿಯೂ ೧೨೫ ವರ್ಷ ಬದುಕಬೇಕೆಂಬ ಆಶೆಯನ್ನು ವ್ಯಕ್ತಪಡಿಸುತ್ತಿದ್ದುದುಂಟು. ಆದರೆ ೧೯೪೬-೪೭ ರಲ್ಲಿ ದೇಶದ ಎಲ್ಲೆಡೆಯಲ್ಲಿ ನಡೆಯುತ್ತಿದ್ದ ಕೋಮುವಾರು ಗಲಭೆಗಳಿಂದ ನೊಂದು "ಈ ಭ್ರಾತೃ ಹತ್ಯೆಯನ್ನು ನಾನು ಕಣ್ಣಿನಿಂದ ನೋಡುತ್ತ ಬದುಕಿರಲಾರೆ" ಎಂದು ಆಗಾಗ ನುಡಿಯಲಾರಂಭಿಸಿದರು.

ಆ ಸಮಯದಲ್ಲಿ ಐವತ್ತು ಲಕ್ಷದಷ್ಟು ಹಿಂದುಗಳು ಮತ್ತು ಸಿಕ್ಕರು ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬಿಗೂ, ಅಷ್ಟೇ ಸುಮಾರು ಜನ ಮುಸ್ಲಿಮರು ಪೂರ್ವ ಪಂಜಾಬಿನಿಂದ ಪಶ್ಚಿಮ ಪಂಜಾಬಿಗೂ ಸ್ಥಾನಪಲ್ಲಟರಾದಾಗ ಉಂಟಾದ ಮಾನವೀಯ ಭವಣೆ ಘೋರವಾಗಿದ್ದಿತು. ನಿರಾಶ್ರಿತರು ಬಂದು ತಮ್ಮ ದಾರುಣ ಕಥೆಯನ್ನು ಹೇಳಿಕೊಳ್ಳುತ್ತಾ ಹೋದಂತೆ ಹಿಂಸಾಕೃತ್ಯಗಳು ಭುಗಿಲೆಂದು ಹೇಳುತ್ತಿದ್ದವು.

ಗಾಂಧೀಜಿ ಶಾಂತಿಯ ಧ್ವಜವನ್ನು ಹಿಡಿದು, ಪಂಜಾಬ್, ಕಾಶ್ಮೀರ, ಬಿಹಾರ, ಬಂಗಾಲವನ್ನೆಲ್ಲಾ ಸುತ್ತಾಡಿದರು. ಒಂದೆಡೆ ಪರಿಸ್ಥಿತಿ ಶಾಂತವಾದರೆ ಇನ್ನೊಂದೆಡೆ ವಿಪರೀತಾವಸ್ಥೆ ತಾಳುತ್ತಿದ್ದವು. ರಾಜಕೀಯ ಪರಿಸ್ಥಿತಿ ದಿನೇ ದಿನೇ ಬದಲಾಗುತ್ತಿತ್ತು.

ಗಾಂಧೀಜಿ ದೇಶ ವಿಭಜನೆಗೆ ಸಂಪೂರ್ಣ ವಿರುದ್ಧರಾಗಿದ್ದರು. ಆದರೆ ಅವರ ಪ್ರಿಯ ಶಿಷ್ಯರೇ, ಗಾಂಧೀಜಿಯವರ ಭಾವನೆಗಳಿಗೆ ಬೆಲೆಕೊಡಲಿಲ್ಲ. ವಿಭಜನೆ ಆಗಿಯೇ ಹೋಯಿತು. ಹಾಗೆಯೇ, ಗಾಂಧೀಜಿಯೇ ವಿಭಜನೆಗೆ ಕಾರಣವೆಂದು ಒಂದು ವರ್ಗ ಭಾವಿಸಿತು. ಭಾರತ ಸರ್ಕಾರದಿಂದ ಪಾಕಿಸ್ಥಾನಕ್ಕೆ ೫೫ ಕೋಟಿ ರೂ. ಕೊಡಿಸಿದ್ದು ಸಹ ಈ ವರ್ಗವನ್ನು ಕೆರಳಿಸಿತು. ಈ ಭಾವನೆ ಗಾಂಧೀಜಿಯ ಕೊಲೆಗೆ ಕಾರಣೀಭೂತವಾಯಿತು.

ಜನವರಿ ೩೦ರ ಸಂಜೆ ಗಾಂಧೀಜಿ ತಮ್ಮ ವಾಸಸ್ಥಳವನ್ನು ಬಿಟ್ಟು ಪ್ರಾರ್ಥನಾಸಭೆ ನಡೆಯುತ್ತಿದ್ದ ಸ್ಥಳದ ಕಡೆಗೆ ಧಾವಿಸಿದ್ದರು. ಅದು ಎರಡು ನಿಮಿಷಗಳ ಕಾಲ ಹಿಡಿಯುತ್ತಿತ್ತು. ಅಂದು ಸರದಾರ್ ಪಟೇಲರೊಂದಿಗೆ ಮಾತನಾಡುತ್ತಿದ್ದುದರಿಂದ ಸ್ವಲ್ಪ ವಿಳಂಬವಾಗಿತ್ತು. ತಮ್ಮ ಮೊಮ್ಮಕ್ಕಳಾದ ಅಭಾ ಮತ್ತು ಮನೂ ಇವರಿಬ್ಬರ ಹೆಗಲಿನ ಮೇಲೆ ಕೈಯಿಟ್ಟು ವೇಗವಾಗಿ ನಡೆದುಕೊಂಡು ಬರುತ್ತಿದ್ದರು. ಪ್ರಾರ್ಥನಾಕ್ಷೇತ್ರಕ್ಕೆ ಬರುತ್ತಿದ್ದಂತೆಯೇ ಅಲ್ಲಿ ನೆರೆದಿದ್ದ ಜನ ಎದ್ದುನಿಂತು ದಾರಿ ಮಾಡಿಕೊಟ್ಟರು. ಗಾಂಧಿ ತಾವು ಹೊತ್ತು ಮೀರಿ ಬಂದುದಕ್ಕೆ ಸಭಿಕರಿಗೆ ಕೈಜೋಡಿಸಿ ನಮಸ್ಕರಿಸಿದರು. ಆ ಸಮಯದಲ್ಲಿ ಗೋಡ್ಸೆ ಗುಂಪಿನಿಂದ ಮುಂದಕ್ಕೆ ಬಂದನು. ಮಹಾತ್ಮರ ಪಾದಗಳಿಗೆ ನಮಸ್ಕರಿಸುವನೋ ಎನ್ನುವಂತೆ ಶಿರಬಾಗಿದನು. ಪಿಸ್ತೂಲನ್ನು ಗಾಂಧಿಗೆ ಗುರಿಯಿಟ್ಟು ಮೂರುಬಾರಿ ಗುಂಡು ಹಾರಿಸಿದನು. ಗಾಂಧಿ ಹಾಯ್ ರಾಮ್! ಎನ್ನುತ್ತ ನೆಲಕ್ಕೆ ಕುಸಿದು ಬಿದ್ದರು.

ರಾಷ್ಟ್ರಪಿತನ ರಕ್ತದಿಂದ ಕುರುಡು ಕಣ್ಣನ್ನು ತೊಳೆದು ತರ್ಪಣಕೊಡಲು
ಪಿತರ ಕೊಲೆಗೈವ ಆತ್ಮಘಾತರ ರಾಷ್ಟ್ರವನ್ನಾಗಿಸಿತು
ಹರಿಯುತಿಹ ಯಮುನೆಯ ತರಂಗಿಣಿಯ ಗಂಭೀರ ಕತ್ತಲೆಯ ದಡಗಳನು
ನೈರಾಶ್ಯ ಅಂಧಕಾರವು ಕವಿದ ಜೀವಗಳು ಅಲೆಯುದ್ದು ತಟ್ಟುತಿಹವು.
ವಿನಾಶದ ವೇದನೆಯ ಚೆಂಕಿಯುರಿ ಮನಸಿನಲಿ ತಲೆಯೆತ್ತಿ ಕಂಪಿಸುವುವು.

(ಅನಂತ ಪಟ್ನನಾಯಕ್ ; ಒರಿಸ್ಸಾ ಕವಿ)

"ಗಾಂಧೀಜಿ, ಬದುಕು ಸಾವು ಈ ಎರಡೂ ಒಂದೇ ನಾಣ್ಯದ ಮುಖಗಳು" ಎನ್ನುತ್ತಿದ್ದರು. "ಸಾವು ಹೋಲಿಕೆಗೆ ನಿಲುಕದ ಗೆಳೆಯ" ಎನ್ನುತ್ತಿದ್ದರು.

ತಮ್ಮ ಕೊಲೆಗೆ ಹಿಂದಿನ ರಾತ್ರಿ ಹೇಳುತ್ತಿದ್ದರು,

"ನಾನು ಯಾವುದಾದರೂ ಖಾಯಿಲೆಯಿಂದ ಸತ್ತರೆ, ಜನಕ್ಕೆ ಹೇಳಿ, ಗಾಂಧಿ ದೇವರ ಹತ್ತಿರದ ಮನುಷ್ಯನಾಗಿರಲಿಲ್ಲ ಎಂದು. ನನ್ನನ್ನು ಯಾರಾದರೂ ಬಾಂಬುಹಾಕಿ ಕೊಂದಾಗ, ಆಗ ನಾನು ದೇವರ ಹೆಸರನ್ನು ಹೇಳಿಕೊಂಡು ಪ್ರಾಣಬಿಟ್ಟರೆ, ಅದು ನನ್ನ ಇಷ್ಟದ ಸಾವು ದೇವರು ಮೆಚ್ಚುವ ಸಾವು" ಎಂದು.

ಆ ವಿಧಿವಂಚಿತ ಏಕಾಂಗಿಯ ಸಾವು ಆತ ಮೆಚ್ಚಿದ ರೀತಿಯಲ್ಲೇ ಆಯಿತು. ಆದರೆ ಆತನಿಗೆ ಸಾವು ಸಲ್ಲಿಸಬೇಕಾದದ್ದಾದರೂ ಏನು? ಎಂಬ ಪ್ರಶ್ನೆಗೆ, ಆತ ಸತ್ತು ಮೂವತ್ತು ವರ್ಷಗಳಾದರೂ ಉತ್ತರ ಕೊಡಲು ಯಾರೂ ಸಮರ್ಥರಿಲ್ಲವೇನೋ ಎನ್ನಿಸುತ್ತದೆ. ಏಕೆಂದರೆ ಅವರ ಪ್ರೀತಿಪಾತ್ರ ಅನುಯಾಯಿಗಳಾದರೂ ಎಲ್ಲಿದ್ದಾರೆ? ಇಂದಿಗೂ ಗಾಂಧೀಜಿ ಏಕಾಂಗಿಯೆ!

(ಗಾಂಧೀಜಿ ಅಗಲಿದ ೩೦-೧-೧೯೪೮ರ ಸ್ಮರಣಾರ್ಥ ಶ್ರದ್ಧಾಂಜಲಿ)

★ ★ ★

ನಗೆಹನಿ

ಷಡಕ್ಷರಿ

"ನಮ್ಮ ಭಾಷೆಯನ್ನು ಮಾತೃಭಾಷೆಯೆಂದು ಕರೆಯುವುದೇಕೆ?"

"ಕಾರಣ ಅಪ್ಪನಿಗೆ ಅದನ್ನು ಉಪಯೋಗಿಸಲು ಅವಕಾಶವೇ ಸಿಗುವುದಿಲ್ಲ."

(ಇಬ್ಬರು ಬಾಲಕರ ಸಂಭಾಷಣೆ)

* * *

"ಅವನ ಶಬ್ದ ಭಾಂಡಾರ ವಿಪುಲವಾಗಿದೆ."

"ಹೌದು, ಅವನು ಮದುವೆಯಾದ್ದೇ ಶಬ್ದ ಭಾಂಡಾರವನ್ನು."

(ಇಬ್ಬರು ಗೆಳೆಯರ ಸಂಭಾಷಣೆ)

ಋಷಿ, ಮುನಿಗಳಾ ತಾಣ

ಬಸವ ಗಂಗೋತ್ರಿ

ಇದು ಬಸವ ಗಂಗೋತ್ರಿ
ಹೊಸದೊಂದು ಕವಿಸ್ಫೂರ್ತಿ
ಇದು ಶಿವದ ತಾಣ
ಋಷಿಶಾಂತಿಯ ನಿಲ್ದಾಣ.

ಸಾಗುತಿರೆ ಪೊದೆಗಳಲಿ
ಹರಿಯುತಲಿ ವಾಹಿನಿಯು
ಕೇಳುವುದು ಮಂಗಳದ ಗೀತೆಯೊಂದು
ನೂರು ಲತೆಗಳು ಇಲ್ಲಿ
ಹೂವ ಅರಳಿಸಿ ನಗಲು
ಚಿಗುರುವುದು ಮನದೊಳಗೆ ಸ್ಫೂರ್ತಿಯೊಂದು.

ಪಂಚಮದ ಸ್ವರವಿಹುದು
ಮಾಮರದ ನೆರಳಲ್ಲಿ
ಮೌನವಾಗಿಯೆ ಕೇಳು ಮನಕೆ ಶಾಂತಿ
ನಿಶ್ಶಬ್ದ ನೀ ಮರೆತು
ನೀ-ಶಬ್ದ ಮಾಡಿದರೆ
ಹರಿದು ಹೋಗುವುದಿಲ್ಲ ನಾದತಂತಿ.

ಹಸಿರು ತುಂಬಿದ ನೆಲದಿ
ಹೊಸೆದು ಹೋಗುವ ಗಂಗೆ
ಮನವು ನರ್ತಿಸಲಿಹುದು ಇದನು ಕಂಡು
ಮುದಗೊಳ್ಳು ಮನದೊಳಗೆ
ನೆರಳಿಹುದು ಮರದಡಿಗೆ
ನೆಮ್ಮದಿಯ ಪಡೆ ಬಸವನುಸಿರ ಉಂಡು

ಬಿ. ಸೋಮಲಿಂಗ ಪಾಟೀಲ

ಕಲ್ಯಾಣ ಕಿರಣದ ವಾರ್ಷಿಕ ಚಂದಾ ೧೨ ರೂ.
ತಪ್ಪದೆ ಚಂದಾ ಹಣವನ್ನು ನವೀಕರಿಸಿರಿ.

ಮೈಸೂರು ನಗರದಲ್ಲಿ ಆದ ಕಲ್ಯಾಣ ಕಿರಣದ ಆಜೀವ ಸದಸ್ಯರು

ಶರಣರುಗಳಾದ,

೧. ಫಲ್ಗುಣ ಎಸ್. ಕೆ. ಸ್ವಾಮಿ, ಮೈಸೂರು
೨. ಆರ್. ರಾಚಯ್ಯ, ಹುಣಸೂರು
೩. ವೆಂಕಟಸ್ವಾಮಿ, ಮೈಸೂರು
೪. ಓಂಕಾರಮ್ಮ ಶಿವಲಿಂಗಯ್ಯ
೫. ಸರೋಜಮ್ಮ ಸದಾಶಿವಯ್ಯ
೬. ಶಿವಣ್ಣ, ಎಸ್. ಬಿ., ಮೈಸೂರು
೭. ಕರಿಯಣ್ಣ, ಎಂ. ಸಿ.
೮. ಜಯರಾಮಯ್ಯ, ಎಂ. ಆರ್.
೯. ಕಮಲಾಕ್ಷಮ್ಮ, ಎಂ. ಪಿ.
೧೦. ರಾಜಣ್ಣ, ಎಂ.
೧೧. ಗೌರಮ್ಮ ಮಂಚೇಗೌಡ
೧೨. ಶೈಲಜ, ಎ.
೧೩. ನಾಗೇಶ್ವರರಾವ್, ಜಿ. ಎನ್.
೧೪. ಬೆಳ್ಳಿಯಪ್ಪ, ಎ. ಎಂ.
೧೫. ಶಾರದಾಂಬ ಬಿ. ಪಿ.
೧೬. ಪ್ರಭಾಕರ್. ಬಿ. ಎನ್.
೧೭. ಚಿಕ್ಕಮ್ಮ ಚಂದ್ರು, ಪಿ.
೧೮. ಸುಶೀಲಮ್ಮ ಜಿ.
೧೯. ದೊಡ್ಡಸುಬ್ಬಯ್ಯ
೨೦. ರುದ್ರಪ್ಪ, ಎಸ್. ಎಂ.
೨೧. ಜಾನಕಿ ವಿ. ಸತ್ಯನಾರಾಯಣ
೨೨. ಹೇಮಲತ ಆರ್. ಕೃಷ್ಣಪ್ಪ
೨೩. ಲಲಿತಮ್ಮ ವಿ.
೨೪. ಅನುಸೂಯ, ಬಿ. ಆರ್.
೨೫. ಹನುಮಯ್ಯ, ಬನ್ನಿಮಂಟಪ
೨೬. ಸರೋಜಮ್ಮ ಶ್ರೀಕಂಠಯ್ಯ
೨೭. ಸರ್ವಮಂಗಳಮ್ಮ ವಿ. ವಿ. ಬಸಪ್ಪ
೨೮. ಯಶೋದ ರಾಮಶೇಷು
೨೯. ಎಂ. ಎಸ್. ಸಿದ್ಧವೀರಶೆಟ್ಟಿ
೩೦. ವಿಜಯಲಕ್ಷ್ಮಿ ಸುಂದರವ್
೩೧. ಪುಟ್ಟಮ್ಮ ಸಿದ್ಧಯ್ಯ
೩೨. ಸುಶೀಲಮ್ಮ ಬಸವರಾಜ್
೩೩. ಎನ್. ರುಕ್ಮಿಣೀದೇವಿ
೩೪. ಕೆ. ಚಿಕ್ಕಮ್ಮ ಕಳಸಯ್ಯ
೩೫. ಎಂ. ಎನ್. ಪುಟ್ಟಸ್ವಾಮಿ
೩೬. ಎಂ. ಜಯಶ್ರೀ
೩೭. ಸುಭದ್ರಾ ಶಿವಶಂಕರ್, ಎಂ. ವಿ.

'ಕಲ್ಯಾಣ ಕಿರಣ'ದ ಓದುಗರಲ್ಲಿ

ಡಿಸೆಂಬರ್ ಮತ್ತು ಜನವರಿ ಸಂಚಿಕೆಗಳು ಸ್ವಲ್ಪ ಬದಲಾವಣೆ ಹೊಂದಿ ಬಂದಿವೆ. "ಬಸವ ಬೀಡಿನಿಂದ ಆಂಗ್ಲನಾಡಿಗೆ", ಮತ್ತು "ಆನು ಒಲಿದಂತೆ ಹಾಡುವೆ" ಮುದ್ರಣ ಗೊಂಡಿಲ್ಲ. ಪ್ರವಚನದ ಎಡಬಿಡದ ಕಾರ್ಯಕ್ರಮದಿಂದ ಈ ಲೇಖನಗಳನ್ನು ಬರೆಯ ಲಾಗಿಲ್ಲ. "ಈ ತಿಂಗಳ ಮಂಗಳಮೂರ್ತಿ" ಬರೆಯಲು ಕಾರ್ಯಭಾರದಿಂದ ಶ್ರೀ ಗೊ.ರು.ಚ.ರವರಿಗೂ ಆಗಿಲ್ಲ. ಈ ಲೋಪಕ್ಕಾಗಿ ವಿಷಾದಿಸುತ್ತೇವೆ—ಫೆಬ್ರುವರಿ ಸಂಚಿಕೆ ಯಲ್ಲಿ ಈ ಎಲ್ಲ ಲೇಖನಗಳು ಖಂಡಿತ ಕಾಣಿಸಿಕೊಳ್ಳುವ ಭರವಸೆಯನ್ನು ನೀಡುತ್ತೇವೆ.

—ಸಂಪಾದಕರು

ಮೈಸೂರು ನಗರದಿಂದ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಗೆ

ಬಸವ ಗಂಗೋತ್ರಿ ನಿರ್ಮಾಣಕ್ಕಾಗಿ ಸಹಾಯಗೈದವರು

೧.	ಕೆಂಪನಂಜಮ್ಮ ಬಸವಣ್ಣಪ್ಪ	೧೦,೦೦೧-೦೦
೨.	ಕಲ್ಯಾಣಮ್ಮ, ಕೈ॥ ದಾಸಪ್ಪ	೧೦,೦೦೧-೦೦
೩.	ಆರ್. ರಾಚಯ್ಯನವರು	೬,೨೦೧-೦೦
೪.	ರಾಜಲಕ್ಷ್ಮಮ್ಮ ಲಕ್ಷ್ಮಿನಾರಾಯಣಗುಪ್ತ	೫೦೦೧-೦೦
೫.	ಪುಟ್ಟಸುಬ್ಬಮ್ಮ	೫೦೦೧-೦೦
೬.	ಡಿ. ಸಾವಿತ್ರಮ್ಮ	೨೦೦೧-೦೦
೭.	ಬಿ. ಮುದ್ದಪ್ಪ	೨೦೦೧-೦೦
೮.	ರಾಜಮ್ಮ ಅನಂತರಾಜು	೧೦೦೧-೦೦
೯.	ಗೌರಮ್ಮ ಎಂ. ಜಿ. ಪುಟ್ಟಸ್ವಾಮಯ್ಯ	೧೦೦೧-೦೦
೧೦.	ರೇಣುಕಾ ಚಂದ್ರಶೇಖರ್	೧೦೦೧-೦೦
೧೧.	ಕೂಸಣ್ಣನವರು ಉರುಫ್ ಸಿದ್ಧಲಿಂಗಪ್ಪ	೧೦೦೧-೦೦
೧೨.	ಕೃಪಾನಂದಿನಿ	೧೦೦೧-೦೦
೧೩.	ಶ್ರೀಮತಿ ಶಕುಂತಲಾ ರಾಜ್	೧೦೦೧-೦೦
೧೪.	ಹೆಚ್. ಎನ್. ಮಲ್ಲಪ್ಪ ಹುಸ್ಕೂರ್	೧೦೦೧-೦೦
೧೫.	ರಾಮಕ್ಕನವರು	೧೦೦೧-೦೦
೧೬.	ಡಿ. ಆರ್. ರಾಜು, ಕಾಡಯ್ಯ ಸಿಲ್ಕ್‌ಹೌಸ್	೧೦೦೧-೦೦

ನಂಬಿ ಕರೆದೊಡೆ ಓ ಎನ್ನನೇ ಶಿವನು ?

—"ಶುಭಾಮಣಿ"

ಬಸವ ಪವಾಡ

ನಮ್ಮ ಅಜ್ಜನವರ ಜೀವನದಲ್ಲಿ ನಡೆದ ಒಂದು ಪ್ರಸಂಗ. ಅವರು ಬಸವಣ್ಣನವರ ಪೂರ್ಣ ಭಕ್ತರಾಗಿದ್ದರು. ಅವರು ಸದಾಕಾಲ ಬಸವಣ್ಣನವರ ಮಂತ್ರಜಪ ಮಾಡುತ್ತಿದ್ದರು. ಅವರಿಗೆ ಒಮ್ಮೆ ತೀವ್ರವಾಗಿ ಅನಾರೋಗ್ಯವಾಗಿತ್ತು. ಆಗಲೂ ಸಹ ಅವರು ಬಸವಣ್ಣನವರ ಧ್ಯಾನವನ್ನು ಬಿಡಲಿಲ್ಲ. ಅವರು ನಮ್ಮ ತಂದೆಯವರಿಗೆ "ಬಸವಣ್ಣನವರು ಕನಸಿನಲ್ಲಿ ಬಂದಿದ್ದರು" ಎಂದು ಆಗಾಗ್ಗೆ ಹೇಳುತ್ತಿದ್ದರು. ಬಸವಣ್ಣನವರ ಮೇಲಿನ ಭಕ್ತಿಯೋ ಎಂಬಂತೆ ಶೀಘ್ರವಾಗಿ ಆರೋಗ್ಯವಂತರಾಗಿ ಚೇತರಿಸಿಕೊಂಡರು.

ಬಸವಣ್ಣನವರ ಮೇಲಿನ ಹಂಬಲ ಜಾಸ್ತಿಯಾಗಿ ಅವರು ಆ ಮಹಾತ್ಮರ ಜನ್ಮಸ್ಥಳ ಕೂಡಲಸಂಗಮ, ಉಳವಿ ಮುಂತಾದ ಪುಣ್ಯಕ್ಷೇತ್ರಗಳನ್ನು ನೋಡಲು ಅಪೇಕ್ಷೆಪಟ್ಟರು. ನಮ್ಮ ತಂದೆಯವರು ಅವರ ಅಪೇಕ್ಷೆಯಂತೆ ಅಜ್ಜನವರನ್ನು ಆ ಕ್ಷೇತ್ರಗಳಿಗೆಲ್ಲಾ ಕರೆದೊಯ್ದು ತೋರಿಸಿದರು. ಹಿಂತಿರುಗುವಾಗ ಸಮುದ್ರ ಸ್ನಾನವನ್ನು ಮಾಡಲು ಅಪೇಕ್ಷಿಸಿದ ಅವರನ್ನು ಗೋಕರ್ಣಕ್ಕೂ ಕರೆದುಕೊಂಡು ಬಂದರು. ಆ ದಿನ ಶಿವರಾತ್ರಿಯಾಗಿತ್ತು. ಅವರು ಸಮುದ್ರದ ಅಲೆಗಳ ಮಧ್ಯದಲ್ಲಿ ತಮ್ಮ ಆಸೆಯಂತೆ ಸ್ನಾನಮಾಡಿ ದಡಕ್ಕೆ ಬಂದಾಗ ಅವರ ಎದೆಯಮೇಲೆ ಇಷ್ಟಲಿಂಗವೇ ಕಾಣೆಯಾಗಿದೆ! ಅದನ್ನು ನೋಡಿ ಅವರು ಎಷ್ಟು ದುಃಖತಪ್ತರಾದರೆಂದರೆ ಅವರ ಮುಖದ ಕಳೆಯೇ ಹೊರಟುಹೋಯಿತು. ಅವರು ಅಲ್ಲೇ "ಬಸವಣ್ಣಾ ಎಂತಹ ಪರಿಸ್ಥಿತಿ ಒಡ್ಡಿದೆಯಪ್ಪಾ. ಇಷ್ಟಲಿಂಗ ಕಳೆದುಕೊಂಡವ ಎಂತಹ ಪಾಪಿ. ನಾನು ಖಂಡಿತವಾಗಿ ಮನೆಗೆ ಹಿಂತಿರುಗುವುದಿಲ್ಲಾ. ಇಲ್ಲೇ ಸಮುದ್ರಕ್ಕೆ ಹಾರಿ ನಾನೂ ನಿನ್ನೊಡನೆ ಬರುತ್ತೇನೆ" ಎಂದು ಪ್ರಲಾಪಿಸಿದರು. ಆಗ ನಮ್ಮ ತಂದೆಯವರು ತಕ್ಷಣವೇ ಅಲೆಗಳು ತುಂಬಿದ್ದ ಭೋರ್ಗರೆವ ಸಮುದ್ರಕ್ಕೆ ಧುಮುಕಿ ಹುಡುಕಲು ಶುರುಮಾಡಿದರು. ಅದೇನು ಬಸವಣ್ಣನವರ ಮೇಲಿನ ಶ್ರದ್ಧೆ ಭಕ್ತಿಯ ಪ್ರಭಾವವೊ? ನಮ್ಮ ತಂದೆಯವರ ಕಾಲಿಗೆ ಅರಸುತ್ತಿದ್ದ ಶಿವದಾರ ತೊಡರಿ ಇಷ್ಟಲಿಂಗದ ಕರಡಿಗೆ ಸಿಕ್ಕಿತು !!!

ಈ ಪ್ರಸಂಗವನ್ನು ನಾವು ಮತ್ತು ನೀವು ವಿಚಾರಮಾಡಿದಾಗ 'ನಂಬಿ ಕರೆದೊಡೆ ಓ ಎನ್ನನೇ ಶಿವನು ?' ಎಂಬ ಮಾತನ್ನು ನಂಬದಿರಲಾಗುತ್ತದೆಯೆ ?

ಸ್ಫುರಣ-ಕಿರಣ

ಸಂಗ್ರಹ : ಮಾತಾಜಿ

೧. ಕಾಲುವೆಯ ಅಕ್ಕಪಕ್ಕ

ಪೂಜ್ಯರಾದ ಸದ್ಗುರು ಲಿಂಗಾನಂದ ಸ್ವಾಮಿಗಳು ಸಂಜೆಯ ಸಮಯದಲ್ಲಿ ಅಡ್ಡಾಡುತ್ತ, ಶಿಷ್ಯ ದಯಾನಂದನೊಡನೆ ಸಾಗಿದ್ದರು. ಹೇಮಾವತಿ ನದಿಯ ಕಾಲುವೆ ಹರಿದಿದ್ದು, ಅದರ ಒಂದು ಬದಿಗೆ ಹಸಿರು ತುಂಬಿದ ಗದ್ದೆ, ನಳನಳಿಸುವ ಪೈರು; ಇನ್ನೊಂದು ಬದಿಗೆ ಒಣಭೂಮಿ, ಬೆಳೆಯಿಲ್ಲ. 'ಎಂಥ ವಿಚಿತ್ರ', ಎಂದು ದಯಾನಂದ ಪ್ರಶ್ನಿಸಿದ. "ಕಾಲುವೆ ಮಟ್ಟಕ್ಕಿಂತಲೂ ತಗ್ಗಿನಲ್ಲಿ ಯಾವ ನೆಲವಿದೆಯೋ ಅಲ್ಲಿಗೆ ನೀರು ಹರಿದಿದೆ, ಕಾಲುವೆ ಮಟ್ಟಕ್ಕಿಂತ ಮೇಲಿರುವ ಭೂಮಿಗೆ ನೀರು ಹರಿಯದು" ಎಂದು ವಿವರಿಸಿದ ಸದ್ಗುರುಗಳು ನುಡಿದರು, "ಅದೇ ರೀತಿ ಜ್ಞಾನಿಗಳಾದ ಗುರುಗಳ ಸನಿಹದಲ್ಲಿದ್ದು, ಆಶ್ರಮಕ್ಕೆ ಹತ್ತಿರವೇ ಇದ್ದು "ನಾನು" ಎಂಬ ಅಹಂ ಪ್ರಜ್ಞೆಯಿಂದ ಮೇಲೆದ್ದವನಿಗೆ 'ಜ್ಞಾನವಾಹಿನಿ' ಹರಿಯದು. ತಗ್ಗು ಭೂಮಿಯಂತೆ ವಿನಯಶಾಲಿಯಾದವನಿಗೆ ಜ್ಞಾನ ಹರಿಯುವುದು; ದೂರದಲ್ಲಿದ್ದರೂ ಗುರುಗಳ ಅಂತಃಕರುಣೆಯ ಮಹಾಪೂರ ಅತ್ತ ಹರಿಯುವುದು" ಎಂದು ಸ್ಫುರಿಸಿದ ವಿಚಾರ ಹೇಳಿದರು.

೨. ಪರಿಪಕ್ವ ಮೊಗ್ಗು

ಪರಮಪೂಜ್ಯ ಜಗದ್ಗುರುಗಳಾದ ಮಾತೆ ಮಹಾದೇವಿಯವರನ್ನು ದರ್ಶನ ಮಾಡಲು ಅವರ ನಿವಾಸಕ್ಕೆ ಹೋಗಿದ್ದೆ. ಅವರ ಶುಭಾಶೀರ್ವಾದಗಳನ್ನು ಪಡೆದು ಅವರೊಡನೆ ಮಾತನಾಡುತ್ತಿರುವಾಗ ಸಾಧಕಿ ಶರಣೆ ಗಂಗಮ್ಮನವರು ಮಲ್ಲಿಗೆಯ ಮೊಗ್ಗುಗಳನ್ನು ಪೋಣಿಸುತ್ತಿದ್ದರು. ಅವರು ಪೋಣಿಸುವಾಗ ಪಕ್ವವಾದ ಹಾಗೂ ದೃಢವಾದ ಮೊಗ್ಗುಗಳನ್ನೇ ಆರಿಸಿಕೊಂಡು ಪೋಣಿಸಿ ಉಳಿದ ಅಪಕ್ವವಾದ, ಹುಳುಗಳು ತಿಂದ ಹಾಗೂ ನಲುಗಿ ಹೋದ ಮೊಗ್ಗುಗಳನ್ನು ಒಂದೆಡೆ ಸರಿಸಿ ಇಡುತ್ತಿದ್ದರು.

ಇದನ್ನು ಗಮನಿಸಿದಾಗ ನನ್ನ ಮನಸ್ಸಿಗೆ ಈ ವಿಚಾರಗಳು ಹೊಳೆದವು. ಶ್ರೀಗುರುವಿನ ಮುಡಿಯನ್ನು ಏರಲು ಅಥವಾ ಪರಮಾತ್ಮನನ್ನು ಸೇರಲೂ ಸಹ ಪರಿಪಕ್ವತೆ ಹಾಗೂ ಸಂಸ್ಕಾರ ಬೇಕು. ಹಾಗೆಯೇ ಗುರುಕರುಣೆ ಪಡೆಯದೆ ದೀಕ್ಷಾರಹಿತನಾದವನು ಅಪಕ್ವ ಮೊಗ್ಗುಗಳ ಹಾಗೆ. ಪ್ರಾಪಂಚಿಕ ವಿಷಯ ವಾಸನೆಗಳು, ಅರಿಷಡ್ವರ್ಗಗಳೆಂಬ ಹುಳುಗಳು

ಮಾನವನನ್ನು ಮುತ್ತಿ ತಿಂದು ಹುಳುಹಿಡಿದ ಮೊಗ್ಗುಗಳನ್ನಾಗಿ ಮಾಡುತ್ತವೆ. ಸಂಸಾರದ ದುಃಖ, ಕಷ್ಟಗಳಿಗೆ ಸಿಕ್ಕಿ ನಲುಗಿದ ಮೊಗ್ಗಿನಂತೆ ಆದಾಗಲೂ ಜೀವಾತ್ಮ ಪರಮಾತ್ಮನನ್ನು ಸೇರಲು ಅಸಾಧ್ಯ.

ದೀಕ್ಷೆ ಹೊಂದಿದ ಮಾನವ ಅರಿಷಡ್ವರ್ಗಗಳನ್ನು ಗೆದ್ದು, ಜಪತಪಗಳನ್ನು ಮಾಡುತ್ತಾ ಕಾಯಕವನ್ನು ಮರೆಯದೆ ಮಾಡಿದಾಗ ಪರಮಾತ್ಮನನ್ನು ಸೇರಲು ಸುಲಭಸಾಧ್ಯ.

ಶುಭಾಮಣಿ, ಮೈಸೂರು

೩. ಕಣ್ಣುಪಾಪೆಯ ಹೊಂದಿಕೊಳ್ಳುವಿಕೆ

ಬಿಸಿಲಿನ ಝಳ ಹೆಚ್ಚಾಗಿತ್ತು. ಸೂರ್ಯನಿಗೆ ಎದುರಾಗಿ ಮುಖಮಾಡಿ ನಿಂತಾಗ ಕಣ್ಣಪಾಪೆ (Pupil) ಸೂರ್ಯನ ಕಿರಣಗಳ ಪ್ರಖರತೆಯನ್ನು ತಾಳಲಾರದೆ ಸಂಕುಚಿತಗೊಂಡಿತು. ನೆರಳಿಗೆ ಹೋಗಿ ನಿಂತಾಗ ಅದು ತನ್ನ ಮೊದಲಿನ ಸ್ಥಿತಿಗೆ ಬಂದಿತು. ಆಗ ನನಗನ್ನಿಸಿತು. ಈ ಪ್ರಪಂಚದಲ್ಲಿ ಜನಗಳಿಗೆ ಕೀರ್ತಿಸಂಪತ್ತು, ಜ್ಞಾನಸಂಪತ್ತು, ಸಿರಿ-ಸಂಪತ್ತು ಹೆಚ್ಚಿದಂತೆ, ವಿವೇಕ, ವಿನಯಶೂನ್ಯರಾಗದೆ ಕಣ್ಣುಪಾಪೆಯಂತೆ ಸದ್ಗುಣನಯವಿನಯಶಾಲಿಗಳಾಗಿ ಮುಗಿದ ಕೈ, ಬಾಗಿದ ತಲೆಯುವರಾಗಿದ್ದರೆ ಎಷ್ಟು ಚನ್ನ; ತನ್ನಷ್ಟಕ್ಕೇ ಕಿರಿದಾಗುವ ಕಣ್ಣುಪಾಪೆಯಂತೆ ಮಾನವ ಸುಸಂಸ್ಕೃತನಾಗಲು ಆಧ್ಯಾತ್ಮ ಸುಧೆಯ ಸಂಚಯದಿಂದಲ್ಲದೆ ಮತ್ತಾವ ಮಾರ್ಗದಿಂದಲೂ ಸಾಧ್ಯವಿಲ್ಲವೆಂದೆನಿಸಿತು.

೪. ಆತ್ಮಬಲದ ಹಾರ್ನ್

ಒಮ್ಮೆ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದೆವು. ದಾರಿಯಲ್ಲಿ ಕೆಲವು ಚರಾಚರ ಅಡ್ಡಿ ಆತಂಕಗಳು ಬಂದಾಗ ನಮ್ಮ ವಾಹನ ಚಾಲಕರು ಹಾರ್ನ್ ಮಾಡಿ ಅವುಗಳನ್ನು ನಿವಾರಿಸುತ್ತಾ ವಾಹನವನ್ನು ಮುಂದೆ ತೆಗೆದುಕೊಂಡು ಹೋಗುತ್ತಿದ್ದರು. ಆಗ ಒಂದು ವಿಚಾರ ಹೊಳೆಯಿತು. ಮುಮುಕ್ಷುಗಳ ಜೀವನದಲ್ಲಿ ಇದೇ ರೀತಿಯ "ಅಡ್ಡಿ ಆತಂಕಗಳು" ಬರುತ್ತಲೇ ಇರುತ್ತವೆ. ಅವರು ಆತ್ಮಬಲ ಎಂಬ ಹಾರ್ನನ್ನು ಇಟ್ಟುಕೊಂಡು ದೇಹವೆಂಬ ಈ ಕಾರನ್ನು ಎಚ್ಚರಿಕೆಯಿಂದ ಓಡಿಸುತ್ತಿರಬೇಕು. ಆಗ ಮುಕ್ತಿಮಾರ್ಗದ ದಾರಿ ನಿರಾತಂಕವಾಗುವದು. ಕಾರು ಹೇಗೆ ಚಾಲಕನ ಹಿಡಿತದಲ್ಲಿರುವುದೋ ತದ್‌ರೀತಿ ಈ ಆತ್ಮನನ್ನು ಪಾರಮಾರ್ಥ ಮಾರ್ಗದಲ್ಲಿ ಜತನದಿಂದ ಪರಮಾತ್ಮನೆಡೆಗೆ ಕೊಂಡೊಯ್ಯುವುದು ನಿತ್ಯಾನಿತ್ಯ ಪ್ರಜ್ಞೆಯುಳ್ಳ 'ವಿವೇಕ'ನೆಂಬ ಚಾಲಕನಿಗೆ ಸಾಧ್ಯ.

ದಿ. ೨೫-೧೧-೭೮ **ಸೋದರಿ ಉಮಾದೇವಿ**

ನುಡಿಕಾಣಿಕೆಯ ಸಮರ್ಪಣೆ*

ಪಂಡಿತ ಕೆ. ಪಿ. ಶಿವಲಿಂಗಯ್ಯ, ಎಂ.ಎ., ಬಿ.ಇಡಿ.

ಓ(ಂ) ಮಾತೆ ಮಹಾದೇವಿ
ಶಿವನ ಪಿಳ್ಳಂಗೋವಿ
ಉಲಿದೆ ನಿನ್ನಿಂಚರದಿ
ಶರಣ-ವಚನಾಮೃತವ
ಬಸವ ಮಹಿಮೆಯನರಿತು
ಅಸಮಾನ ನಿಷ್ಠೆಯಲಿ
ಅಸುವನೇ ಪಣವಿರಿಸಿ
ಉಸುರಿದಿರಿ ತತ್ತ್ವವನು ||
ಉದಮದದ ಯೌವನವ
ಬದಿಗಿರಿಸಿ, ಅಭವನಿಗೆ
'ಹದಿಬದೆ'ಯಾಗಿ, ಸ್ತ್ರೀಕುಲಕೆ ಜ
ಗದ ಗುರು ತಾವಾದಿರಿ ||
ಗುರುವು ಲಿಂಗಾನಂದ—
ರರಿತು ಕಂಡರಿಸಿದರು ;
ಕರುಣೆಯಿಂ ಹೆರನಿತ್ತ
'ಗುರುನಾರಿ'ಯರು ನೀವು ||
ಸಚ್ಚಿದಾನಂದನಲಿ
ಎಚ್ಚರದಿ ಬೆರೆದಿಹಿರಿ ;
ಅಚ್ಚರಿಯು ಜಗಕಾಗೆ
ಮೆಚ್ಚಿದನು ಶಿವ ನಿಮ್ಮ !
ವೀರಸಿಂಹಾಸನದ
ಜಗದಗುರು ಶಿವರಾತ್ರಿ
ರಾಜೇಂದ್ರ 'ಪರಮಗುರು'
ದಿವ್ಯಸನ್ನಿಧಿಯಲ್ಲಿ
ಕವನಕುಸುಮವ ನಿಮಗೆ
ಭಕ್ತಿಯಿಂದರ್ಪಿಸುವೆ ||

* ದಿನಾಂಕ ೧೭-೧೨-೧೯೭೮ರಂದು ಮೈಸೂರು ನಗರದ 'ಪುರಭವನ'ದ ಸಭಾಂಗಣದಲ್ಲಿ ಪೂಜ್ಯ 'ಮಾತಾಜಿ'ಯವರಿಗೆ ನಾಗರಿಕ ಸಮಿತಿಯವರು ಸನ್ಮಾನ ಮಾಡಿದ ಶುಭಾವಸರದಲ್ಲಿ ವಾಚನಮಾಡಿದ ಕವನ.

ಮೈಸೂರು ನಗರದಲ್ಲಿ ಸನ್ಮಾನ ಸಮಾರಂಭ

ಅವ್ಯಾಹತವಾಗಿ ಎರಡು ತಿಂಗಳವರೆಗೆ ಪ್ರವಚನ ಕಾರ್ಯಕ್ರಮವನ್ನು ನಡೆಸಿಕೊಟ್ಟ ಪರಮಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಮೈಸೂರು ನಗರದ ನಾಗರಿಕ ಸಮಿತಿಯು ದಿ. ೧೭-೧೨-೧೯೭೮ರಂದು ಗೌರವಪೂರ್ಣವಾಗಿ ಸತ್ಕರಿಸಿತು. ಶಾಸಕರಾದ ಜಯದೇವರಾಜ ಅರಸರ ಅಧ್ಯಕ್ಷತೆಯಲ್ಲಿ ಕಾರ್ಯಗೈದ ಸನ್ಮಾನ ಸಮಿತಿಯು ಪುರಭವನ ಮೈದಾನದಲ್ಲಿ ಸತ್ಕಾರವನ್ನು ಅದ್ದೂರಿಯಾಗಿ ಮಾಡಿತು.

ಪೂಜ್ಯರಾದ ಜಗದ್ಗುರು ಸುತ್ತೂರು ಶಿವರಾತ್ರೀ ರಾಜೇಂದ್ರ ಸ್ವಾಮೀಜಿಯವರ ದಿವ್ಯ ನೇತೃತ್ವದಲ್ಲಿ ಸಮಾರಂಭ ಜರುಗಿತು. ಶಾಸಕರಾದ ಜಯದೇವರಾಜೇ ಅರಸರು ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಕೆಂಗೇಗೌಡರು, ಹೆಚ್. ಗಂಗಾಧರನ್‌ರವರು ಮತ್ತು ನಗರ ಯೋಜನಾ ಮಂಡಳಿಯ ಅಧ್ಯಕ್ಷಿಣಿ ಸೌಂದರಮ್ಮ ವೆಂಕಟೇಶನ್ನರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪೂಜ್ಯರಾದ ಜಗದ್ಗುರು ಶಿವರಾತ್ರೀಶ್ವರ ಸ್ವಾಮೀಜಿಯವರು ಶಾಲನ್ನು ಹೊದ್ದಿಸಿದರು. ಪಿ. ಶಿವಶಂಕರ್‌ರವರು ಬಿನ್ನವತ್ತಳೆ ಓದಿ ಸಮರ್ಪಿಸಿದರು. ರಾಮಲಿಂಗುರವರು ಸ್ವಾಗತಿಸಿದರು. ಶಿವಣ್ಣನವರು ಫಲಪುಷ್ಪಾರ್ಪಣೆ ಮಾಡಿದರು. ಸಂಪತ್ತುರವರು ವಂದನಾರ್ಪಣೆ ಮಾಡಿದರು. ಮಂಗಲಾಚರಣೆಯೊಡನೆ ಸಭೆ ಮುಕ್ತಾಯವಾಯಿತು. ಮೈಸೂರು ನಗರ ಪುರಭವನದಲ್ಲಿ ನಡೆದ ಈ ಜ್ಞಾನ ದಾಸೋಹ ಕಾರ್ಯಕ್ರಮ ಪವಾಡ ಸದೃಶ್ಯವಾಗಿದೆಯೆಂದು, ಸಹಸ್ರಾರುಶ್ರೋತೃಗಳನ್ನು ಆಕರ್ಷಿಸಿ, ಜನರನ್ನು ಪರಿವರ್ತನೆಗೊಳಿಸಿದೆಯೆಂದು ಎಲ್ಲರೂ ಮುಕ್ತ ಕಂಠದಿಂದಪ್ರಶಂಸಿಸಿದರು.

ನಾಗರಿಕ ಸಮಿತಿಯು ಸಮರ್ಪಿಸಿರುವ ಬಿನ್ನವತ್ತಳೆಯ ಪೂರ್ಣ ಪಾಠಾಂತರ ಇಲ್ಲಿದೆ.

|| ಓಂ ಶ್ರೀ ಗುರುಬಸವಲಿಂಗಾಯ ನಮಃ ||

ನಾಗರಿಕ ಸನ್ಮಾನ ಸಮಿತಿ, ಮೈಸೂರು

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆಯರು, ಕ್ರಾಂತಿ ಯೋಗಿಣಿಯರು ಅಪೂರ್ವ ವಾಗ್ಮಿಗಳೂ ಆಗಿರುವ ಪರಮ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಎಂ.ಎ., ಅವರ ಪವಿತ್ರ ಪಾದಾರವಿಂದಗಳಲ್ಲಿ ದಿನಾಂಕ ೧೭-೧೨-೧೯೭೮ರಂದು ಅರ್ಪಿಸಿದ ಸನ್ಮಾನ ಪತ್ರ :

ಸನ್ಮಾನ ಪತ್ರ

ಪೂಜ್ಯ ಮಹಾಮಾತೆಯವರೇ,

ಮೈಸೂರು ನಗರವು ಐತಿಹಾಸಿಕ ಮನ್ನಣೆ ಪಡೆದ, ಸಂಸ್ಕೃತಿ, ಸಾಹಿತ್ಯ, ಕಲೆ, ಶಿಕ್ಷಣ ಮತ್ತು ಧರ್ಮಗಳ ನೆಲೆಬೀಡಾಗಿರುವ ದಿವ್ಯ ಸಂಗಮ. ಉದ್ಯಾನವನಗಳ ನಗರವೆಂದೂ ಭಾರತದಲ್ಲಿ ಖ್ಯಾತಿವೆತ್ತ ಈ ಸುಂದರ ನಗರದ ಪುಣ್ಯವಿಶೇಷವೇನೋ ಎಂಬಂತೆ ನಗರ ಪುರಭವನದ ವಿಶಾಲ ಮೈದಾನದಲ್ಲಿ ತಮ್ಮ ಪ್ರವಚನವು ದಿ. ೨೨-೧೦-೧೯೭೮ ರಂದು ಆರಂಭವಾಯಿತು. ಅನಿರೀಕ್ಷಿತ ಅಮೃತಧಾರೆಯೋಪಾದಿಯಲ್ಲಿ ಸುರಿದ ಈ ಜ್ಞಾನ ವರ್ಷದಲ್ಲಿ ಮೀಯಲು ಅಸಂಖ್ಯಾತ ಸಹೃದಯರು, ಸದ್ಭಕ್ತರು ಸಿದ್ಧರಾದರು. ಅವ್ಯಾಹತವಾಗಿ, ಅಖಂಡವಾಗಿ, ನಿರ್ವಿಘ್ನವಾಗಿ ಪ್ರವಚನ ನಡೆದು, ದಿನದಿನಕ್ಕೆ ವೃದ್ಧಿಯಾಗಿ, ಅಸಂಖ್ಯಾತ ಜನಸ್ತೋಮವನ್ನು ಆಕರ್ಷಿಸುತ್ತಿದೆ. ನಮ್ಮ ನಗರದ ಇತಿಹಾಸದಲ್ಲಿ ಎಂದೂ ಧಾರ್ಮಿಕ ಪ್ರವಚನಗಳಿಗೆ ಇಷ್ಟು ಜನ ಸೇರಿದುದಿಲ್ಲ. ಸ್ತ್ರೀಯರ ಸಮೂಹವಂತೂ ಅತ್ಯಂತ ಉತ್ಸಾಹದಿಂದ ಕಿಕ್ಕಿರಿಯುತ್ತಿದೆ. ತಮ್ಮ ಸುಜ್ಞಾನಧಾರೆಯಲ್ಲಿ ಅಸಂಖ್ಯಾತರು ಮಿಂದು ಪಾವನರಾಗಿದ್ದಾರೆಂದು ಹೇಳಲು ಹರ್ಷ ಸಹಿತ ಹೆಮ್ಮೆ ಎನಿಸುತ್ತದೆ.

ಕನ್ನಡದ ಕೀರ್ತಿವಂತ ಕುವರಿಯೇ,

ಕಿರಿದಾದ ವಯಸ್ಸಿನಲ್ಲಿಯೇ ಹಿರಿದಾದ ಜ್ಞಾನ ಗಳಿಸಿ, ಜಗತ್ಕಲ್ಯಾಣಕ್ಕಾಗಿ ಆ ಜ್ಞಾನಸುಧೆಯನ್ನು ಗ್ರಂಥಗಳ ಮೂಲಕ ಅನಂತ ಜನರ ಹೃದಯಬಟ್ಟಲುಗಳಿಗೆ ಧಾರೆಯೆರೆದು ಅವರ ಬದುಕನ್ನು ಚಿನ್ಮಯಗೊಳಿಸುತ್ತಿದ್ದೀರಿ. ಅನುಭಾವಸಾಹಿತ್ಯ ಪ್ರಪಂಚದಲ್ಲಿ ಉನ್ನತ ಸ್ಥಾನವನ್ನು ಗಳಿಸಿಕೊಂಡು ಜ್ಞಾನಜ್ಯೋತಿ, ಕನ್ನಡದ ವರಪುತ್ರಿಯಾಗಿದ್ದೀರಿ. ಕಸ್ತೂರಿ ಕನ್ನಡದ ಕಂಪನ್ನು, ಅದರಲ್ಲಿ ಹುದುಗಿರುವ ವಚನ ಸಾಹಿತ್ಯ ಸೌರಭವನ್ನು, ವಿಶ್ವಧರ್ಮ ಸಂದೇಶವನ್ನು, ಮಾರುತನ ತೆರದಿ ಪ್ರಸರಿಸಿ ಕನ್ನಡನುಡಿ ವಿಶ್ವಮಾನ್ಯತೆ ಹೊಂದುವಂತೆ ಮಾಡುತ್ತಿರುವಿರಿ. ತಮ್ಮ ಶುಭಹಸ್ತದಲ್ಲಿ ಸಾಹಿತ್ಯಸರಸ್ವತಿ ಓತಪ್ರೋತವಾಗಿ ಪ್ರವಹಿಸುತ್ತಿದ್ದರೆ, ವಾಣಿಯಲ್ಲಿ ಮಂಗಳ ಮಧುರ ವೀಣಾನಿನಾದದಂತೆ ಧುಮ್ಮಿಕ್ಕುತ್ತಿದ್ದಾಳೆ. ತಮ್ಮ ಸಂದೇಶಗಳು ತಾಯಿ ಶಾರದೆಯ ವೈಭವವಿಲಾಸ ಎಂದೇ ಜನತೆಯು ಅದನ್ನು ಹೃದಯದ ಬಟ್ಟಲುಗಳಲ್ಲಿ ಹಿಡಿದಿಟ್ಟುಕೊಳ್ಳುತ್ತಿದ್ದಾರೆ.

'ಭಾಷಣವೆಂದರೆ ಬೇಸರದ ಬುಗ್ಗೆ' ಎಂಬ ನಂಬುಗೆ ಜನಮನದಲ್ಲಿ ಅಚ್ಚೊತ್ತಿರುವ ಈ ಕಾಲದಲ್ಲಿ ಸಂಪೂಜ್ಯ ಗುರುಗಳಾದ ಲಿಂಗಾನಂದ ಸ್ವಾಮಿಗಳು ಮತ್ತು ಅವರ ದಿವ್ಯ ಹಸ್ತ ಸಂಜಾತ ಗುರುಪುತ್ರಿಯಾದ ತಾವು "ಪ್ರವಚನವು ಪರಮಾನಂದದ ಪ್ರಶಾಂತ ಮಂದಿರ" ಎಂಬ ಭಾವ ಬೆಳೆಸಿ ಪ್ರಚಂಡ ರೀತಿಯಲ್ಲಿ ಜನರನ್ನು ಆಕರ್ಷಿಸಿ, ಮುದಗೊಳಿಸಿ, ಚೇತನಿಸಿ, ಕೈಲಾಸವನ್ನು ಭುವಿಗಿಳಿಸಿ ತೋರಿಸುತ್ತಿದ್ದೀರಿ.

ವೀರ ಸನ್ಯಾಸಿನಿಯರೇ,

ತಮ್ಮ ನಿರ್ಭೀತ ನಿಲುವು, ತತ್ವನಿಷ್ಠೆ, ಸತ್ಯಪ್ರಿಯತೆ, ಸಮಾಜೋದ್ಧಾರದ ಕಳಕಳಿ ಇವುಗಳನ್ನು ಕಂಡಾಗ ತಾವು ಸಾಮಾನ್ಯರಲ್ಲ ಎನ್ನಿಸದೆ ಇರದು. ಸಂಪ್ರದಾಯದ ಮೂಢಾಚಾರಗಳ ಸಂಕೋಲೆಯಲ್ಲಿ ಸಿಕ್ಕಿಬಿದ್ದ ಮಾನವನ ಮನಸ್ಸನ್ನು ಬಿಡುಗಡೆಮಾಡಿ ವೈಚಾರಿಕತೆಯ ಉತ್ತುಂಗ ಶಿಖರಕ್ಕೆ ಏರಿಸುವ ಕ್ರಾಂತಿಯೋಗಿಣಿಯರು ತಾವು. 'ಬಳೆ ತೊಟ್ಟು ಗೃಹೋದ್ಧಾರದ ಗುರಿಹೊತ್ತ ಸ್ತ್ರೀಯು ಅಷ್ಟರಲ್ಲಿಯೇ ಸೀಮಿತಳಾಗಬೇಕಾಗಿಲ್ಲ. ರುದ್ರಾಕ್ಷಿಯ ವೀರಕಂಕಣ ತೊಟ್ಟು ಲೋಕೋದ್ಧಾರದ ಮಣಿಹವನ್ನು ಅಷ್ಟೇ ಸಮರ್ಪಕವಾಗಿ ನಿರ್ವಹಿಸಬಲ್ಲಳು' ಎಂಬುದಕ್ಕೆ ಜೀವಂತ ಸಾಕ್ಷಿಯಾಗಿದ್ದೀರಿ.

ಅಭಿನವ ಅಕ್ಕಮಹಾದೇವಿಯವರೇ,

ಕನ್ನಡ ಸಾಹಿತ್ಯಬನದಲ್ಲಿ ಕವಿಕೋಗಿಲೆಯಾಗಿ ದನಿಗೈದ, ಅನುಭಾವ ಆರಣ್ಯದಲ್ಲಿ ಧರ್ಮಮಯೂರವಾಗಿ ನರ್ತಿಸಿದ ಮಹಾತತ್ತ್ವಜ್ಞಾನಿ, ವೀರವಿರಾಗಿಣಿ ಅಕ್ಕಮಹಾದೇವಿಯನ್ನು ಕಣ್ಣಾರೆ ಕಾಣುವ ಪುಣ್ಯ ನಮಗಿರಲಿಲ್ಲ. ಆದರೆ ಈ ಜಗನ್ಮಾತೆಯ ಕಾರುಣ್ಯ ಪಡೆದು ರೂಪ, ದೇಶ, ಕಾಲ ಬೇರೆಯಾದರೂ ಭಾವ, ಮನ, ಆದರ್ಶಗಳು ಒಂದೆಯಾಗಿ ಅಭಿನವ ಅಕ್ಕಮಹಾದೇವಿಯಾಗಿ ಕಂಗೊಳಿಸುವ ತಮ್ಮನ್ನು ಕಂಡ ನಮ್ಮ ಕಣ್ಗಳೇ ಧನ್ಯ, ಅಮೃತವಾಣಿಯ ಕೇಳಿದ ಕಿವಿಗಳೇ ಮಾನ್ಯ.

ತಮ್ಮ ದರ್ಶನ, ಪ್ರವಚನದಿಂದ ನಾವು ನಿಜಕ್ಕೂ ಪಾವನರಾಗಿದ್ದೇವೆ, ದೇವರ ಸ್ವರೂಪವನ್ನು ಅರಿತಿದ್ದೇವೆ. ಹಿಂದೂತ್ವದ ವಿಶಾಲ ಅರ್ಥ, ಭೂಮ ದೃಷ್ಟಿಕೋನದ ಸಿಂಹಾವಲೋಕನ ಮಾಡಿದ್ದೇವೆ. ಅಜ್ಞಾನದಿಂದಲೋ, ಅನಿವಾರ್ಯವಾಗಿಯೋ ಧರ್ಮದ ತಿಳುವಳಿಕೆಯನ್ನು ಹೆಚ್ಚಿನ ಬಗೆಯಲ್ಲಿ ಪಡೆದುಕೊಳ್ಳಲಾರದೆ, ನಶ್ವರದಮೌಲ್ಯಗಳ ಆಸಕ್ತಿಯಲ್ಲಿ ಬೆಂದು ಬೆಂಗಾಡಾಗಿದ್ದ ಜನಜೀವನದ ಮೇಲೆ ವಚನ ಭಾಗೀರಥಿಯನ್ನು ಹರಿಸಿ ಪುನರುತ್ಥಾನಿಸಿದ್ದೀರಿ.

ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳೇ,

ಚಿತ್ರದುರ್ಗದ ಚಿತ್ಕಳೆಯಾಗಿ ಜನಿಸಿ, ವಿಜ್ಞಾನ-ತತ್ವಜ್ಞಾನಗಳ ಸ್ನಾತಕೋತ್ತರ ಪದವೀಧರೆಯಾಗಿ, ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಕರಕಮಲ ಸಂಜಾತರಾಗಿ, ಭಕ್ತಿ-ಜ್ಞಾನ ವಿರಕ್ತಿಗಳ ದಿವ್ಯ ಸಂಗಮವಾಗಿ, ಜಗನ್ಮಾತೆ ಅಕ್ಕಮಹಾದೇವಿಯ ಕಾರುಣ್ಯವನ್ನು ಪಡೆದು, ಮಹಿಳಾ ಜಗದ್ಗುರು ಪೀಠವನ್ನು ಅಲಂಕರಿಸಿ, ಧಾರ್ಮಿಕ ಇತಿಹಾಸದಲ್ಲಿ ಕನ್ನಡನಾಡಿನ ಕೀರ್ತಿ ಉಳಿಯುವಂತೆ ಮಾಡಿದ್ದೀರಿ. ಕೇವಲ ಪುರುಷ ಪ್ರಪಂಚದ ಸೀಮಿತ ಸ್ವತ್ತಾಗಿದ್ದ ಗುರುತ್ವವನ್ನು ಮಾನವಕೋಟಿಯ ಅರ್ಧಭಾಗವಾದ ಸ್ತ್ರೀಕುಲಕ್ಕೆ ಒದಗಿಸಿಕೊಟ್ಟು, ಮಹಿಳಾ ಸ್ವಾತಂತ್ರ್ಯದ ಕಹಳೆಯೂದಿದ ವೀರವಿರಾಗಿಣಿ ತಾವು. ದೈವೀದತ್ತ ಪ್ರತಿಭೆ, ಅಸಾಮಾನ್ಯ ಪಾಂಡಿತ್ಯ, ದಿವ್ಯ ಮಧುರವಾಣಿ, ಪ್ರಶಾಂತ

ಚಿತ್ರಗಳ ಸಾಕಾರವಾದ ತಾವು ನಿಮ್ಮ ವಾಣಿಯ ಅಮೃತದಲ್ಲಿ ಜನತೆಯನ್ನು ಮೀಯಿಸಿ ಮಂತ್ರಮುಗ್ಧರನ್ನಾಗಿ ಮಾಡಿದ್ದೀರಿ.

ಇಂದಿನ ಜನಜೀವನದಲ್ಲಿ ದೈವಭಕ್ತಿ, ಧರ್ಮಶ್ರದ್ಧೆಗಳು ಅಳಿಸಿಹೋಗುತ್ತಿವೆ. ಜನರು ಉನ್ಮತ್ತರಾಗಿ ಶ್ರಮವಿಲ್ಲದ ಸುಲಭಗಳಿಕೆ ಮತ್ತು ವಿಷಯಾಸಕ್ತರಾಗಿ ಸಾಗುತ್ತಿದ್ದಾರೆ; ರಾಷ್ಟ್ರ-ಸಮಾಜಗಳ ಕಲ್ಯಾಣದ ಬಗ್ಗೆ ಚಿಂತಿಸಲು ಮರೆತಿದ್ದಾರೆ. ಹೀಗೆ ಸಮಾಜವು ಸತ್ಯ-ಧರ್ಮ, ನೀತಿ-ನ್ಯಾಯಗಳ ಚೌಕಟ್ಟಿನಿಂದ ಜಾರಿಹೋಗುತ್ತಿರುವ ಕರಾಳ ಸನ್ನಿವೇಶದಲ್ಲಿ, ಈ ಕೆಸರಿನ ಮಡುವಿನಿಂದ ಪಾರಾಗುವ ಮಾರ್ಗದರ್ಶನ ಗೈವ ಮಹಾಗುರುವಾಗಿ ಇಲ್ಲಿಗೆ ಆಗಮಿಸಿದ್ದೀರಿ. ಮುಮ್ಮಾರ್ಗ ಕಾಣದೆ ತಡವರಿಸುವ ಅನೇಕರಿಗೆ ಜ್ಯೋತಿಯನ್ನು ಕರುಣಿಸುತ್ತಿದ್ದೀರೆಂದೇ ಅಸಂಖ್ಯಾತ ಜನರು ಹೃದಯದ ಹಣತೆಗೆ ಆ ಜ್ಯೋತಿಯನ್ನು ಅಂಟಿಸಿಕೊಳ್ಳಲು ಧಾವಿಸುತ್ತಿದ್ದಾರೆ. ಘನವಾದ, ಗಹನವಾದ, ಆಳವಾದ ತತ್ವಗಳನ್ನು ಸುಲಿದ ಬಾಳೆಯ ಹಣ್ಣಿನಂತೆ ಸುಲಭಮಾಡಿದ ಪಂಡಿತಪಾಮರರು, ಆಬಾಲವೃದ್ಧರು, ಪುರುಷ-ಸ್ತ್ರೀಯರು ಸರ್ವರೂ ಸವಿಯುವಂತೆ ಮಾಡಿದ್ದೀರಿ.

ಬಸವ ಗಂಗೋತ್ರಿಯ ಸೂತ್ರಧಾರಿಣಿಯವರೇ,

ನಾಡು-ನುಡಿಗಳಿಗೆ ವಿಶೇಷ ಕಾಣಿಕೆ ಸಲ್ಲಿಸಬಲ್ಲ, ರಾಷ್ಟ್ರಕ್ಕೆ ಸತ್ಪ್ರಜೆಗಳನ್ನು ನೀಡುವಂತಹ ಬಸವಭಾರತಿ ಗುರುಕುಲವನ್ನು, ಧರ್ಮಬೋಧಕರನ್ನು ತರಬೇತಿಗೊಳಿಸುವ ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯವನ್ನು, ವಯಸ್ಕರಿಗೆ ಆಶ್ರಯ ನೀಡುವ ಸರ್ವಜ್ಞ ವೃದ್ಧಾಲಯವನ್ನು, ವೈದ್ಯಕೀಯ ಸೇವಾಕೇಂದ್ರ ಮುಂತಾದುವನ್ನು ಸ್ಥಾಪಿಸಲಿರುವ "ಬಸವ ಗಂಗೋತ್ರಿ" ಬೃಹತ್ ಯೋಜನೆಯ ಹಿಂದಿನ ಸಚೇತಕ ಶಕ್ತಿಯೂ, ಸೂತ್ರಧಾರಿಣಿಯೂ ತಾವಾಗಿದ್ದೀರಿ.

ಜ್ಞಾನ ತರಂಗಿಣಿಯವರೇ,

ರಾಷ್ಟ್ರಾದ್ಯಂತ ಅವಿಶ್ರಾಂತವಾಗಿ ಸಂಚರಿಸುತ್ತ ಆಧ್ಯಾತ್ಮಿಕ ಮತ್ತು ರಾಷ್ಟ್ರಧರ್ಮ ಪ್ರಜ್ಞೆಯನ್ನು ಜನತೆಯಲ್ಲಿ ಜಾಗೃತಿಸಿ, ದೈವೀಶಕ್ತಿಯ ಸಾಕಾರವಾಗಿ, ಸಮತಾವಾದದ ಪ್ರತಿನಿಧಿಯಾಗಿ, ವಚನಕಾರರ ಕ್ರಾಂತಿಕಾರಕ ಸಂದೇಶಗಳನ್ನು ಎಲ್ಲೆಡೆ ಮುಟ್ಟಿಸುವ ಸುಗಂಧ ಮಾರುತವಾಗಿ, ವಿಶ್ವಧರ್ಮಜ್ಯೋತಿಯನ್ನು ಜನತೆಯ ಹೃದಯ ಪ್ರಣತೆಗೆ ಸ್ಪರ್ಶಿಸುವ ನಾಡ ನಂದಾದೀಪವಾಗಿ ಕಂಗೊಳಿಸುತ್ತ, ಪವಿತ್ರ ಜ್ಞಾನಗಂಗೆಯನ್ನು ಅನಂತ ಹೃದಯಗಳಿಗೆ ಹರಿಸುವ ಮಹಾಮಣಿಯ ಹೊತ್ತ ತಾವು ಕಾರ್ಯಬಾಹುಳ್ಯದ ನಡುವೆ ಬಿಡುವು ಮಾಡಿಕೊಂಡು ನಮ್ಮ ನಗರಕ್ಕೆ ಆಗಮಿಸಿ, ನಮ್ಮ ಸನ್ಮಾನ ಸ್ವೀಕರಿಸುತ್ತಿರುವುದಕ್ಕೆ ಅತ್ಯಂತ ಚಿರಋಣಿಗಳಾಗಿರುವ ನಾವು ಅತ್ಯಂತ ಭಕ್ತಿ-ಗೌರವಪೂರ್ವಕವಾಗಿ ನಮ್ಮ ನಗರ ಮತ್ತು ನಾಗರಿಕರ ಪರವಾಗಿ ಈ ಬಿನ್ನವತ್ತಳೆ ಸಮರ್ಪಿಸುತ್ತಿದ್ದೇವೆ.

★ ★

ಕರ್ಮಯೋಗಿ ಸಿದ್ಧರಾಮ

—ಶ್ರೀ ಎನ್. ಬಸವಾರಾಧ್ಯ

ಕನ್ನಡನಾಡಿನಲ್ಲಿ ಹನ್ನೆರಡನೆಯ ಶತಮಾನದಲ್ಲಿ ಆಗಿಹೋದ 'ಸಕಲ ಜೀವಾವಳಿಗಳಿಗೆ ಲೇಸನೇ ಬಯಸುವ' ಶರಣರ ಪಂಕ್ತಿಯಲ್ಲಿ ಸಿದ್ಧರಾಮನ ಹೆಸರು ಕಂಗೊಳಿಸುತ್ತಿದೆ. "ಸಿದ್ಧಕುಲ ಕಮಲರವಿ" ಎನಿಸಿದ ಸೊನ್ನಲಿಗೆ ಸಿದ್ಧರಾಮನು ಪ್ರಸಿದ್ಧ ಶಿವಭಕ್ತನೂ ವಚನಕಾರನೂ ಆಗಿದ್ದನು. ಹನ್ನೆರಡನೆಯ ಶತಮಾನಕ್ಕೆ ಪೂರ್ವದಲ್ಲಿ ಕನ್ನಡನಾಡು ರಾಜ್ಯಕ್ರಾಂತಿ,ರಾಜಕೀಯ ಸಂಕ್ಷೋಭೆ, ಅಶಾಂತಿ,ಅನಿಶ್ಚಿತತೆ,ಮತಮತಗಳ ತುಮುಲಗಳ ವಿತಂಡವಾದಕ್ಕೆ ರಂಗವಾಗಿತ್ತು. ಎಲ್ಲೆಲ್ಲೂ ಕಗ್ಗತ್ತಲು ಆವರಿಸಿತ್ತು. ಈ ಕಗ್ಗತ್ತಲನ್ನು ಬಸವಣ್ಣನವರ ನೇತೃತ್ವದಲ್ಲಿ ಓಸರಿಸುತ್ತಾ ಬಂದರು ಶಿವಶರಣರು. ಅವರ ವಿಶ್ವವಿಶಾಲವಾದ ಭಾವನೆಗಳ ಮುಂದೆ ಹುಟ್ಟು, ಕುಲ, ಕಸುಬು, ಲಿಂಗ, ವರ್ಣ, ಪದವಿ, ವಿದ್ಯೆ—ಇತ್ಯಾದಿಗಳು ತಂದಿಟ್ಟಿದ್ದ ವಿಷಮತೆಗಳ ವಿಷ ಹರಡಿದ್ದ ಸಮಾಜದಲ್ಲಿ ಸಮಾನತೆಯ ಸುಧೆ ಸಂಚರಿಸಿ, ಸಾಮಾನ್ಯರಿಗೆ ಸಂಜೀವಿನಿಯಾಗಿ ಪರಿಣಮಿಸಿತು. ಯುಗ-ಯುಗಗಳಿಂದ ಅದುಮಲ್ಪಟ್ಟು ಮುದುಡಿ ಹೋಗಿದ್ದ ಸುಪ್ತಚೇತನಗಳು ಸ್ವಾತಂತ್ರ್ಯವನ್ನು ಪಡೆದು ವಿಕಾಸಗೀತೆಯನ್ನು ಹಾಡಿದವು. "ಚಂದನದ ಸನ್ನಿಧಿಯಲ್ಲಿ ಬೇವು ಬೊಬ್ಬುಲಿ ಮರಂಗಳು ಪರಿಮಳಿತವಾಗುವಂತೆ" ಶರಣರ ಸಂಗದಿಂದ ಪಾಮರರು ಕ್ಷುಲ್ಲಕತೆಯ ಅಭಿಶಾಪದಿಂದ ಬಿಡುಗಡೆ ಪಡೆದು ದಿವ್ಯಜೀವನ ಪಥದ ಪಯಣಿಗರಾದರು.

ಸಿದ್ಧರಾಮನ ಬಗ್ಗೆ ನಮಗೆ ಸಿಕ್ಕಿರುವ ಮೊದಲ ಕಾವ್ಯವೆಂದರೆ ರಾಘವಾಂಕನ "ಸಿದ್ಧರಾಮಚರಿತ್ರ." ಅವನ ವಚನಗಳಿಂದಲೂ ಅವನ ಜೀವನದ ಕೆಲವು ಸಂಗತಿಗಳು ಗೋಚರವಾಗುತ್ತವೆ. ಹರಿಹರ ಸಿದ್ಧರಾಮನ ಮೇಲೆ ಒಂದು ರಗಳೆಯನ್ನು ಬರೆದಿರುವುದು ಅಸಂಭವವಲ್ಲವೆಂದೂ ಎಂದಾದರೊಮ್ಮೆ ಅದು ಸಿಗಬಹುದೆಂದೂ ವಿದ್ವಾಂಸರು ಊಹಿಸಿದ್ದಾರೆ. "ಶೂನ್ಯಸಂಪಾದನೆ"ಗಳಲ್ಲಿಯೂ ಇವನ ವಿಷಯದ ನಿರೂಪಣೆ ಇದೆ. ಆದರೆ ಸಿದ್ಧರಾಮನ ಹುಟ್ಟು, ಲಿಂಗದೀಕ್ಷೆ—ಮುಂತಾದುವುಗಳ ಬಗ್ಗೆ ಒಮ್ಮತವಿಲ್ಲ. ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿ ಸಿದ್ಧರಾಮನು ಬಸವಣ್ಣನವರನ್ನು ಕಂಡುದನ್ನು ಬೇರೆ ರೀತಿಯಲ್ಲಿ ವರ್ಣಿಸಿರುವುದನ್ನು ಕಾಣಬಹುದು.

ಭೃಂಗಿಯ ಶಾಪದಿಂದ ಶಿವನೋಲಗದ ಅದ್ರಿಶಿರ ಊರ್ಧ್ವಶಿರ ಎಂಬ ಗಂಧರ್ವರು ಭೂಲೋಕದ ಸುವರ್ಣಪುರದಲ್ಲಿ ಮುದ್ದಗೌಡ-ಸುಗ್ಗವ್ವೆ ಎಂಬ ಹೆಸರಿನಲ್ಲಿ ಹುಟ್ಟಿ ಮುಪ್ಪಿನಲ್ಲಿ ಎವೆಯಿಕ್ಕದು ಸಿರಿಕ್ಕದುಣ್ಣದ ಜಿತೇಂದ್ರಿಯತ್ವವ ತಳೆದ ಶಿವಜ್ಞಾನಿ

ಒಬ್ಬನನ್ನು ಮಗನನ್ನಾಗಿ ಪಡೆಯುವರು. ಆ ವೇಳೆಗಾಗಲೆ ತ್ರಿಕಾಲಜ್ಞಾನಿಗಳಾದ ರೇವಣಸಿದ್ಧರು ಅಲ್ಲಿಗೆ ಬಂದು 'ಅಪ್ರತಿಮ ಶಿವಯೋಗಯುತ ಪುತ್ರ'ನಾಗುವನೆಂದು ತಿಳಿಸಿ, ಆತನಿಗೆ ಸಿದ್ಧರಾಮನೆಂಬ ಹೆಸರನ್ನು ಇಡಬೇಕೆಂದೂ ಹೇಳಿ ಹೋಗಿರುತ್ತಾರೆ. ಹಸುಳೆ 'ಜ್ಞಾನಿಗೆ ಮೌನವೇ ಗುರುತು' ಎಂಬಂತೆ ಮೊದ್ದನಂತಿತ್ತು. ಮರುಳನಂತಿರುವ ಆ ಮಗನನ್ನು ದನವನ್ನಾದರೂ ಕಾಯಲೆಂದು ಕಳುಹಿಸುವರು. ಶಿವನು ಅಲ್ಲಿಗೆ ಜಂಗಮ ವೇಷದಲ್ಲಿ ಬಂದು, ತನ್ನ ನಿಜರೂಪುದೋರಿ ಮನೆಗೆ ಹೋಗಿ ಮಜ್ಜಿಗೆ ಹಾಗೂ ಹಂಜಕ್ಕಿಯನ್ನು ತರಲು ಹೇಳುವನು. ಸಿದ್ಧರಾಮ ಅವನನ್ನು ಬಿಟ್ಟುಹೋಗಲಾರದೆ ಹೊಯ್ದಾಡಿ ಕೊನೆಗೆ ಮನೆಗೆ ಬಂದು ತಾಯನ್ನು ಕೇಳಿ ತೆಗೆದುಕೊಂಡು ಹಿಂತಿರುಗುವನು. ಆದರೆ ಮಲ್ಲಿನಾಥ ಮಾಯವಾಗಿದ್ದನು. 'ಮಲ್ಲಯ್ಯ' ಎಂದೊರಲುತ್ತಾ ಸಿದ್ಧರಾಮ ಅವನನ್ನು ಹುಡುಕುತ್ತಾ ಹೊರಟನು. ಮುಗ್ಧರಾಮನು ಭಾವುಕ ರಾಮನಾಗಿ ಸಾಗಿದನು. ಅಳುತ್ತಿದ್ದ ಅವನನ್ನು ಯಾತ್ರಿಕರು ಶ್ರೀಶೈಲಕ್ಕೆ ಕರೆದೊಯ್ಯುವರು. ಶ್ರೀಶೈಲದಲ್ಲಿ ತಾನು ಕಂಡ ಮಲ್ಲಯ್ಯನ ರೂಪವನ್ನು ಕಾಣದೆ ತಾಯಿ ತಪ್ಪಿದ ಕರು ಅರಚುವಂತೆ ಅರಚಿ, ಕಮರಿಯಲ್ಲಿ ಬಿದ್ದು ಸಾಯಬೇಕೆಂದಿರುವಾಗ, ಶಿವನು-ಪಾರ್ವತಿಯೊಡನೆ ಪ್ರತ್ಯಕ್ಷನಾಗಿ ಆಶೀರ್ವದಿಸುವನು. ನಂತರ ಶಿವನು ಸೊನ್ನಲಿಗೆಯ ಮಂದಾರ ವೃಕ್ಷದಡಿ ನೆಲಸುವುದಾಗಿ ನಂಬಿಸಿ ಸಿದ್ಧರಾಮನನ್ನು ತಂದೆತಾಯಿಗಳಲ್ಲಿಗೆ ಕಳುಹುವನು. ಮುಗ್ಧರಾಮ ಸಿದ್ಧರಾಮನಾಗಿ ಹಿಂತಿರುಗಿ ಮಹಾರಾಣಿ ಚಾಮಲದೇವಿಯ ನೆರವಿನಿಂದ ಶಿವನಿಲಯದ ರಚನೆಮಾಡಿ ಹದಿನೇಳು ಲಿಂಗಗಳ ಪ್ರತಿಷ್ಠಾಪನೆ ಮಾಡಿಸುವನು. ಸಿದ್ಧರಾಮ ಭೂದಾನ, ಕನ್ಯಾದಾನ, ವಸ್ತ್ರದಾನ, ಅನ್ನದಾನಾದಿಗಳನ್ನು ಮಾಡಿದನು. ಅವನ ಕೀರ್ತಿ ಹರಡಿತು. ಗುದ್ದಲಿ ಹಿಡಿದು ಕಾಯಕ ನಡೆಸಿ ಶಿವನನ್ನು ಮೆಚ್ಚಿಸಿದನು. ಸಿದ್ಧರಾಮನು ಅನೇಕ ಪವಾಡಗಳನ್ನು ಮೆರೆದನು. ಅವುಗಳಲ್ಲೆಲ್ಲಾ ಅವನ ಭಕ್ತಿ, ಕಾಯಕನಿಷ್ಠೆ ವ್ಯಕ್ತವಾಗಿವೆ. ಈ ಮಧ್ಯೆ ಅಲ್ಲಮಪ್ರಭುಗಳು ಬಂದು ಅವನನ್ನು ಕಲ್ಯಾಣಕ್ಕೆ ಕರೆತಂದು ಲಿಂಗದೀಕ್ಷೆಕೊಡಿಸಿ, ಬಸವಣ್ಣನವರ ಪರಿಚಯ ಮಾಡಿಸುತ್ತಾರೆ. ಕಲ್ಯಾಣದ ಅನುಭವ ಮಂಟಪದಲ್ಲಿ ಪಾಲ್ಗೊಳ್ಳುವ ಭಾಗ್ಯ ಅವನದಾಗುತ್ತದೆ. ಕೊನೆಯಲ್ಲಿ ತನ್ನ ಶಿಷ್ಯ ಹಾವಿನಹಾಳ ಕಲ್ಲಯ್ಯನಿಗೆ ತನ್ನ ನಿಶ್ಚಯವನ್ನು ತಿಳಿಸಿ, ತಾನು ಕಟ್ಟಿಸಿದ ಕೆರೆಯ ನಡುವೆ ಗೊಪೆಯನ್ನು ನಿರ್ಮಿಸಿ ಸಮಾಧಿಸ್ಥನಾದನು.

ಭೂಮಿಯಲ್ಲಿ ಸಿದ್ಧರಾಮನ ಅವತಾರದ ಪೂರ್ವವೃತ್ತಾಂತದ ಬಗ್ಗೆ ರಾಘವಾಂಕನು ಭೃಂಗಿಯಿಂದ ಶಾಪಗ್ರಸ್ಥರಾದ ಗಂಧರ್ವರೇ ಮುದ್ಧಗೌಡ-ಸುಗ್ಗಲೆಯರಾಗಿ ಹುಟ್ಟಿ ಸಾಕ್ಷಾತ್ ಶಿವನನ್ನೇ ತಮ್ಮ ಮಗನನ್ನಾಗಿ ಪಡೆದರು ಎಂದು ಹೇಳಿದ್ದಾನೆ. ಹಲಗೆಯ ದೇವರ ಶೂನ್ಯಸಂಪಾದನೆಯಲ್ಲಿ ಈ ಬಗ್ಗೆ ವಿಲಕ್ಷಣವಾದ ವಿವರಣೆ ಬಂದಿದೆ. ಶೂನ್ಯ ಸಂಪಾದನೆಯಲ್ಲಿ ಆಯಾ ಶರಣರ ಪೂರ್ವವೃತ್ತಾಂತವನ್ನು ಆಯಾ ಸಂಪಾದನೆಯ ಆರಂಭದಲ್ಲಿ ಕೊಡುವುದು ಪದ್ಧತಿ. ಇಲ್ಲಿ ಸಿದ್ಧರಾಮನನ್ನು ವಿಷ್ಣುವಿನ ಅವತಾರ ಎಂದು ಹೇಳಿದೆ. ಪಾರ್ವತಿಯು ಪ್ರಣಯದಿಂದ ಶಿವನನ್ನು ನಿಂದಾಸ್ತುತಿಯಿಂದ ಬಯ್ಯಲು

ಅದನ್ನು ಕೇಳಲಾಗದ ವಿಷ್ಣು ತನ್ನ ಉಗುರುಗಳಿಂದ ಶಿರಚ್ಛೇದನ ಮಾಡಿಕೊಂಡು, ಈಶ್ವರನಿಂದ ಮೆಚ್ಚಿಗೆ ಹೊಂದಿ "ಮುಂದೆ ಮಹೇಶ್ವರನಾಗು" ಎಂಬ ಆಶೀರ್ವಾದವನ್ನು ಪಡೆಯುತ್ತಾನೆ! ಆದರೆ ರಾಘವಾಂಕ (ಸಿದ್ಧರಾಮಚಾರಿತ್ರ) ಹಾಗೂ ಚಾಮರಸರು (ಪ್ರಭುಲಿಂಗಲೀಲೆ) ಸಿದ್ಧರಾಮ ಶಿವನ ಸಾಕ್ಷಾತ್ ಅವತಾರವೆಂದೂ ಅವನಿಗೆ ನೊಸಲ ಬಿಸಿಗಣ್ಣೂ ಉತ್ತಮಾಂಗದಲ್ಲಿ ಲಿಂಗವೂ ಇದ್ದ ವಿಷಯವನ್ನು ನಿರೂಪಿಸಿದ್ದಾರೆ.

ಸಿದ್ಧರಾಮನು ಬಸವಣ್ಣ ಹಾಗೂ ಇತರ ಶಿವಶರಣರ ಸಂಪರ್ಕಪಡೆದ ಸನ್ನಿವೇಶ ಅತ್ಯಂತ ಹೃದಯಂಗಮವಾಗಿದೆ. "ಸಾಕಾರ ನಿಷ್ಠೆ, ಭೂತಗಳಲ್ಲಿ ಅನುಕಂಪೆ" ಎಂಬುದೇ ಪಾರಮಾರ್ಥವೆಂಬ ಕಲ್ಪನೆ ಸಿದ್ಧರಾಮನಿಗೆ ಉಂಟಾಗಿತ್ತು. ಇದರ ಗೌಣತೆಯನ್ನೂ ಅಲ್ಪಸಾರತೆಯನ್ನೂ ಸಿದ್ಧರಾಮನಿಗೆ ಮನಗಾಣಿಸಿದ ಮಹಾನುಭಾವ ಅಲ್ಲಮಪ್ರಭು. ಸಿದ್ಧರಾಮ ತನ್ನ ಸಾಕಾರ ಪೂಜೆ, ಭೂತದಯೆಗಳ ಭರದಲ್ಲಿ ಮರೆತಿದ್ದ ಅಮೂಲ್ಯ ಸಂಗತಿಗಳನ್ನು ನೆನಪುಮಾಡುವ ಅಗತ್ಯವಿತ್ತು. ತಾನು ಕಂಡ ಸತ್ಯವನ್ನು ತಾನೊಬ್ಬನೇ ಅನುಭವಿಸಿ ಆನಂದ ಪಡದೆ ಎಲ್ಲರಿಗೂ ಅದನ್ನು ಹಂಚಿಕೊಡುವ ಉದಾರ ಹೃದಯದ ಕರುಣಾಳುವಾದ ಅಲ್ಲಮಪ್ರಭು ಶಿವಪಂಥದಲ್ಲಿ ನಡೆಯುವ ಸಾಧಕ ಯಾರೇ ಆಗಿರಲಿ, ಅವರಿದ್ದಲ್ಲಿಗೆ ತಾನೇ ತೆರಳಿ ಅವರಿಗೆ ಸನ್ಮಾರ್ಗವನ್ನು ತೋರುತ್ತಿದ್ದ ಪುಣ್ಯಾತ್ಮ. ಆತ ಸಮುದ್ರದ ಬಳಿಗೆ ಮಹಾಸಾಗರ ಬರುವಂತೆ ಸೊನ್ನಲಿಗೆಗೆ ಬಂದು ಸಿದ್ಧರಾಮನನ್ನು ಕಲ್ಯಾಣಕ್ಕೆ ಬಸವಣ್ಣನ ಬಳಿಗೆ ಕರೆದೊಯ್ಯುವ ಸನ್ನಿವೇಶವು ಶೂನ್ಯಸಂಪಾದನೆಯಲ್ಲಿ ಸುಂದರವಾಗಿ ಮೂಡಿದೆ.

ಲಕ್ಕಣದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿ ಸಿದ್ಧರಾಮನು ಬಸವಣ್ಣನವರನ್ನು ಕಂಡುದನ್ನು ಬೇರೆ ರೀತಿಯಲ್ಲಿ ವರ್ಣಿಸಲಾಗಿದೆ. ದಿನವೂ ಕೈಲಾಸಕ್ಕೆ ಹೋಗಿಬರುತ್ತಿದ್ದ ಸಿದ್ಧರಾಮನನ್ನು ಶಿವಶರಣರು 'ಬಸವ ಮೂರು ಲೋಕ'ಗಳಲ್ಲಿಯೂ ಪರಿಪೂರ್ಣ ಎನ್ನುತ್ತಾರೆ. ಅವನನ್ನು ಕಂಡಿದ್ದೀರಾ ಎಂದು ಪ್ರಶ್ನಿಸಲು ಇಲ್ಲವೆಂದ ಸಿದ್ಧರಾಮ ಕೈಲಾಸಕ್ಕೆ ಬಂದು ಶಿವನನ್ನು ಬಸವನ ನೆಲೆಯನ್ನು ತೋರೆಂದು ಬೇಡಿಕೊಳ್ಳುವನು. ಈಶ್ವರನು ತನ್ನ ಹೃತ್ಕಮಲದಲ್ಲಿದ್ದ ಬಸವನನ್ನು ತೋರುವನು.

"ಸಾಕಾರನಿಷ್ಠೆ ಭೂತಂಗಳೊಳಗನುಕಂಪೆ ತಾನೆ ಪರಬೊಮ್ಮ"—ಈ ಸೂತ್ರ ಸಿದ್ಧರಾಮನ ಬದುಕಿನ ಸಾರ; ಅವನ ಕಥೆ ಇದಕ್ಕೆ ವ್ಯಾಖ್ಯಾನ. ಸಿದ್ಧರಾಮನ ಅನುಕಂಪ ಚೇತನಾಚೇತನಗಳನ್ನು ಆವರಿಸಿದೆ. ಮಾನವರ ವಿಷಯದಲ್ಲಂತೂ ಅದು ತುಂಬು ಹೊಳೆಯಾಗಿ ಹರಿಯುತ್ತದೆ. ಸಾಕಾರನಿಷ್ಠೆಯಿಂದ ಬರುವ ಆತ್ಮಕಲ್ಯಾಣವೂ ಭೂತಾನುಕಂಪೆಯಿಂದ ದೊರೆಯುವ ಲೋಕಕಲ್ಯಾಣವೂ ಅಹಮಹಮಿಕೆಯಿಂದ ವೃದ್ಧಿಗೊಂಡಾಗ ಅವು ಸಮಸ್ತ ಸನ್ಮಂಗಳಸ್ವರೂಪಿಯಾದ ಪರಬ್ರಹ್ಮವಲ್ಲದೆ ಮತ್ತೇನು? ಅಂತೆಯೇ ಅವನು "ಪಶುಪಕ್ಷಿ ಕ್ರಿಮಿಕೀಟಕಾದಿಗಳು ನೀರ್ಗುಡಿಯೆ ಭವವಳಿವಂತು, ಕೆರೆಕಟ್ಟಿ ಬಾವಿಗಳನ್ನೂ ಅನ್ನಸತ್ರ ಅರವಟ್ಟಿಗೆಗಳನ್ನೂ ನಿರ್ಮಿಸಿ ಭೂವಳಯದೊಳಗುಳ್ಳ ಸರ್ವ ಜೀವಾಳಿಗಳ ಕ್ಷೇಮಚಿಂತನೆ ಮಾಡುತ್ತಾ ಕರ್ಮಯೋಗಿಯಾಗಿ ಸಮತೆಯ ಗಾರುಡಿಗ"

ಎಸ್ನಿಸಿರುತ್ತಾನೆ. ಆದರೆ ಈ ಕರ್ಮದ ಭರದಲ್ಲಿ ಅಮೂಲ್ಯವಾದ ಸಂಗತಿಯನ್ನೇ ಮರೆತಿದ್ದನು. ಅವನ ದಯೆಗೆ ಕರುಣೆಗೆ ಕೊನೆಯೇ ಇಲ್ಲವಾಗಿ ಅವನಿಗೆ ದಿಕ್ಕೇ ತೋಚದಂತಾಗಿತ್ತು. ಸಾಕಾರನಿಷ್ಠೆ, ಭೂತದಯೆಗಳು ಉತ್ಕೃಷ್ಟವೆಂಬ ಅಂಶವನ್ನು ಯಾರೂ ಅಲ್ಲವೆನ್ನುವಹಾಗಿಲ್ಲ. ಆದರೆ ಅದಕ್ಕೂ ಒಂದು ಮಿತಿಯುಂಟು—ಎಂಬ ಅಂಶ ಮನವರಿಕೆಯಾಗಬೇಕಿತ್ತು. ಹೀಗೆ ಸಿದ್ಧರಾಮನ ಬಾಳಿನಲ್ಲಿ ಅಲ್ಲಮಪ್ರಭುವಿನ ಪ್ರವೇಶದ ಅಗತ್ಯವಿತ್ತು.

"ಶಿವಯೋಗಿಯ ಶರೀರಂ ವೃಥಾ ಸವೆಯಲಾಗದನುಗೊಂಬನಿತು ಕಾಯಕಂ ನಡೆಯುತ್ತಿರಬೇಕು" ಎಂಬ ದೊಡ್ಡ ಆದರ್ಶದ ಸಾಧಕ ಸಿದ್ಧರಾಮನಿಗೆ ಅದೇ ಕೊನೆಯ ಆದರ್ಶವಲ್ಲ ಎಂಬುದನ್ನು ತೋರಲು ಅಲ್ಲಮಪ್ರಭು ಒಂದು ದಿನ ಬಂದರು. ಕೆರೆಯೊಂದರ ಕೆಲಸದಲ್ಲಿ ಸಿದ್ಧರಾಮ ತೊಡಗಿರುತ್ತಾನೆ. ಅಲ್ಲಿದ್ದ ಒಡ್ಡರನ್ನು ಕುರಿತು ಪ್ರಭು "ಒಡ್ಡರಾಮನಿದೇನು ಗೊಡವೆಯ ಮಾಡಿಕೊಂಡು ವೃಥಾಮನಸನು ಗೊಡ್ಡಮಾಡಿಯೆ ಕೆಟ್ಟಂ" ಎಂದುಕೊಂಡು ಒಡ್ಡರಾಮನ ಕರೆಯಿರಿ ಎಂದಾಗ ಒಡ್ಡರು—"ನಮ್ಮಯ ಗುರುವನೀಪರಿ ಜರಿದು ಜಾಡಿಸಿ ಹರಿಹರಬ್ರಹ್ಮಾಮರೇಂದ್ರರು ನುಡಿಯಲಮ್ಮುವರೆ? ಮರುಳು ಮಾನವ ನೀನು ನುಡಿದರೆ ಸಿರಿಯೆ ಸಿದ್ಧಂಗೆ" ಎಂದು ಪ್ರಶ್ನಿಸಿದರು. ಅದಕ್ಕೆ ಅಲ್ಲಮಪ್ರಭು—"ಸಕಲ ಕಲ್ಲನು 'ಕಡಿದು ಕಲ್ಲಿಗೆ ಶಿಖರ ದೇಗುಲವೆಂದು ಮಾಡಿಸಿ ಮಕರಿಸುವರೊಡಂರಲ್ಲದೆ ಸಿದ್ಧರಲ್ಲ" ಎನ್ನುವನು. ಮಾತಿಗೆ ಮಾತು ಮಸೆದು ಒಡ್ಡರ ಕೋಪ ನೆತ್ತಿಗೇರಿ ತಮ್ಮ ಒಡೆಯನನ್ನು ತೆಗಳುವ ಈತನನ್ನು ಬಂಧಿಸಿ ಶಿಕ್ಷಿಸಲೆಂದು ಹೋಗುವರು. ಬಯಲು ಬಿಗಿಯಲು ಹೋದಂತೆ ಬವಣೆಗೊಳ್ಳುವರು.

ಅನಂತರ ಸಿದ್ಧರಾಮು ಬಂದಾಗ, ಅವನ ಸಾಧನೆಯಲ್ಲಿರುವ ಕೊರತೆಯನ್ನು ಎತ್ತಿ ತೋರಿ-'ದೇಹವೇ ದೇಗುಲವಾಗಿರಲು, ಬೇಱೆ ಮತ್ತೆ ದೇವಾಲಯವೇಕಯ್ಯ, ಪ್ರಾಣವೇ ಲಿಂಗವಾಗಿರಲು ಬೇಱೆ ಮತ್ತೆ ಲಿಂಗವೇಕಯ್ಯ' ಎಂದು ಪ್ರಶ್ನಿಸುವನು. ಅದಕ್ಕೆ ಸಿದ್ಧರಾಮ 'ಕೃಷಿಯ ಮಾಡಿ ಉಣ್ಣದೆ, ಹಸಿವು ಹಱುವ ಪರಿ ಇನ್ನೆಂತು' ಎಂದು ಕರ್ಮದ ಅವಶ್ಯಕತೆಯನ್ನು ಹೇಳುವನು. ಆ ಮಾತಿಗೆ ಅಲ್ಲಮ ಕರ್ಮ ಬೇಕು ಆದರೆ ಸಾಯುವವರೆಗೂ ಸಾಧನೆಯನ್ನೇ ಮಾಡಿದರೆ ಕಾದುವುದು ಯಾವಾಗ? ಕರ್ಮದ ಫಲ ತಾತ್ಕಾಲಿಕವಾಗದೆ ಶಾಶ್ವತವಾಗಬೇಕು. ತನುವೆಂಬ ಏರಿಗೆ ಮನವೆಂಬ ಕಟ್ಟೆ, ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲವ ತುಂಬಿ ಕೆರೆಯನ್ನು ಕಟ್ಟು, ವಿಶ್ವವೆಲ್ಲ ಕುಡಿದರೂ ಬತ್ತದ ಜಲ ಈ ಕೆರೆಯದು ಎನ್ನುತ್ತಾನೆ. 'ಅನ್ನವನಿಕ್ಕಿದರೆ ಮತ್ತೆ ಹಸಿವಾಗುತ್ತದೆ! ಅರವಟ್ಟಿಗೆಯನ್ನಿಟ್ಟು ನೀರು ಕುಡಿಸಿದರೆ ಮತ್ತೆ ನೀರಡಿಕೆಯಾಗುತ್ತದೆ; ಕೆರೆ ಕಟ್ಟಿಸಿದರೆ ಒಮ್ಮಿಲ್ಲೊಮ್ಮೆ ಒಡೆದು ಹೋಗುತ್ತದೆ; ತನುವಿನ ಸ್ಥಿರವಾದ ಕೆರೆಯನ್ನು ಕಟ್ಟಿ ಅದರಲ್ಲಿ ಪರಮಾನಂದ ಜಲವನ್ನು ತುಂಬಿ ಆ ಆನಂದದ ಅರವಟಿಗೆಯನ್ನಿರಿಸಿ ಆ ಆನಂದದ ಅಮೃತವನ್ನು ಒಮ್ಮೆ ಪಾನ ಮಾಡಿದವರು ಮತ್ತೆ ಹಸಿಯದಂತೆ ನೀರಡಿಸದಂತೆ ಮಾಡುವುದರಲ್ಲೇ ಮೇಲ್ಮೆಯಿದೆ.' ಇದು ಪ್ರಭುವಿತ್ತ ಪ್ರಭಾಮಯ ಸಂದೇಶ.

ಅಲ್ಲಮಪ್ರಭುವಿನ ಈ ಮಾತಿನ ಬೆಳಕು ಸಿದ್ಧರಾಮನ ಮನವನ್ನು ಬೆಳಗಿಸುತ್ತದೆ. ಅವನು ಅಂತರ್ಮುಖಿಯಾಗುತ್ತಾನೆ. ಅನಂತರ ಇನ್ನು ಈ ಸಾವು ತಪ್ಪುವ ಭೇದವಾವುದು, ಮುಕ್ತಿಮಾರ್ಗದ ಹಾದಿ ಯಾವುದು, ನಿತ್ಯನ ಪರಿಯಾವುದೈ ಗುರುವೆ? ಬೋಧಿಸುವುದೆನಗೆ ಎಂದು ಕೇಳುವನು. ಅದಕ್ಕೆ ಪ್ರಭುವು ಕೆಸರಿನಲ್ಲಿ ಬಿದ್ದ ಆನೆ ಯಾರ ನೆರವೂ ಇಲ್ಲದೆ ತನ್ನ ಶಕ್ತಿಯಿಂದ ತಾನೇ ಮೇಲೆ ಏಳುವಂತೆ, ನೀನೇ ತಪ್ಪಿದ ನಿನ್ನ ನಿಜವನ್ನು ಸಾಧಿಸಿ ಕಂಡೆಯಾದರೆ ನೀನೆ ಸದ್ಯೋನ್ಮುಕ್ತನೆಂದು ಸಂತೈಸಿ, "ಹಲವು ಮುಖದಲಿ ಹರಿವ ಮನವನು ನಿಲಿಸುವುದು ಲಿಂಗದಲಿ, ಲಿಂಗದ ಹೊಲಬು ತಿಳಿದು ಪ್ರಾಣಲಿಂಗವ ನಱಿದು ಚೆನ್ನಾಗಿ ತಿಳಿದು ತೃಪ್ತಿಸ್ಥಾನದಲಿ ನಿರ್ಮಳ ಜ್ಯೋತಿಲಿಂಗವನು ನೆಲೆಗೊಳಿಸಕಲಿತೊಡೆ ನೀನೆ ಸುಖಿಯೈ ರಾಮ" ಎಂದು ಹೇಳುವನು. ಹೀಗೆ ಅವನ ಕರ್ಮಮಾರ್ಗವನ್ನು ಹಳಿದು, ತನ್ನ ಕರಸ್ಥಲದ ಲಿಂಗವ ಆದ್ಯಂತವನ್ನು ಬೋಧಿಸುತ್ತಾನೆ. ಆ ವಿಷಯದಲ್ಲಿ ಸಿದ್ಧರಾಮನು ಹೆಚ್ಚು ಕುತೂಹಲವನ್ನು ತಾಳಿ "ಇಷ್ಟಲಿಂಗವಿಡಿದು ನಿಜಲಿಂಗೈಕ್ಯವ ಕಾಂಬ ಪರಿ ಹೇಗೆ" ಎಂದು ಪ್ರಶ್ನಿಸುವನು. ಅದಕ್ಕೆ ಪ್ರಭುದೇವರು "ಈ ಸೂಕ್ಷ್ಮದ ಸ್ಥಿತಿಯನ್ನು ಸಂಗನ ಬಸವಣ್ಣ ಬಲ್ಲನು. ಆತನ ಕೈಯಲ್ಲಿ ನಿನಗೆ ತಿಳುಹಿಕೊಡಿಸುವೆನು ನಡೆ" ಎಂದು ಕಲ್ಯಾಣಕ್ಕೆ ಕರೆತರುತ್ತಾರೆ. ಕಾರಮುಗಿಲಿನ ಕರೆಯ ಕೇಳಿದ ಸೋಗೆಯಂತಾಯಿತು ಸಿದ್ಧರಾಮನ ಸ್ಥಿತಿ. ಪ್ರಭು ಹಾಗೂ ಸಿದ್ಧರಾಮ ಇಬ್ಬರೂ ಕಲ್ಯಾಣಕ್ಕೆ ಬಂದರು. ಅದೊಂದು ಅಮೃತಗಳಿಗೆ. ಬಸವಣ್ಣನವರು ಕಟ್ಟಿದ ಮಹಾಮನೆಯನ್ನು ಅಲ್ಲಿನ ಶರಣಸಂದೋಹವನ್ನು ಅಲ್ಲಿ ನಡೆದ ಜ್ಞಾನ ದಾಸೋಹವನ್ನು ಕಂಡ ಸಿದ್ಧರಾಮನಿಗೆ ಅರಸುತ್ತಿದ್ದ ಬಳ್ಳಿ ಕಾಲ ತೊಡಕಿದಂತೆ ಆಯಿತು.

ಸಿದ್ಧರಾಮ ಗುರುಕರುಣವನ್ನು ಪಡೆದ ರೀತಿ ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಯಲ್ಲಿ ಚೇತೋಹಾರಿಯಾಗಿ ನಿರೂಪಿತವಾಗಿದೆ. ಕಲ್ಯಾಣದಲ್ಲಿ ಶಿವಶರಣರು ಮಹಾನುಭಾವ ಗೋಷ್ಠಿಯನ್ನು ಮಾಡುತ್ತಿರುವಾಗ ಸಿದ್ಧರಾಮ ಪ್ರಭುದೇವರನ್ನು "ಕರಸ್ಥಲದ ನಿಜವ ಬಸವರಾಜದೇವರಿಂದ ಹೇಳಿಸಿಹೆವೆಂದು ಕರೆದುಕೊಂಡು ಬಂದಿರಿ, ಆ ಲಿಂಗದ ನಿಜವ ಎನಗೆ ನಿರೂಪಿಸಿ" ಎಂದು ಬಿನ್ನಯಿಸುವನು. ಪ್ರಭುದೇವರು ಬಸವಣ್ಣನವರಿಗೆ ಆ ಬಗ್ಗೆ ಹೇಳು ಎನ್ನಲು, ಸಿದ್ಧರಾಮನ ಅಂಗದ ಮೇಲೆ ಲಿಂಗವಿಲ್ಲದ್ದನ್ನು ಕಂಡ ಬಸವಣ್ಣ "ಅಂಗಲಿಂಗ ಸಂಬಂಧವಿಲ್ಲದಿರ್ದಂರೆ ಎನ್ನಮನ ಒಪ್ಪದು" ಎಂದು ತಿಳಿಸಲು ಸಿದ್ಧರಾಮ "ಬೆಳಗು ಬೆಳಗು ಹಳಚುವಲ್ಲಿ ಕತ್ತಲೆ ಉಳಿಯಬಲ್ಲುದೆ ಅಯ್ಯ? ಶರಣ ಶರಣರು ಮಹಾನುಭಾವಗೋಷ್ಠಿಯ ಮಾಡುವಲ್ಲಿ ಸಂಗದೊಳಿರ್ದವರ ಅಜ್ಞಾನವಳಿದು ನಿಜವನೈದುವರಯ್ಯ" ಎಂದು ನುಡಿದನು. ಆಗ ಚನ್ನಬಸವಣ್ಣ ಅಂಗದ ಮೇಲೆ ಲಿಂಗಸಂಬಂಧವಿಲ್ಲದವರಿಗೆ ಪ್ರಾಣಲಿಂಗಸಂಬಂಧವಿಲ್ಲವೆಂದು ನಿರೂಪಿಸುವನು. ಅದಕ್ಕೆ ಸಿದ್ಧರಾಮ ತನ್ನ ತನುಮನವೆಂಬ ಭಾವ ತನ್ನಲ್ಲಿಲ್ಲವೆಂದೂ, "ಎನ್ನ ಕಾಯವೆ ಬಸವಣ್ಣನು ಎನ್ನ ಪ್ರಾಣವೆ ಪ್ರಭುದೇವರು, ಕಪಿಲ ಸಿದ್ಧಮಲ್ಲಿಕಾರ್ಜುನನಲ್ಲಿ ಒಳಹೊಱಗೆಂಬುದಿಲ್ಲ ಕಾಣಾ ಚನ್ನಬಸವಣ್ಣ" ಎಂದು ಪ್ರತ್ಯುತ್ತರಕೊಡುವನು. ಅದಕ್ಕೆ

ಚನ್ನಬಸವಣ್ಣ "ಅಂಗವಿಲ್ಲೆಂಬಲ್ಲಿಯೇ ಅಂಗಶಂಕೆ ಬಿಡದು. ಲಿಂಗ ಉಂಟೆಂಬಲ್ಲಿಯೇ ಲಿಂಗಶಂಕೆ ಬಿಡದು" ಎಂದರೆ ಸಿದ್ಧರಾಮ "ತನುವಿದ್ದು ತನುವಿಲ್ಲ ಮನವಿದ್ದು ಮನವಿಲ್ಲ" ಎಂದು ಬಿನ್ನೈಸುವನು. ಆಗ ಅಲ್ಲಮ ಸಿದ್ಧರಾಮನ ಸಹಾಯಕ್ಕೆ ಬಂದು—ಅವನು ಆಗಲೇ ನಿಜದ ನಿಲವನ್ನು ಮುಟ್ಟಿದ್ದಾನೆ, ಹಾಗೆ ನಿಜದ ನಿಲವನ್ನು ಮುಟ್ಟಲು ಕೇವಲ ಸಾಧಕವಾದ ಇಷ್ಟಲಿಂಗದ ಅವಶ್ಯಕತೆ ಅವನಿಗಿಲ್ಲವೆಂದು ಹೇಳುತ್ತಾನೆ. "ನಿಮ್ಮನಱಿಯದ ಶರಣಂಗೆ ಶಿವಪೂಜೆಯ ಮಾಡುವ ದಂದುಗವೇಕೋ ? ಆಕಾಶವನಡರುವಂಗೆ ಅಟ್ಟಗೋಲ ಹಂಗೇಕೋ ? ಸಮುದ್ರವ ದಾಂಟುವಂಗೆ ಹಱಿಗೋಲ ಹಂಗೇಕೋ ?" ಎನ್ನಲು ಚನ್ನಬಸವಣ್ಣನವರು ಅದನ್ನು ಖಂಡಿಸಿ, "ಆಕಾಶದಲ್ಲಾಡುವ ಪಟಕ್ಕಾದರೂ ಮೂಲಸೂತ್ರವಿರಬೇಕು. ಕಲಿಯಾಡೊಡಂ ಕೈದುವಿಲ್ಲದೆಯಾಗದು. ಭೂಮಿ ಇಲ್ಲದೆ ಬಂಡಿ ನಡೆಸುವುದೇ ?" ಎಂದು ಸವಾಲು ಹಾಕುತ್ತಾರೆ. ಅಷ್ಟಲ್ಲದೆ ಅಂಗಲಿಂಗ ಸಂಬಂಧವಿಲ್ಲದಿರ್ದರೆ ನಮ್ಮ ಶರಣರು ಒಪ್ಪರೆಂದೂ "ಸತಿಸಂಗವತಿಸುಖವೆಂದಱಿದಡೇನು ಗಣಸಾಕ್ಷಿಯಾಗಿ ವಿವಾಹವಾಗದನ್ನಕ್ಕರ, ಕೂಡಲ ಚನ್ನಸಂಗಯ್ಯನಲ್ಲಿ ಇಷ್ಟಲಿಂಗ ಸಂಬಂಧವಿಲ್ಲದವರ ಮುಖವ ನೋಡಲಾಗದಯ್ಯ" ಎಂದು ವಾದಿಸುವರು. ಆಗಲೇ ಇಷ್ಟಲಿಂಗದ ಅಗತ್ಯವನ್ನು ಕುರಿತು ಮೋಳಿಗಯ್ಯ, ದಾಸೀಮಯ್ಯ, ಮೆರೆಮಿಂಡದೇವರು, ರಾಯಸದ ಮಂಚಣ್ಣ, ಡಕ್ಕೆಯ ಬೊಮ್ಮಣ್ಣ, ಅಮುಗಿದೇವಯ್ಯ ಮುಂತಾದವರು ವಚನಗಳನ್ನು ನಿರೂಪಿಸುವರು. ಅನಂತರ ಚನ್ನಬಸವಣ್ಣ ಕನಲಿ ನುಡಿವನು "ನೊಸಲಲೊಂದು ಕಣ್ಣುಳ್ಳವನಾದರೂ ಅಂಗದ ಮೇಲೆ ಲಿಂಗಸ್ವಾಯತವಿಲ್ಲದಿದ್ದರೆ, ಅವನ ಮನೆಯಲ್ಲಿ ಮಾಡಿದ ಪಾಕ ಶ್ವಾನಮಾಂಸ ತಪ್ಪದಾಗಿ ಬಲ್ಲವರೊಲ್ಲರು." ಬಸವಣ್ಣನವರೂ ಈ ರೀತಿ ವಿಡಂಬಿಸುತ್ತಾರೆ—"ಗುರು ತೋಱಿದ ಲಿಂಗವು ಮನಸಾಹಿತ್ಯವಾಗಿರುತ್ತಿರಲು, ಪವನಭೇದದಿಂದ ಅಱಿದನೆಂದರೆ ಅದೇ ದ್ರೋಹ." ಆಗ ಅಲ್ಲಮಪ್ರಭುಗಳು—"ಎಳ್ಳಿಂಗೆ ಪರಿಮಳವ ಕಟ್ಟಿದಲ್ಲದೆ, ಎಣ್ಣೆಗೆ ಪರಿಮಳ ವೇಧಿಸದು, ದೇಹದಲ್ಲಿ ಇಷ್ಟಲಿಂಗ ಸ್ಥಾಪಿಸಿದಲ್ಲದೆ ಪ್ರಾಣಲಿಂಗ ಸಂಬಂಧವಾಗದು" ಎಂದು ಸಿದ್ಧರಾಮನಿಗೆ ತಿಳಿಸುವರು. ಅದಕ್ಕೆ ಸಿದ್ಧರಾಮ ಭಯಪಟ್ಟು ಪ್ರಭುದೇವರ ಕಾಲಿಗೆ ಬಿದ್ದು "ನಿಮ್ಮ ಶರಣರ ಕರುಣವ ಕೃಪೆಮಾಡಾ ಪ್ರಭುವೆ" ಎಂದು ಶರಣರ ಕರುಣವ ಹಾರೈಸುತ್ತಾ ಹಲುಬುತ್ತಾನೆ.

"ಹಿಂದೆ ಬಯಸಿದೆ, ಕಾಳುತನದಲ್ಲಿ, ಎನ್ನ ಮಂದಮತಿಯ ನೋಡಿರಯ್ಯ, ಕೆರೆ ಬಾವಿ ಹೂದೋಟ ಚೌಕ ಛತ್ರಂಗಳ ಮಾಡಿ, ಜೀವಂಗಳ ಮೇಲೆ ಕೃಪೆಯುಂಟೆಂದು ಎನ್ನ ದಾನಿಯೆಂಬರು, ಆನು ದಾನಿಯಲ್ಲ ಅಯ್ಯಾ. ನೀನು ಹೇಳಿದಂತೆ ನಾ ಮಾಡಿದೆನು. ನೀ ಬರಹೇಳಿದಲ್ಲಿ ನಾನು ಬಂದೆನು, ನೀನು ಇರಿಸಿದಂತೆ ಇದ್ದೆನು. ನಿಮ್ಮ ಇಚ್ಛಾಮಾತ್ರವ ಮೀಱಿದೆನಾಯಿತ್ತಾದಡೆ ಫಲಪ್ರದ. ಜನನವ ಬಯಸಿದೆನಾದೊಡೆ ನಿಮ್ಮಾಣೆ. ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ ಭವಕ್ಕೆ ಬರಿಸಿದರಯ್ಯಾ ನಿಮ್ಮ ಧರ್ಮ."

"ನುಡಿಯಬಹುದು ಅದ್ವೈತವನೊಂದುಕೋಟಿ ವೇಳೆ. ಒಮ್ಮೆ ನಡೆಯಬಹುದೆ ನಿರ್ಧಾರವಾಗಿ ಸದ್ಭಕ್ತಿ ಆಚಾರವಾ? ನುಡಿದಂತೆ ನಡೆವ, ನಡೆದಂತೆ ನುಡಿವ ಸದ್ಭಕ್ತಿ

ಸದಾಚಾರಯುಕ್ತ ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯ ಪ್ರಭುವೇ, ಕಪಿಲಸಿದ್ಧಮಲ್ಲಿಕಾರ್ಜುನ."

ಕೊನೆಗೆ ಚನ್ನಬಸವಣ್ಣನವರು ಸಿದ್ಧರಾಮನ ಕಾಯಪ್ರಾಣ ಮನವೆಂಬ ತ್ರಿವಿಧದಲ್ಲಿ ಇಪ್ಪತ್ತೊಂದು ದೀಕ್ಷೆಯಂ ಮಾಡಿ, ತ್ರಿವಿಧ ಲಿಂಗಧಾರಣಮಂ ಸಂಬಂಧಿಸುವರು. ಆಗ ಸಿದ್ಧರಾಮ ಹರ್ಷಗೊಂಡು ಕೃತಜ್ಞತೆಯಿಂದ—"ಹೆಸರಿಡಬಾರದ ಲಿಂಗವ ಹೆಸರಿಟ್ಟು ಎನ್ನ ಕರಸ್ಥಲಕ್ಕೆ ತಂದು ಕರತಳಾಮಳಕದಂತೆ ಮಾಡಿ ಎನ್ನ ಕರಸ್ಥಲಕ್ಕೆ ಕ್ರಿಯಾಲಿಂಗವ ತೊಟ್ಟ ಶ್ರೀಗುರು ಚನ್ನಬಸವಣ್ಣ" ಎಂದು ಮುಂತಾಗಿ ಹಾಡುವನು, ಇದು ಸಿದ್ಧರಾಮನು ಗುರುಕರುಣವನ್ನು ಪಡೆದ ರೀತಿ.

ಪರಿಪೂರ್ಣ ವ್ಯಕ್ತಿತ್ವವನ್ನು ಪಡೆದ ಸಿದ್ಧರಾಮ ಸೊನ್ನಲಿಗೆಗೆ ಹಿಂತಿರುಗಿ ಅಭಿನವ ಶ್ರೀಶೈಲವನ್ನಾಗಿ ಪರಿವರ್ತಿಸಿದನು. ಕಲ್ಯಾಣದ ಕ್ರಾಂತಿಯನಂತರವೂ ಆತ ತನ್ನ ಮಾನವೋದ್ಧರಣಕಾರ್ಯವನ್ನು ಮುಂದುವರಿಸಿದ್ದನೆಂದು ತೋರುತ್ತದೆ. ಸಿದ್ಧರಾಮನು ಮಾಡಿದ ಅನೇಕ ಪವಾಡಗಳ ವರ್ಣನೆಗಳು ಹೇರಳವಾಗಿ ವರ್ಣಿತವಾಗಿವೆ. ಕಾಸಿದ ಪಂಚಲೋಹದ ಗುಂಡನ್ನು ಕೈಯಲ್ಲಿ ಹಿಡಿದು 'ಇನ್ನಾದೊಡಂ ನಂಬಿರೇ ಮಲ್ಲಿಕಾರ್ಜುನನ' ಎಂದು ಸಾರಿ ದಿವ್ಯವನ್ನು ಗೆದ್ದುದು; ಕುಟಿಲಗಾರರು ಕೊಟ್ಟ ವಿಷವನ್ನು ಬೆರೆಸಿದ ಪ್ರಸಾದವನ್ನೆ ಶಿಷ್ಯರಿಗೆ ಹಂಚಿ ತನ್ನ ಪ್ರಭಾವದಿಂದ ಅದನ್ನು ಅಮೃತವನ್ನಾಗಿ ಪರಿವರ್ತಿಸಿದ್ದು....ಇತ್ಯಾದಿ.

ಸಿದ್ಧರಾಮ ಕೇವಲ ಪವಾಡಪುರುಷನಲ್ಲ; ಶಿವನ ಅನುಭವವನ್ನು ಪಡೆದ ಸಾಧಕನೂ ಹೌದು. ಅವನ ಎಲ್ಲ ಪವಾಡಗಳ ಹಿಂದೆ ಸ್ಪಂದಿಸುವ ಮಾನವಾಂತಃಕರಣವನ್ನು ನಾವು ನಿಚ್ಚಳವಾಗಿ ಕಾಣಬಹುದಾಗಿದೆ. ಶಿವಪೂಜೆಯಲ್ಲಿ ನಿಷ್ಠೆಯೂ ಸರ್ವಜೀವಿಗಳಲ್ಲಿ ದಯೆಯೂ ಸಾಧಕನಲ್ಲಿರಬೇಕಾದ ಭಂಡಾರ. ಸಾಧನೆಯಿಂದ ಇವು ಪರಿಮಳಿಸುತ್ತವೆ. ಸಿದ್ಧರಾಮ ಇಂತಹ ಯೋಗಿ. ಸಿದ್ಧನಿಗೆ ಸಾಕಾರನಿಷ್ಠೆಯ ಅಗತ್ಯವಿಲ್ಲದಿದ್ದರೂ ಲೋಕದ ಜನರು ಬದುಕುವುದಕ್ಕಾಗಿ ಅವನು ಅದನ್ನು ಆಚರಿಸಿ ತೋರಿಸಬೇಕಾಗುವುದು. ಜನರ ಪಾಪಗೆಸರನ್ನು ತೊಳೆಯುವ ಸಾಧನವಾಗುವುದು. ಸಿದ್ಧರಾಮ ತಾನು ಸಮಾಧಿಸ್ಥನಾಗುವ ಮುಂಚೆ ತನ್ನ ಶಿಷ್ಯರಿಗೆಲ್ಲ ಏನೇ ತೊಂದರೆಗಳು ಬರಲಿ, ತಲ್ಲಣಿಸದೆ, ಕ್ಷೇತ್ರವನ್ನು ಬಿಟ್ಟು ಹೋಗಕೂಡದೆಂದೂ, ಕಲುಗೆಲಸಕ್ಕೆ ಜಾರಬಾರದೆಂದೂ, ಮೃಡನಿಷ್ಠೆಯನ್ನು ನಂಬಿಕೊಂಡಿರಬೇಕೆಂದೂ ಶಿವನ ಸೇವೆಯನ್ನು ಮರೆಯದೆ ಸರ್ವನೇಮಗಳನ್ನು ನಡೆಸಬೇಕೆಂದೂ ಅಜ್ಞಾನಿರೂಪ ಕೊಡುತ್ತಾನೆ.

ಸಿದ್ಧರಾಮ ಒಬ್ಬ ಆದರ್ಶ ಸಮಾಜಸೇವಕ. ಅವನು ತನ್ನ ಸಣ್ಣ ಹಳ್ಳಿಯನ್ನು ಪುರವನ್ನಾಗಿ ಮಾಡಿದನು. ಅದು ಒಂದು ದಿವ್ಯಕ್ಷೇತ್ರವಾಯಿತು; ಅದು ಅವನ ಪವಿತ್ರ ಕಾಯಕದ ಕೇಂದ್ರವಾಯಿತು; ಕರ್ಮದ ಆಡುಂಬೊಲವಾಯಿತು; ಧರ್ಮದ ನೆಲೆವೀಡಾಯಿತು. ಒಟ್ಟಿನಲ್ಲಿ ಸಿದ್ಧರಾಮ ಜನ ಬದುಕಬೇಕೆಂದು—ಚನ್ನಾಗಿ ಬದುಕಬೇಕೆಂದು—ಪ್ರಯತ್ನಿಸಿದನು. ಅವನ ಕೆಲಸದಿಂದ ಸೊನ್ನಲಿಗೆ ಲಿಂಗದ ಬೀಡಾಗಿ

ಪುಣ್ಯದ ಪುಂಜವಾಗಿ, ಮುಕ್ತಿಕ್ಷೇತ್ರವಾಗಿ, ಧರ್ಮದ ದಾನಿಯಾಗಿ ಬೆಳಗಿತು. ಸಿದ್ಧರಾಮ ಸಲ್ಲಿಸಿದ ಸಾರ್ವಕಾಲಿಕ ಸೇವೆ ಅನುಕರಣೀಯ. ದೇಶದ ಏಳಿಗೆಗೆ ಶ್ರಮಿಸಿ, ಅದರ ಸರ್ವಾಂಗೀಣ ಪ್ರಗತಿಯನ್ನು ಕಾಣಬಯಸುವವರಿಗೆ ಸಿದ್ಧರಾಮ ಮಾರ್ಗದರ್ಶಿಯಾಗಿದ್ದಾನೆ.

ಸಿದ್ಧರಾಮನು ಪ್ರಸಿದ್ಧ ವಚನಕಾರನೂ ಆಗಿದ್ದಾನೆ. ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯದಲ್ಲಿ ಆದ ಕ್ರಾಂತಿ ಕಹಳೆಗೆ ದನಿಗೂಡಿಸಿದ್ದಾನೆ. ಗಹನವಾದ ವಿಷಯಗಳನ್ನು ಆಡುಮಾತಿನಲ್ಲಿ ಹೇಳುವ ಕಲೆಗಾರಿಕೆ ಅವನಿಗೆ ಸಿದ್ಧಿಸಿದೆ. ಅವನು ೬೮೦೦೦ ವಚನಗಳನ್ನು ಹಾಡಿದಂತೆ ಪ್ರತೀತಿಯಿದೆ. ಅವನ ವಚನಗಳ ಅಂಕಿತ "ಕಪಿಲ ಸಿದ್ಧ ಮಲ್ಲಿಕಾರ್ಜುನಾ."

ಹೀಗೆ ಸಿದ್ಧರಾಮನಲ್ಲಿ ಸಮಾಜಸೇವೆ, ಸಾಹಿತ್ಯಸೇವೆ, ಧಾರ್ಮಿಕ ಪ್ರಜ್ಞೆ–ಇವುಗಳ ತ್ರಿವೇಣೀ ಸಂಗಮವಾಗಿದೆ. ಈ ಸುಂದರ ಸಮಾವೇಶ ನಿಜಕ್ಕೂ ಅಪೂರ್ವ. ಸಿದ್ಧರಾಮನಲ್ಲಿರುವ ಎಣೆಯಿಲ್ಲದ ಸಮತಾಗುಣವನ್ನು ಕೊಂಡಾಡುತ್ತ ಸಿದ್ಧಯ್ಯ ಪುರಾಣಿಕರು ತಮ್ಮ 'ಶರಣಚರಿತಾಮೃತ'ದಲ್ಲಿ ಹೀಗೆಂದಿದ್ದಾರೆ—'ಸಮತೆಯನೆ ಹಾರೈಸಿ, ಸಮತೆಯನೆ ಅರಸಿ, ಸಮತೆಯನೆ ಸಾಧಿಸಿ, ಸಮತೆಯೇ ಸಾಕಾರವಾದಂತಿದ್ದ ಸಿದ್ಧರಾಮಯ್ಯ ಶರಣಸಂದೋಹದಲ್ಲಿ ತನದೇ ವಿಶಿಷ್ಟವ್ಯಕ್ತಿತ್ವದಿಂದ ಬೆಳಗಿದ್ದಾನೆ. ಆದರೆ ಈ ಸಮತೆ ಯಾರದೇ ಅನುಗ್ರಹದಿಂದಾಗಲಿ ಸಿಕ್ಕಿಲ್ಲ. ಅವನಿಗೆ ಅದು ಸತತ ಸಾಧನೆಯ ಫಲ. ಅವನ ಜೀವನವೊಂದು ನಿರಂತರ ಸಾಧನೆಯ ಸುಂದರ ಕಾವ್ಯ.'

(೧೪-೧-೭೯ರ ಮಕರ ಸಂಕ್ರಾಂತಿಯಂದು ಒದಗುವ ಸಿದ್ಧರಾಮ ಜಯಂತಿಯ ಸ್ಮರಣಾರ್ಥ)

ಸಹೃದಯರಲ್ಲಿ ಸೂಚನೆ

ಅಭಿಪ್ರಾಯ ಬರೆಯಲಿಕ್ಕೆ, ಮುನ್ನುಡಿ ಬರೆಯಲಿಕ್ಕೆ ಲೇಖಕರು ತಮ್ಮ ಸ್ವಂತ ಕೃತಿಗಳನ್ನು (ಮುಖ್ಯವಾಗಿ ಹಸ್ತಪ್ರತಿಗಳನ್ನು) ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಪೂರ್ವಭಾವಿ ಒಪ್ಪಿಗೆ ಇಲ್ಲದೆ ಅವರಿಗೆ ಕಳುಹಿಸಬಾರದು. ಗ್ರಂಥಗಳನ್ನು ಓದಿ ಅಭಿಪ್ರಾಯ ನೀಡಲು ಸಮಯಾಭಾವ ಇರುವುದರಿಂದ ಮತ್ತು ಪೂಜ್ಯರು ಪ್ರವಚನ ಪ್ರವಾಸಗಳಲ್ಲಿ ಸದಾ ನಿರತರಾಗುವುದರಿಂದ ಹಸ್ತಪ್ರತಿಗಳನ್ನು ಓದಲು ಸಮಯವಾಗದು; ನಿರಂತರ ಪ್ರವಾಸದಲ್ಲಿ ಹಸ್ತಪ್ರತಿಗಳು ಕಳೆದುಹೋಗುವ ಸಾಧ್ಯತೆಯುಂಟು.

★ ★ ★

ಮೃತ್ಯು ಮುಖವಾದಾಗ ಜ್ಞಾನಿ ನಗುತ್ತಾನೆ; ಅಜ್ಞಾನಿ ಅಳುಕುತ್ತಾನೆ.

—ಶ್ರೀ ರಾಮಕೃಷ್ಣರು

ಮರಣವೇ ಮಹಾನವಮಿ

—ಶ್ರೀ ಅರವಿಂದರು


ದಾನಿಗಳ ಪರಿಚಯ



ದಿವಂಗತ ಟಿ. ದಾಸಪ್ಪನವರು ಮತ್ತು ಶರಣೆ ಕಲ್ಯಾಣಮ್ಮ

ಎನಗೆ ನಾನೆ ಹಗೆ ನೋಡಯ್ಯ ಎನಗೆ ನಾನೆ ಕೆಳೆನೋಡಯ್ಯ
ನಿಮ್ಮ ಸದ್ಭಕ್ತರೊಡನೆ ವಿರೋಧ ಮಾಡಿದೊಡೆ ಎನ್ನ ಕೊಲುವುದಾಗಿ
ನಿಮ್ಮ ಪುರಾತನರಿಗಂಜಿ ಬೆಸಗೊಂಡಡೆ ಎನ್ನ ಕಾಯ್ವುದಾಗಿ
ಅನ್ಯ ಹಗೆ ಎಲ್ಲಿ, ಕೆಳೆಯೆಲ್ಲಿ ?
ಬಾಗಿದ ತಲೆ ಮುಗಿದ ಕೈಯಾಗಿರಿಸು ಕೂಡಲ ಸಂಗಮದೇವಾ !

ಈ ವಚನಕ್ಕೆ ಪ್ರತಿರೂಪವಾಗಿ ಬಾಗಿದ ತಲೆ ಮುಗಿದ ಕೈಗಳ ವಿನಯ ಭಂಡಾರಿಯಾಗಿ, ಅಜಾತ ಶತ್ರುವಾಗಿರುವವರು ಶರಣೆ ಕಲ್ಯಾಣಮ್ಮ. ನೂಲಿನ ಒಂದು ಬಿಳಿಯ ಸೀರೆಯನ್ನುಟ್ಟು, ಹಣೆಯ ಮೇಲೆ ಮೂರೆಳೆ ಭಸಿತವನ್ನಿಟ್ಟು ಇದಿರಾದರೆ ಯಾರೋ ಸಾಮಾನ್ಯ ಬಡವರೆಂದೇ ತಿಳಿಯಬಹುದು. ಅಂಥವರು ಹತ್ತು ಸಾವಿರದ ಒಂದು ರೂಪಾಯಿಗಳ ನೋಟುಗಳ ಕಟ್ಟನ್ನು ಎದುರಿಗಿರಿಸಿದರೆ ಆಶ್ಚರ್ಯಗಳಲ್ಲಿ ಒಂದು ಆಶ್ಚರ್ಯವಲ್ಲವೆ? ಆಧ್ಯಾತ್ಮ ಪ್ರವೃತ್ತಿ, ಸರಳತೆ, ಆದರ್ಶಗಳ ಪ್ರತಿರೂಪವಾದ ಕಲ್ಯಾಣಮ್ಮನವರು ಮೈಸೂರಿನ ನಿವಾಸಿಗಳು. ದಿವಂಗತ ಟಿ. ದಾಸಪ್ಪನವರ ಪತ್ನಿ. ಶರಣರಾದ



ಕಾಣಿಕೆ ಸಮರ್ಪಿಸಿ ಪಾದಪೂಜೆ ಮಾಡುತ್ತಿರುವ ಶರಣೆ ಕಲ್ಯಾಣಮ್ಮನವರು

ತಿಮ್ಮರಾಯಪ್ಪ ಮತ್ತು ಸಿಂಗಾರಮ್ಮ ಶರಣ ದಂಪತಿಗಳು. ಪ್ರಾಮಾಣಿಕ ಸತ್ಯಶುದ್ಧ ಜೀವನ, ದಾಸೋಹ ಭಾವದಿಂದ ಶೋಭಿತರಾಗಿ ಬಾಳಿದವರು. ತಮ್ಮ ಪುತ್ರ ದಾಸಪ್ಪನವರ ಪತ್ನಿಯಾಗಿ ಕಲ್ಯಾಣಮ್ಮನನ್ನು ಮನೆ ತುಂಬಿಸಿಕೊಂಡರು. ಕಲ್ಯಾಣಮ್ಮನವರಿಗೆ ಒಬ್ಬನೇ ಒಬ್ಬ ಮುತ್ತಿನಂತಹ ಸದ್ಗುಣಿಯಾದ ಮಗ ಡಿ. ಶಿವಪ್ಪ. ಅವರು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಒಂದು ದಿನ ಕಾಯಿಲೆಯಿಂದಾಗಿ ತೀರಿಕೊಂಡಾಗ ಕಲ್ಯಾಣಮ್ಮನವರ ಮನಸ್ಸಿಗಾದ ನೋವು ಅಸದಳ. ವಂಶದ ಲತೆ ಬಾಡಿತೆಂಬ ವ್ಯಥೆ. ಆದರೆ ಅವರು ಜ್ಞಾನಿಗಳು. ಮನಸ್ಸನ್ನು ನಿಯಂತ್ರಿಸಿಕೊಂಡು ಧ್ಯಾನ, ಪೂಜೆ, ಸತ್ಸಂಗದಲ್ಲಿ ತಲ್ಲೀನರಾದರು. ಶ್ರೀ ಕೃಷ್ಣಾನಂದ ಸ್ವಾಮೀಜಿಯವರಿಂದ ಮಂತ್ರೋಪದೇಶ ಹೊಂದಿ ಅಂತರ್ಮುಖಿಗಳಾದರು. ತಮ್ಮ ಮುದ್ದು ಮಗ ಶಿವಪ್ಪನ ಅಕಾಲಿಕ ವಿಯೋಗದ ನೋವನ್ನು ಮರೆಯಲೋಸುಗ ಈ ದಾನಕ್ಕೆ ಮುಂದಾಗಿದ್ದಾರೆ. ಅವರ ಹೆಸರಿನಲ್ಲಿ ಕಟ್ಟಲ್ಪಡುವ ಕೋಣೆಗಾಗಿ ೧೦,೦೦೧ (ಹತ್ತು ಸಾವಿರದ ಒಂದು) ರೂ. ದಾನವಾಗಿ ನೀಡಿದ್ದಾರೆ. ಇಂಥ ಕಲ್ಯಾಣಮ್ಮನವರಿಗೆ ಪರಮಾತ್ಮನು ಆಯುರಾರೋಗ್ಯ ಭಾಗ್ಯವನ್ನು ನೀಡಲೆಂದು, ದಿವಂಗತರಾಗಿರುವ ಮಗ ಡಿ. ಶಿವಪ್ಪ, ಅವರ ಪತಿ ಟಿ. ದಾಸಪ್ಪ ಅತ್ತೆ ಮಾವಂದಿರಾದ ಸಿಂಗಾರಮ್ಮ ಮತ್ತು ತಿಮ್ಮರಾಯಪ್ಪನವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹರಸುವೆವು.

—ಮಾತಾಜಿ

ಶ್ರೀಮತಿ ರಾಜಲಕ್ಷ್ಮಮ್ಮ ಲಕ್ಷ್ಮೀನಾರಾಯಣಗುಪ್ತ

"ಬಸವ ಗಂಗೋತ್ರಿ" ಇದೀಗ ಮೈತುಂಬಿಕೊಂಡು ಬೆಳೆಯುತ್ತಿರುವ ಅಧ್ಯಾತ್ಮಿಕ ಸಂಸ್ಥೆ. ಇಲ್ಲಿ ನಿರ್ಮಾಣವಾಗಲಿರುವ "ಬಸವ ಭಾರತಿ" ವಸತಿ ಸಹಿತ (Residential school) ವಿದ್ಯಾಲಯದಲ್ಲಿ ಕೊಠಡಿಯೊಂದನ್ನು ಕಟ್ಟಿಸಲಿಕ್ಕೆ ೫೦೦೧ ರೂ.(ಐದುಸಾವಿರದ ಒಂದು) ಧನ ಸಹಾಯ ಮಾಡಲು ಸ್ವಯಂ ಇಚ್ಛೆಯಿಂದ ಮುಂದೆ ಬಂದಿದ್ದಾರೆ ಮೈಸೂರಿನ ಸುಪ್ರಸಿದ್ಧ ವ್ಯಾಪಾರಿಗಳಾದ ಲಕ್ಷ್ಮೀನಾರಾಯಣ ಗುಪ್ತರವರು. ವೆಂಕಟೇಶ್ವರ ಟ್ರೇಡಿಂಗ್ ಕಾರ್ಪೊರೇಷನ್ ಎಂಬ ಹೆಸರಿನ ದಿನಸಿ ಅಂಗಡಿಯ ಮಾಲೀಕರಾದ ಶ್ರೀ ಲಕ್ಷ್ಮೀನಾರಾಯಣ ಗುಪ್ತರವರು ಮೂಲತಃ ಕೊಳ್ಳೇಗಾಲ ನಿವಾಸಿಗಳು. ಕೊಳ್ಳೇಗಾಲದ ಶ್ರೀ ಬಿ. ಸೀತಾರಾಮಶೆಟ್ಟಿ ಮತ್ತು ಶ್ರೀಮತಿ ಭಾಗ್ಯಲಕ್ಷ್ಮಮ್ಮನವರ ಸುಪುತ್ರರು. ಸ್ವಂತ ಊರಿನಿಂದ ಮೈಸೂರು ನಗರಕ್ಕೆ ೧೯೬೦ರಲ್ಲಿ ಬಂದು ನೆಲೆಸಿದ ಮಾನ್ಯರು ವ್ಯಾಪಾರದಲ್ಲಿ ಅಭಿವೃದ್ಧಿ ಸಾಧಿಸಿದರು, ಅಪ್ರತಿಮವಾಗಿ.

ಅವರ ಸದ್ಭಾವ ಮತ್ತು ಸೌಜನ್ಯಕ್ಕೆ ತಕ್ಕ ಸತಿ ಶರಣೆ ರಾಜಲಕ್ಷ್ಮಮ್ಮ. ಧರ್ಮ ಸಹಚರಿಣಿಯಾಗಿ ಲಕ್ಷ್ಮೀನಾರಾಯಣ ಗುಪ್ತರ ಮನೆ-ಮನ ಬೆಳಗುತ್ತ, ಗುರುಭಕ್ತಿ, ಧರ್ಮಶ್ರದ್ಧೆಗಳ ಪ್ರತೀಕವಾಗಿದ್ದಾರೆ. ಐದು ಜನ ಗಂಡುಮಕ್ಕಳು; ಇರ್ವರು ಹೆಣ್ಣು



ಶರಣೆ ರಾಜಲಕ್ಷ್ಮಮ್ಮ ಮತ್ತು ಶರಣ ಲಕ್ಷ್ಮೀನಾರಾಯಣ ಗುಪ್ತರವರು

ಮಕ್ಕಳು. ಮೊದಲನೆ ಮಗ ಬಿ. ಎಲ್. ಶ್ರೀನಿವಾಸರು ಬೆಂಗಳೂರಲ್ಲಿ ವ್ಯಾಪಾರ ಮಾಡುತ್ತಿದ್ದಾರೆ; ಎರಡನೆ ಮಗ ಮಂಜುನಾಥರು ಮೈಸೂರಿನ ಅಂಗಡಿಯ ಜವಾಬ್ದಾರಿ ಹೊತ್ತಿದ್ದಾರೆ. ಮೂರನೆಯವಳಾದ ಮಗಳು ಗೀತಾದೇವಿ ಹಿಂದೂಪುರದ ಬ್ರಹ್ಮಯ್ಯ ಶೆಟ್ಟರನ್ನು ಮದುವೆಯಾಗಿದ್ದಾರೆ. ನಾಲ್ಕನೆಯ ಮಗ ರಮೇಶನೂ ವ್ಯಾಪಾರೋದ್ಯಮದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಐದನೆಯ ಸುರೇಶರು ಅಣ್ಣಂದಿರಿಗೆ ವ್ಯಾಪಾರದಲ್ಲಿ ಸಹಾಯಕರಾಗಿದ್ದಾರೆ. ಆರನೆಯವಳಾದ ಪುತ್ರಿ ಉಮಾದೇವಿ, ವಯಸ್ಸಿಗೆ ಮೀರಿದ ಜವಾಬ್ದಾರಿ–ಚಟುವಟಿಕೆಗಳಿಂದ ಪ್ರೀತಿಪಾತ್ರಳಾಗಿ, ಎರಡನೆ ಬಿ. ಎ. ತರಗತಿಯಲ್ಲಿದ್ದಾಳೆ. ಕಡೆಯ ಮಗ ಗೋಪಿನಾಥ ದ್ವಿತೀಯ ಪಿ.ಯು.ಸಿ.ಯಲ್ಲಿದ್ದಾನೆ. ಶ್ರೀ ಲಕ್ಷ್ಮೀನಾರಾಯಣ ಗುಪ್ತ, ಶ್ರೀಮತಿ ರಾಜಲಕ್ಷ್ಮಮ್ಮ ಮತ್ತು ಅವರ ಸಮಸ್ತ ಪರಿವಾರವು ಆಯುರಾರೋಗ್ಯ ಭಾಗ್ಯಗಳನ್ನು ಹೊಂದಲೆಂದು ಹಾರೈಸುವೆವು.

—ಮಾತಾಜಿ

ಮಾತಾಜಿ

ಬೆಳಗುತಿದೆ ಮಾತೃಜ್ಯೋತಿ ನಾಡಿನೆಲ್ಲೆಲ್ಲೂ,
ಬಿತ್ತುತಿದೆ ಧರ್ಮ ತೇಜವ ನರನಾಡಿಗಳಲ್ಲಿ,
ಜ್ಞಾನದಾಹವ, ಹೃದಯ ತಣಿಸುವ ಜ್ಯೋತಿ,
ಅಜ್ಞಾನಗುಹೆಯ ಹೊಕ್ಕು ಭೇದಿಸುವ ಜ್ಯೋತಿ !!

ಅಸಂಖ್ಯಾತ ದೀವಿಗೆಗಳುಂಟು ನಾಡಿನಲ್ಲಿ,
ಎಣ್ಣೆಯಿದೆ ಬತ್ತಿಯಿಲ್ಲ, ಬತ್ತಿಯಿದೆ ಎಣ್ಣೆಯಿಲ್ಲ,
ಭಕ್ತಿಯೆಂಬ ಬತ್ತಿಯನಿಟ್ಟು, ಧರ್ಮವೆಂಬ ಎಣ್ಣೆಯ ಹೊಯ್ದು
ಜ್ಯೋತಿ ತಾ ಉರಿಯುತಿದೆ, ಬೆಳಗುತಿದೆ!

ಅಣ್ಣ ಬಸವಣ್ಣ ಹೊತ್ತಿಸಿದ ಧರ್ಮಜ್ಯೋತಿ,
ಅಕ್ಕಮಹದೇವಿ ಬೆಳಗಿಸಿದ ದಿವ್ಯಜ್ಯೋತಿ,
ಅಸಂಖ್ಯಾತ ಶರಣ-ಶರಣೆಯರು ಹೊತ್ತ ಭವ್ಯಜ್ಯೋತಿ,
ಅಸಾಮಾನ್ಯ ಅಗಣಿತ ಜ್ಞಾನದಾಸೋಹದ ಜ್ಯೋತಿ !

ಎಂದೆಂದಿಗೂ ನಂದಿಹೋಗದ ಜ್ಯೋತಿ
ಎಂದಿಗೂ ಎಲ್ಲೆಲ್ಲೂ ಉರಿಯುವ ಜ್ಯೋತಿ
ಎಲ್ಲರಿಗೂ ನಿರಂತರ ಬೆಳಕು ನೀಡುವ ಜ್ಯೋತಿ
ಎಲ್ಲರಂತರಂಗಗಳಲ್ಲಿ ಬೆಳಗಬೇಕು ಈ ಮಾತಾಜ್ಯೋತಿ.

—ಜಿ. ಆರ್. ಜಗದೀಶಪ್ಪ, ಬಿ. ಎಸ್ಸಿ; ಬಿ. ಇಡಿ.
ಗೊಂಡೇದಹಳ್ಳಿ

ನಗೆಹನಿ

ಪೃಥ್ವಿಯ ಚಲನೆಯನ್ನು ಕುರಿತು ಶಿಕ್ಷಕರು ವರ್ಣಿಸುತ್ತಾ ಕೈಯಲ್ಲಿ ಸೇಬುಹಣ್ಣನ್ನು ಹಿಡಿದು ತಿರುಗಿಸಿದರು. ಹೀಗೆ ಭೂಮಿ ತನ್ನ ಸುತ್ತಲೂ ತಿರುಗುತ್ತಾ, ಸೂರ್ಯನ ಸುತ್ತಲೂ ತಿರುಗುವುದು ಎಂದು ಹೇಳಿದರು. ಆ ನಂತರ ಪರೀಕ್ಷಿಸಲು ಪ್ರಶ್ನೆ ಹಾಕಿದರು:

ತನ್ನ ಅಕ್ಷದ ಸುತ್ತಲೂ ಸಾವಿರ ಮೈಲಿ ವೇಗದಲ್ಲಿ ತಿರುಗುವುದು ಯಾವುದು ?–

ವಿದ್ಯಾರ್ಥಿ ಹೇಳಿದನು : ಸೇಬು ಹಣ್ಣು.

ದೃಷ್ಟಾಂತ ಕಥೆ

ಮಮತೆಯ ಮಕ್ಕಳೇ,

ನೀವೆಲ್ಲರೂ ನೆಪೋಲಿಯನ್ ಬೋನೋಪಾರ್ಟನ ಹೆಸರು ಕೇಳಿದ್ದೀರಿ. ಸುಪ್ರಸಿದ್ಧನಾದ, ವೀರನಾದ ಚಕ್ರವರ್ತಿಯಾಗಿ ಮೆರೆದ ಅವನ ಬದುಕಿನ ಒಂದು ಪ್ರಸಂಗವಿದೆ. ಬಡವರ ಮನೆಯಲ್ಲಿ ಹುಟ್ಟಿದ ಅವನು ತುಂಬಾ ಕಷ್ಟಕಾರ್ಪಣ್ಯಗಳ ನಡುವೆ ಬೆಳೆದ. ಅರೆಹೊತ್ತು ಉಂಡು' ವಿದ್ಯಾರ್ಥಿಜೀವನ ಕಳೆದ. ಅವನ ತಾಯಿಗೆ ಮಧ್ಯಾಹ್ನದ ತಿಂಡಿ ಕೊಡಲು ಏನೂ ಇರುತ್ತಿರಲಿಲ್ಲವಾದ ಕಾರಣ, ಬರಿಗೈಯಲ್ಲಿ ಮಗುವನ್ನು ಶಾಲೆಗೆ ಕಳಿಸುತ್ತಿದ್ದಳು. ಒಂದು ದಿನ ಬಾಲಕನು ಒಂಟಿಯಾಗಿ, ತಿನ್ನಲು ಏನೂ ಇಲ್ಲದೆ ಗಿಡದ ಬೊಡ್ಡೆಯ ಬಳಿ ಚಿಂತಾಕ್ರಾಂತನಾಗಿ ನಿಂತಿದ್ದ. ತೀಕ್ಷ್ಣಮತಿ, ತೇಜಸ್ವಿಯಾಗಿದ್ದ ಬಾಲಕನು ಆ ರೀತಿ ಸಪ್ಪೆಮುಖದಿಂದ ನಿಂತಿರುವುದನ್ನು ಕಂಡು ರೊಟ್ಟಿ-ಶೇಂಗಾ ಮಾರುವ ಸ್ತ್ರೀಯೋರ್ವಳು ಮರುಕದಿಂದ ಮಾತನಾಡಿಸಿದಳು "ಏಕಪ್ಪಾ ಮಗು, ಹೀಗೆ ಚಿಂತಾಕ್ರಾಂತನಾಗಿ ನಿಂತಿರುವೆ. ನಿನಗೇನು ಬೇಕು ಕೊಂಡುಕೋ ಬಾ." "ನನ್ನ ಬಳಿ ದುಡ್ಡಿಲ್ಲ ತಾಯಿ. ನಾವು ತುಂಬಾ ಬಡವರು. ನಮ್ಮ ಅಮ್ಮ ತಿನ್ನಲು ಕೊಡಲು ಏನೂ ಇಲ್ಲದ ಕಾರಣ ಹಾಗೆ ಕಳಿಸಿದ್ದಾಳೆ" ನಿರುತ್ಸಾಹದ ಮುಖದಿಂದ ನುಡಿದ. ಅಂಗಡಿಯಾಕೆಯ ಕರುಳು ಚುರುಕ್ಕೆಂದಿತು. "ಅಯ್ಯೋ ಮಗಾ, ಉಳಿದವರೆಲ್ಲ ತಿಂಡಿ ತಿನ್ನುವಾಗ ನೀನು ನೋಡುತ್ತಾ ನಿಂತರೆ ನನಗೆ ಸಹನೆಯಾಗದು. ತಗೋ ನಿನಗೇನು ಬೇಕೋ ತಿನ್ನು...."

"ದುಡ್ಡು ಕೊಡದೆ ಪುಕ್ಕಟ್ಟೆ ತಿನ್ನಲು ಮನಸ್ಸಾಗದು ತಾಯಿ...." ಬಾಲಕನ ಆತ್ಮಾಭಿಮಾನ ಕಂಡು ಅಂಗಡಿಯವಳು ಅಚ್ಚರಿಪಟ್ಟಳು.

"ನಿನಗೆ ಅನುಕೂಲವಾದಾಗ ಕೊಡುವೆಯಂತೆ. ನಾನು ಲೆಕ್ಕವನ್ನೆಲ್ಲ ಒಟ್ಟಾಗಿ ಇಟ್ಟಿರುವೆ. ಸಾಲವೆಂದೇ ಪಡೆದುಕೋ...," ಒಪ್ಪಿದ ಬಾಲಕ ತನಗೆ ತೀರಾ ಹಸಿವೆಯಾದಾಗಲೆಲ್ಲ ಆಕೆಯಿಂದ ತಿಂಡಿ ಪಡೆಯುತ್ತಿದ್ದ. ಆ ಶಾಲೆಯ ಅಭ್ಯಾಸ ಮುಗಿಯಿತು. ನೆಪೋಲಿಯನ್ ಮುಂದೆ ಅಭ್ಯಾಸಕ್ಕೆ ಹೋದ.

ಒಂದು ದಿನ ಮನೆಯ ಮುಂದೆ ಕುದುರೆ ನಿಂತ ಸದ್ದಾಯಿತು. ಅಜ್ಜಿಯ ಹೆಸರನ್ನು ಕೂಗಿದಂತಾದಾಗ ಹೊರಬಂದಳು. ಮುದುಕಿಯಾಗಿದ್ದಾಳೆ, ಗಡಗಡ ನಡುಗುತ್ತಿದ್ದಾಳೆ, ಕಣ್ಣುಗಳು ಮಂಜಾಗಿವೆ. "ಯಾರಪ್ಪಾ ನೀವು...." ಎಂದಳು, ಹುಬ್ಬೇರಿಸಿನೋಡುತ್ತ.

ಬಂದ ಆಗಂತುಕ ನಮಸ್ಕರಿಸಿ ನುಡಿದ: "ಅಜ್ಜಮ್ಮ, ನಾನು ಶಾಲಾಬಾಲಕನಾಗಿದ್ದಾಗ ನೀನು ನನಗೆ ರೊಟ್ಟಿ, ಶೇಂಗಾ ಮುಂತಾದುವನ್ನು ಕೊಡುತ್ತಿದ್ದೆ. ಆ ತಿಂಡಿಯ ಸಾಲವನ್ನು ತೀರಿಸಲೋಸುಗ ಬಂದಿದ್ದೇನೆ. ತೆಗೆದುಕೋ ನಿನ್ನುಪಕಾರಕ್ಕೆ ಚಿರಋಣಿ." ಬಂಗಾರದ ನಾಣ್ಯಗಳನ್ನು ತುಂಬಿದ್ದ ರೇಷ್ಮೆ ಚೀಲವೊಂದನ್ನು ಕೊಟ್ಟ. ದಿಗ್ಭ್ರಾಂತಳಾದ ಮುದುಕಿ ಫಳಫಳ ಹೊಳೆಯುವ ನಾಣ್ಯಗಳನ್ನು, ತನ್ನ ಬಡತನದ ಬಾಳನ್ನು ಕೊನೆಗೊಳಿಸಿ ಮಂಗಳ ಮುಂಬೆಳಕನ್ನು ಮುಪ್ಪಿನಲ್ಲಿ ತೋರುವ ನಾಣ್ಯಗಳನ್ನು ನೋಡಿದಳು. ಅಚ್ಚರಿಯಿಂದ ಕೇಳಿದಳು: "ಆದಿರಲಿ ಕಂದಾ, ನೀನೀಗ ಏನಾಗಿದ್ದೀಯಾ? ಬಡತನ ಬಗೆಹರಿಯಿತೆ?"

"ಅಜ್ಜಮ್ಮ, ನಾನೀಗ ಈ ದೇಶದ ಚಕ್ರವರ್ತಿ, ನೆಪೋಲಿಯನ್ ಬೋನೋಪಾರ್ಟ್...." ಮುದುಕಿಯ ಕಣ್ಣುಗಳಲ್ಲಿ ಬಾಷ್ಪ ಬಿಂದುಗಳು ಉದುರಿದವು.

"ಮಗಾ, ನನ್ನ ಅಲ್ಪ ಕೊಡುಗೆಯನ್ನು ನೆನಪಿಟ್ಟಿದ್ದೀಯ. ಚಕ್ರವರ್ತಿಯಾದ ನೀನೇ ಬರಬೇಕಿತ್ತೇ? ಯಾರಾದರೂ ಸೇವಕರನ್ನು ಕಳಿಸಿದ್ದರಾಗುತ್ತಿರಲಿಲ್ಲವೇ?"

"ಅಮ್ಮಾ, ನಿನ್ನ ಋಣ ಬಹಳ. ಯಾವ ಕೊಡುಗೆಯಿಂದಲೂ ತೀರಿಸಲಾಗದ್ದು. ಸೇವಕರ ಮುಖಾಂತರ ಕಳಿಸುವುದುಂಟೆ? ಅದಕ್ಕೇ ನಾನೇ ಬಂದೆ ತಾಯಿ....". ಹಣವನ್ನಿತ್ತು, ಕುದುರೆಯನ್ನೇರಿ ನೆಪೋಲಿಯನ್ ಮುಂದೆ ಸಾಗಿದ, ಮುದುಕಿ ಶಿಲಾಪ್ರತಿಮೆಯಂತೆ ನಿಂತುಬಿಟ್ಟಿದ್ದಳು.

ಮಕ್ಕಳೇ, ಈ ಪ್ರಸಂಗದಿಂದ ಕಲಿಯಬೇಕಾದ ಪಾಠಗಳು ಹಲವಿವೆ. (೧) ನೆಪೋಲಿಯನ್ ಎಷ್ಟು ದೊಡ್ಡ ಚಕ್ರವರ್ತಿಯಾದರೂ ತನಗೆ ಸಹಾಯ ಸಲ್ಲಿಸಿದವರನ್ನು ಮರೆಯದೆ ನೆನಪಿಟ್ಟ ಸೌಜನ್ಯ. (೨) ತಾನು ಅನುಕೂಲ ಪರಿಸ್ಥಿತಿಗೆ ಬರುತ್ತಿದ್ದಂತೆಯೇ ಅಹಂಕಾರದಿಂದ ಬೀಗದೆ ಕೃತಜ್ಞತೆ ಸಲ್ಲಿಸಿದ ಸದ್ಗುಣ ಮತ್ತು ಪ್ರಾಮಾಣಿಕತೆ.

(೩) ಸೋಮೇಶ್ವರ ಶತಕದಲ್ಲಿ ಹೇಳುವಂತೆ ಎಳೆಗರು ಎತ್ತಾಗದೆ? ಲೋಕದೊಳ್ ಮಿಡಿ ಪಣ್ಣಾಗದೆ? ಕಾಲಾನುಕಾಲಕ್ಕೆ, ದೇವನೊಲಿದರೆ ಬಡವನು ಬಲ್ಲಿದನಾಗನೇ ಎಂಬುದಕ್ಕೆ ನೆಪೋಲಿಯನ್ ಜೀವಂತ ಉದಾಹರಣೆ.

(೪) ಲೋಕದಲ್ಲಿ ಲೋಕಕ್ಕಾಗಿ ಮಾಡಿದ ಉಪಕಾರವು ಎಂದೂ ಹುಸಿಯಾಗದು. ಅಂಗಡಿಯಾಕೆ ಒಬ್ಬ ಬಡಬಾಲಕನಿಗೆ ಮಾಡಿದ ದಾನ ಅಧಿಕಧಿಕವಾಗಿ ವೃದ್ಧಿಗೊಂಡು ಬಂದು, ತನ್ನ ಮುಪ್ಪಿನಲ್ಲಿ ಬಡತನದ ಬವಣೆ ಕಳೆಯುವಂತೆ ವರಪ್ರಸಾದವಾದುದು ಸರ್ವಜ್ಞನ ಈ ವಚನವನ್ನು ನೆನಪಿಗೆ ತರದೆ?

ಕೊಟ್ಟದ್ದು ತನಗೆ ಬೈಚಿಟ್ಟದ್ದು ಪರರಿಗೆ
ಕೊಟ್ಟದ್ದು ಕೆಟ್ಟತೆನಬೇಡ ಅದು ಮುಂದೆ
ಕಟ್ಟಿಹುದು ಬುತ್ತಿ ಸರ್ವಜ್ಞ ॥

ನಿಮ್ಮೊಲವಿನ ಸೋದರ
ತ್ರಿನೇತ್ರ

ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ಹಾಸನ ಜಿಲ್ಲೆಯ ಹೊಳೆನರಸೀಪುರದ ಮುನಿಸಿಪಲ್ ಪಾರ್ಕಿನ ಮೈದಾನದಲ್ಲಿ 26-11-1978ರಿಂದ ಪರಮ ಪೂಜ್ಯರಾದ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳಿಂದ ವಿಶ್ವಧರ್ಮ ಪ್ರವಚನವು ಅವ್ಯಾಹತವಾಗಿ ಸಾಗುತ್ತಿದೆ. ಪ್ರವಚನವನ್ನಾಲಿಸಲು ಜನರು ಅತ್ಯಧಿಕ ಸಂಖ್ಯೆಯಲ್ಲಿ ಸೇರುತ್ತಿದ್ದು, ಮಧ್ಯಾಹ್ನದ ವೇಳೆ ಮುಮುಕ್ಷುಗಳಿಗಾಗಿ "ತರಂಗಿಣಿ" ಗ್ರಂಥದ ಪಾರಾಯಣ ಸಹ ನಡೆಯುತ್ತಿದೆ. ಎಲ್ಲ ಜಾತಿಮತ ಪಂಥದ ಜನರು ಸೇರಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳ ದಿವ್ಯವಾಣಿಯನ್ನಾಲಿಸಿ ಪುನೀತರಾಗುತ್ತಿದ್ದಾರೆ. ಈ ಪ್ರವಚನದ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಪೂಜ್ಯ ಮಾತೆಯವರು ಜನವರಿ ಒಂದನೆಯ ತಾರೀಖಿಗೆ ಮೈಸೂರಿನಿಂದ ಪ್ರವಚನೆ ಮುಗಿಸಿ ಹೊಳೆನರಸೀಪುರಕ್ಕೆ ಆಗಮಿಸಲಿದ್ದಾರೆ. ಜನರು ತುಂಬಾ ಭಕ್ತಿ-ಶ್ರದ್ಧೆ-ಕಾತುರಗಳಿಂದ ಮಾತೆಯವರ ಬರವಿಗಾಗಿ ಕಾಯುತ್ತಲಿದ್ದಾರೆ.

ಮೈಸೂರು ನಗರದಲ್ಲಿ ಪ್ರವಚನ ಮುಕ್ತಾಯ: ಅಕ್ಟೋಬರ್ ದಿನಾಂಕ 22ರಂದು ಮೈಸೂರು ನಗರದ ಪುರಭವನದ ಮೈದಾನದಲ್ಲಿ ಪ್ರಾರಂಭವಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯರ ಪ್ರವಚನವು ಅವ್ಯಾಹತವಾಗಿ ಎರಡು ತಿಂಗಳು ಹತ್ತು ದಿವಸಗಳ ಕಾಲ ನಡೆದು 31-12-78ರಂದು ಮಂಗಲಗೊಳ್ಳಲಿದೆ. ಸಂಸ್ಕೃತಿ-ಶಿಕ್ಷಣ-ಸಂಸ್ಕಾರಗಳಲ್ಲಿ ಮುಂದಿರುವ ಮೈಸೂರು ಜನತೆ ಸಹಸ್ರಾರು ಸಂಖ್ಯೆಯಲ್ಲಿ ನೆರೆದು ಪೂಜ್ಯರ ಜ್ಞಾನಾಮೃತವನ್ನು ಪಾನ ಮಾಡಿದರು.

ಇತ್ತೀಚಿನ ಪ್ರಕಟಣೆಯಾದ "ನುಡಿನೈವೇದ್ಯ" ಕೃತಿಯೂ ಮೈಸೂರಿನಲ್ಲಿ ಮುದ್ರಣಗೊಂಡು, ಪ್ರಕಾಶಿಸಲ್ಪಟ್ಟಿತು. ಮೈಸೂರು ನಗರದ ಇತಿಹಾಸದಲ್ಲೇ ಸೇರದಷ್ಟು ಜನ ಸಂಖ್ಯೆಯಲ್ಲಿ ಸದ್ಭಕ್ತರು ನೆರೆದು, ಪ್ರವಚನ ಜ್ಞಾನಬೆಳಕಿನಲ್ಲಿ ತಮ್ಮ ಬಾಳ ಹಣತೆಗಳನ್ನು ಹೊತ್ತಿಸಿಕೊಂಡರು. ಪೂಜ್ಯ ಮಾತಾಜಿ ಭಾನುವಾರ 31-12-78ಕ್ಕೆ ಪ್ರವಚನ ಮುಗಿಸಿ 1-1-1979ಕ್ಕೆ ಬೀಳ್ಕೊಂಡು ಮೈಸೂರು ನಗರದಿಂದ ಹೊಳೆನರಸೀಪುರದಲ್ಲಿ ಪ್ರವಚನದಲ್ಲಿ ಭಾಗಿಯಾಗಲು ಪ್ರಯಾಣ ಬೆಳೆಸಿದರು.

ವರದಿ : ಷಡಕ್ಷರಿ ಸ್ವಾಮಿ

ವಿವೇಕಾನಂದ ವಾಣಿ

ಬಡವರಿಗಾಗಿ ಬೆಳಕು ತನ್ನಿ, ಆದರೆ ಶ್ರೀಮಂತರಿಗಾಗಿ ಹೆಚ್ಚು ಬೆಳಕು ತನ್ನಿ; ಏಕೆಂದರೆ ಶ್ರೀಮಂತರಿಗೆ ಬಡವರಿಗಿಂತಲೂ ಹೆಚ್ಚುಬೆಳಕು ಬೇಕಾಗುತ್ತದೆ. ಪಾಮರರಿಗಾಗಿ ಬೆಳಕು ತನ್ನಿ, ಆದರೆ ಕಲಿತವರಿಗಾಗಿ ಹೆಚ್ಚು ಬೆಳಕು ತನ್ನಿ; ಏಕೆಂದರೆ ನಮ್ಮ ಯುಗದ ಶಿಕ್ಷಣದಲ್ಲಿ ಮಿಥ್ಯಾದಂಭವೇ ಹೆಚ್ಚಾಗಿದೆ. ಆದ್ದರಿಂದ ಎಲ್ಲರಿಗಾಗಿ ಬೆಳಕು ತನ್ನಿ. ಉಳಿದದ್ದನ್ನು ದೇವರ ಇಚ್ಛೆಗೆ ಬಿಡಿ; ಏಕೆಂದರೆ ಪರಮಾತ್ಮ ಹೇಳಿದ್ದಾನೆ: 'ಕರ್ಮಣ್ಯೇ ವಾಧಿಕಾರಸ್ತೇ'.

(ಸಂಗ್ರಹ) ಸು. ಷ. ಸ್ವಾ.


೧೯೭೯ರ ಸಾಲಿನ ಶರಣರ ಜಯಂತಿಗಳು ಮತ್ತು ಹಬ್ಬಗಳು

೧.	ಸಿದ್ಧರಾಮ ಜಯಂತಿ	(ಮಕರ ಸಂಕ್ರಮಣ)	೧೪-೧-೧೯೭೯
೨.	ಸ್ವಾಮಿ ವಿವೇಕಾನಂದ ಜಯಂತಿ		೨೦-೧-೧೯೭೯
೩.	ಮಾಧ್ವ ನವಮಿ		೫-೨-೧೯೭೯
೪.	ಸರ್ವ ಶರಣರ ದಿನಾಚರಣೆ	(ಮಹಾಶಿವರಾತ್ರಿ)	೨೫-೨-೧೯೭೯
೫.	ಮಾತಾಜಿ ಜಯಂತಿ		೧೩-೩-೧೯೭೯
೬.	ಅಲ್ಲಮ ಪ್ರಭು ಜಯಂತಿ	(ಯುಗಾದಿ ಪ್ರತಿಪದೆ)	೨೯-೩-೧೯೭೯
೭.	ಮಹಾವೀರ ಜಯಂತಿ		೧೦-೪-೧೯೭೯
೮.	ಅಕ್ಕಮಹಾದೇವಿ ಜಯಂತಿ	(ದವನದ ಹುಣ್ಣಿಮೆ)	೧೩-೪-೧೯೭೯
೯.	ಶಿವಾಜಿ ಜಯಂತಿ		೨೮-೪-೧೯೭೯
೧೦.	ಬಸವ ಜಯಂತಿ	(ಅಕ್ಷಯ ತೃತೀಯ)	೨೯-೪-೧೯೭೯
೧೧.	ರಾಮಾನುಜ ಜಯಂತಿ		೧-೫-೧೯೭೯
೧೨.	ಶಂಕರ ಜಯಂತಿ		೧-೫-೧೯೭೯
೧೩.	ವಾಸವಿ ಜಯಂತಿ		೬-೫-೧೯೭೯
೧೪.	ಬುದ್ಧ ಜಯಂತಿ		೧೨-೫-೧೯೭೯
೧೫.	ಬಸವ ಲಿಂಗೈಕ್ಯ ದಿನಾಚರಣೆ	(ಶ್ರಾವಣ ಶುದ್ಧ ಪಂಚಮಿ)	೨೮-೭-೧೯೭೯
೧೬.	ಸ್ವಾತಂತ್ರ್ಯೋತ್ಸವ		೧೫-೮-೧೯೭೯
೧೭.	ಸ್ವಾಮಿ ಲಿಂಗಾನಂದ ಜಯಂತಿ	(ಗಣೇಶ ಚತುರ್ಥಿ)	೨೬-೮-೧೯೭೯
೧೮.	ಕಲ್ಯಾಣ ಕ್ರಾಂತಿ ದಿನಾಚರಣೆ	(ಮಹಾನವಮಿ)	೩೦-೯-೧೯೭೯
೧೯.	ಗಾಂಧೀಜಯಂತಿ		೨-೧೦-೧೯೭೯
೨೦.	ಚನ್ನ ಬಸವ ಜಯಂತಿ	(ಬಲಿಪಾಡ್ಯಮಿ)	೨೨-೧೦-೧೯೭೯
೨೧.	ನಿಜಗುಣ ಶಿವಯೋಗಿ ಜಯಂತಿ		೧೩-೧೧-೧೯೭೯
೨೨.	ಮಾದಾರ ಚನ್ನಯ್ಯ ಜಯಂತಿ		೩-೧೨-೧೯೭೯

(ಬೆಂಗಳೂರು ಮುದ್ರಣಾಲಯದ ಕ್ಯಾಲೆಂಡರ್ ಆಧರಿಸಿ)

ವಿಶ್ವ ಕಲ್ಯಾಣ ಮಿಷನ್, ಬಸವ ಮಂಟಪ

೨೪, ಕಾರ್ಡ್ ರೋಡ್, ಎರಡನೆಯ ಬ್ಲಾಕ್, ರಾಜಾಜಿನಗರ, ಬೆಂಗಳೂರು ೧೦



ಮೈಸೂರು ನಗರದಲ್ಲಿ ಪ್ರವಚನ ನಡೆಯುವಾಗ ಜಗನ್ಮೋಹನ ಅರಮನೆಯಲ್ಲಿ
ದಿನಾಂಕ 10-12-1978ರಂದು ಸಾಮೂಹಿಕ ಪೂಜೆ ಜರುಗಿದ ಚಿತ್ರ

Correspond to : **Phone : 82335**

BASAVA MANTAPA
No. 24, Chord Road, 2nd Block, Rajajinagar
BANGALORE-560 010